MOTION OF THANKS TO THE GOVERNOR'S ADDRESS
(Debate Continued)

† ಶ್ರೀ ಎಚ್. ಟಿ. ಕೃಷ್ಣಪ್ಪ (ನಾಗಮಂಗಲ).—ಸನ್ಮಾನ್ಯ ಅಧ್ಯಕ್ಷರೇ, ನಿನ್ನೆ ದಿವಸ ಈಗಿನ ತುರ್ತುಪರಿಸ್ಥಿತಿ ಬಗ್ಗೆ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಏನು ವಾದವನ್ನು ಈ ಸದನದ ಮುಂದೆ ಮಂಡಿಸಿದರೋ ಅದರ ಬಗ್ಗೆ ನಾನು ಕೆಲವಾರು ಮಾತುಗಳನ್ನು ಹೇಳಬೇಕೆಂದಿಚ್ಛಿಸುತ್ತೇನೆ. ಈ ತುರ್ತು ಪರಿಸ್ಥಿತಿಗೆ ಕಾರಣ ಸಂವಿಧಾನಾತ್ಮಕವಾಗಿ ಅಸ್ತಿತ್ವಕ್ಕೆ ಬಂದಂಥ ಸರ್ಕಾರಗಳನ್ನು ಉರುಳಿಸುವುದಕ್ಕೆ ಬೇಕಾದಂಥ ಒಂದು ಪ್ರಯತ್ನವನ್ನು ಈ ದೇಶದ ರಾಜಕೀಯ ಪಕ್ಷಗಳು ಮಾಡಿದ್ದು ಆಗಿದೆ. ಅವರು ಮಾತನಾಡುತ್ತಾ ಈ ದೇಶದಲ್ಲಿ ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೋಸ್ಕರ ಈಗಿನ ಒಂದು ತುರ್ತು ಪರಿಸ್ಥಿತಿಯನ್ನು ತರಬೇಕಾಯಿತು ಎನ್ನುವ ಒಂದು ವಾದವನ್ನು ಈ ಸಭೆಯಲ್ಲಿ ಮಂಡಿಸಿದರು. ಮಾನ್ಯ ಶ್ರೀ ಕೆ. ಪುಟ್ಟಸ್ವಾಮಿಯವರು ಈ ಒಂದು ಅವರ ವಾದಕ್ಕೆ ಸಮರ್ಥನೆಯನ್ನು ಕೊಡುತ್ತಾ ಇರುವ ಕಾಲದಲ್ಲಿ ಕೆಲವಾರು ಕಾರಣಗಳನ್ನು ಕೊಟ್ಟರು. ಅವು ನಿಜವಾಗಿಯೂ ಸಮರ್ಪಕವಾದುವುಗಳಲ್ಲ, ಸಮಂಜಸವಾದುವುಗಳೂ ಅಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ. ನಮಗೆಲ್ಲರಿಗೂ ಗೊತ್ತಿರುವ ಹಾಗೆ, ಹಿಂದೆ ಬಿಹಾರದಲ್ಲಿ ಜನತಾ ಚಳುವಳಿಯಾಯಿತು ಅದರ ಒಂದು ನೇತೃತ್ವವನ್ನು ಮಾನ್ಯ ಶ್ರೀ ಪೂಜ್ಯ ಜಯಪ್ರಕಾಶ್ ನಾರಾಯಣ್ ಅವರು ವಹಿಸಿಕೊಂಡರು. ಆ ಪ್ರಯತ್ನವಾದುದು ಈ ರಾಷ್ಟ್ರದಲ್ಲಿರತಕ್ಕ ಭ್ರಷ್ಟ ಸರ್ಕಾರಗಳನ್ನು ಮತ್ತು ಆದೇ ಸರ್ಕಾರಗಳನ್ನು ತೆಗೆದುಹಾಕುವುದಕ್ಕೋಸ್ಕರ. ಇಂದೂ ಸಹ ನಾವೂ ಆ ಒಂದು ಚರಿತ್ರೆಯನ್ನು ಮರತಿಲ್ಲ. ಇದು ಕೇವಲ ಕೆಲವು ವರ್ಷಗಳ ಹಿಂದೆ ನಡೆದಂಥ ಘಟನೆ. ಕೇರಳದಲ್ಲಿ ಇಂತಹ ಜನತಾ ಚಳುವಳಿ ಪ್ರಾರಂಭವಾಗಿರಲಿಲ್ಲ. ಈಗ ಪ್ರಧಾನಿಯಾಗಿರುವ ಶ್ರೀಮತಿ ಇಂದಿರಾ ಗಾಂಧಿಯವರೇ ಆಗ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದರು. ಆ ಸಮಯದಲ್ಲಿ ಕೇರಳ ಸರ್ಕಾರದ ಅವಧಿ ಮುಗಿಯುವ ಮುಂಚೆಯೇ ಕೆಲವಾರು ಕ್ಷುಲ್ಲಕ ಕಾರಣಗಳಿಂದ ಆ ಸರ್ಕಾರವನ್ನು ತೆಗೆದುಹಾಕಿದ್ದನ್ನು ನಾವು ಕಂಡಿದ್ದೇವೆ. ಕೇವಲ ಇದು ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರಿಂದ ಆಯಿತು ಎಂಬುದಾಗಿ ಹೇಳುವುದನ್ನು ಖಂಡಿತವಾಗಿ ಒಪ್ಪುವುದಕ್ಕಾಗುವುದಿಲ್ಲ. ಅವರಲ್ಲಿ ರಾಜಕಾರಣ ಆಗಬೇಕೆಂಬ ಬುದ್ಧಿಯಾಗಲೀ, ಅಂತಹ ವಿಚಾರಧಾರೆಯಾಗಲೀ ಇತ್ತೆಂಬುದನ್ನು ಯಾರೂ ಒಪ್ಪುವಂತಿಲ್ಲ, ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ್ ಅವರು ಯಾರೆಂಬುದು ಅವರ ವ್ಯಕ್ತಿತ್ವ ಎಷ್ಟು ಮಹತ್ವದ್ದು ಎಂಬುದು ಈ ಕಡೆ ಮತ್ತು ಆ ಕಡೆ ಕೂತಿರುವವರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಅಂತಹ ಮಹನೀಯರು ಯಾವತ್ತಿಗೂ ರಾಜಕಾರಣಿಯಾಗುವುದಕ್ಕೇ ಆಗಲೀ ಅಥವಾ ಒಂದು ದೊಡ್ಡ ಅಧಿಕಾರಕ್ಕಾಗಲೀ ಆಶೆಪಡುವವರಲ್ಲವೆಂಬ ಅಂಶವನ್ನು ನಾವೆಲ್ಲರೂ ಮನಗಂಡಿದ್ದೇವೆ, ಆಡಳಿತಪಕ್ಷದವರೂ ಸಹ ಮನಗಂಡಿದ್ದಾರೆಂದು ನಾನು ನಂಬಿದ್ದೇನೆ. ಈ ದೇಶದಲ್ಲಿ ಒಳ್ಳೆಯ ಸರ್ಕಾರ ಇರಬೇಕು, ಶುದ್ಧವಾದ ಆಡಳಿತ ಇರಬೇಕು, ಶುದ್ಧವಾದ ಆಡಳಿತವಿದ್ದರೆ ಈ ದೇಶದ ಜನಗಳಿಗೆ ಕ್ಷೇಮ, ಕಲ್ಯಾಣವಾಗುತ್ತದೆನ್ನುವ ಏಕೈಕ ಉದ್ದೇಶ ಅವರಲ್ಲಿ ಬೇರೂರಿತ್ತು. ಕೆಲವಾರು ನಿರ್ದಿಷ್ಟ ಆಪಾದನೆಗಳನ್ನು ಆ ಸರ್ಕಾರದ ಮೇಲೆ ಮಾಡಿ ಆ ಒಂದು ಕಾರಣದಿಂದ ಆ ಸರ್ಕಾರ ಇರಕೂಡದು ಎಂಬುದಾಗಿ ಮಾಡಿದರು. ಅಲ್ಲಿ ಜನತಾ ಚಳುವಳಿ ಎಂಬುದಾಗಿ ಮಾಡಿದ್ದು ನಿಜ; ಆದರೆ ಯಾವ ರಾಜಕೀಯ ಪಕ್ಷಗಳೂ ಇದಕ್ಕೆ ಶಾಮೀಲಾಗಿರಲಿಲ್ಲ. ಈ ವಿಚಾರಗಳನ್ನೆಲ್ಲಾ ಸರಿಯಾಗಿ ಅರ್ಥಮಾಡಿಕೊಂಡರೆ, ನಿಜವಾಗಿಯೂ ಕೂಡ ಮಾನ್ಯ ಶ್ರೀ ಕೆ. ಪುಟ್ಟಸ್ವಾಮಿಯವರು ಏನು ನಿನ್ನೆ ಹೇಳಿದರೋ ಅದು ಸರಿಯಾದ ವಾದವಲ್ಲ ವಿರೋಧಿ ರಾಜಕೀಯ ಪಕ್ಷಗಳು ಸಂವಿಧಾನಾತ್ಮಕವಾಗಿ ಅಸ್ತಿತ್ವಕ್ಕೆ ಬಂದಂಥ ಸರ್ಕಾರವನ್ನು ಷಾರ್ಟ್‌ಕಟ್‌ನಲ್ಲಿ ಅಂದರೆ ತಪ್ಪುದಾರಿಗೆ ಎಳೆದುಕೊಂಡು ಹೋಗಿ ಉರುಳಿಸುವುದಕ್ಕೆ ಪ್ರಯತ್ನ ಮಾಡಿವೆಯೆಂಬುದಾಗಿ ಏನು ವಾದವನ್ನು ಅವರು ನಿನ್ನೆ ಮಾಡಿದರೋ ಅದು ಅಷ್ಟೊಂದು ಸತ್ಯಕ್ಕೆ ದೂರವಾದುದು ಹಾಗೂ ಕ್ಷುಲ್ಲಕವಾದುದೆಂಬುದಾಗಿ ನಾವು ತಿಳಿದುಕೊಳ್ಳಬಹುದು. ಆ ಸರಕಾರಗಳನ್ನು ತೆಗೆದುಹಾಕುವ ಕಾಲದಲ್ಲಿ ಕೇಂದ್ರ ಸರ್ಕಾರ ಒಂದು ನಿರ್ದಿಷ್ಟವಾದ ನಿಲುವನ್ನು ಯಾವಾಗಲೂ ಹಾಕಿಕೊಂಡು ಅದರಂತೆ ನಡೆದುಕೊಂಡು ಬಂದಿಲ್ಲವೆಂದು ನಾನು ಈ ಸಂದರ್ಭದಲ್ಲಿ ಸ್ಪಷ್ಟವಾಗಿ ಹೇಳುತ್ತೇನೆ. ಯಾವ ಸರ್ಕಾರವನ್ನೇ ಆಗಲೀ ವಜಾ ಮಾಡುವುದು, ಮುಂದುವರಿಸುವುದರಲ್ಲಿ ಕೇಂದ್ರ ಸರ್ಕಾರ ಅನುಸರಿಸಿಕೊಂಡು ಬಂದಿರತಕ್ಕ ನೀತಿ ಬಹಳ ವಿಚಿತ್ರವಾಗಿದೆ.

ಕೇಂದ್ರ ಸರ್ಕಾರದ ಅವಲಂಬನೆಯಲ್ಲಿ ಇರತಕ್ಕಂಥ, ಕೇಂದ್ರಸರ್ಕಾರ ಹೇಳಿದಂತೆ ಕೇಳಿಕೊಂಡಿರತಕ್ಕ ಮತ್ತು ಕೇಂದ್ರಸರ್ಕಾರದ ಒಂದು ಮರ್ಜಿಯಲ್ಲಿರತಕ್ಕ ಸರಕಾರಗಳಿಗೆ ಮಾತ್ರ ಹೆಚ್ಚಿನ ಪ್ರೋತ್ಸಾಹವನ್ನು ಕೇಂದ್ರ ಸರ್ಕಾರದವರು ಕೊಟ್ಟಿದ್ದಾರೆ. ಅಂತಹ ಸರ್ಕಾರಗಳು ಎಷ್ಟೇ ಅಪರಾಧಗಳನ್ನು ಮಾಡಿದರೂ ಅವುಗಳನ್ನು ಇನ್ನೂ ಮುಂದುವರಿಸಿಕೊಂಡೇ ಹೋಗುತ್ತಿದ್ದಾರೆ. ಕೇಂದ್ರ ಸರ್ಕಾರದ ನೀತಿ ನಿಯಮಗಳಿಗೆ ವಿರೋಧವಾಗಿ ಮತ್ತು ಕೇಂದ್ರ ಸರ್ಕಾರದಲ್ಲಿ ಯಾವ ಒಂದು ಆಡಳಿತ ಪಕ್ಷ ಇದೆಯೋ ಆ ಒಂದು ಪಕ್ಷಕ್ಕೆ ವಿರೋಧವಾಗಿದ್ದು ಅವರ ನೀತಿ ನಿಯಮಗಳನ್ನು ಪಾಲಿಸಥೆ ವಿರೋಧವಾಗಿ ನಡೆಯತಕ್ಕ ಸರ್ಕಾರಗಳ ಬಗ್ಗೆ ಮತ್ತು ಅವರ ಒಂದು ಆಡಳಿತದ ಬಗ್ಗೆಯೂ ಸವತಿ ಮಾತ್ಸರ್ಯದಂತೆ ಅವನ್ನು ನೋಡಿ ಅಲ್ಲಿ ಹೆಚ್ಚಿಗೆ ಅನ್ಯಾಯ ನಡೆಯುತ್ತಿದೆಯೆಂದು ಅಪಾದನೆಯನ್ನು ಹೊರಿಸಿ ಆ ಸರ್ಕಾರವನ್ನು ಉರುಳಿಸುವುದಕ್ಕೂ ಪ್ರಯತ್ನ ಮಾಡಿದ್ದಾರೆ. ಇದಕ್ಕೊಂದು ಉದಾಹರಣೆಯಾಗಿ ಕೇರಳ ಸರ್ಕಾರವನ್ನು ಕುರಿತು ಮಾತನಾಡಿದ್ದೇನೆ. ಕಲವಾರು ಘಟನೆಗಳು ನಡೆಯುವ ಸನ್ನಿವೇಶದಲ್ಲಿ ಅಲ್ಲೊಂದು ಇಲ್ಲೊಂದು ಸ್ವಲ್ಪ ಮಟ್ಟಿನ ವ್ಯತ್ಯಾಸ ಇರಬಹುದು. ಆದರೆ ಕೇಂದ್ರ ಸರ್ಕಾರದ ಉದ್ದೇಶವೇನೋ ಕಲವಾರು ವಿಚಾರಗಳಲ್ಲ ಸರಿಯಾಗಿರಬಹುದು. ಇತ್ತೀಚೆಗೆ ತಮಿಳುನಾಡು ಸರ್ಕಾರ ಉರುಳಿಸಿದ್ದೂ ಕೂಡ ರಾಜಕೀಯ ಕಾರಣದಿಂದಾಗಿದೆಯೆಂದು ಹೇಳಿದರ ಯಾರೂ ಕೂಡ ತಪ್ಪಾಗಿ ತಿಳಿಯುವುದಿಲ್ಲ. ಈಗ ಒಂದು ವಿಷಯ. ಕೇರಳ ಸರ್ಕಾರವನ್ನು ಮುಂದುವರಿಸುವುದಕ್ಕೆ ಕಾರಣ, ಪಾರ್ಲಿಮೆಂಟನ್ನು ಒಂದು ವರ್ಷ ಮುಂದುವರಿಸಿರುವುದಕ್ಕೆ ಕಾರಣ ಡಿ. ಎಂ. ಕೆ. ಸರ್ಕಾರವನ್ನು ಉರುಳಿಸುವುದಕ್ಕೆ ಕಾರಣವೇನೆಂಬುದನ್ನು ವಿಚಾರವಂತರು ಅರ್ಥಮಾಡಿಕೊಳ್ಳಬಹುದು. ಒಟ್ಟಿನಲ್ಲಿ ಈಗ ಜನತಾ ಚಳುವಳಿ ಪ್ರಾರಂಭವಾಯಿತು. ಜನತಾ ಚಳುವಳಿ ವಿರೋಧಪಕ್ಷದವರ ಚಳುವಳಿ ಎನ್ನುವ ವಾದ, ಆ ಒಂದು ಸಂದರ್ಭದಲ್ಲಿ ಆ ಒಂದು ಹೆಸರಿನಲ್ಲಿ ಇಂತಹ ತುರ್ತುಪರಿಸ್ಥಿತಿ ಘೋಷಣೆ ಹೊರಡಿಸಿದ್ದಾರೆಂದು ಹೇಳುವುದನ್ನು ನಾವು ನಿಜವಾಗಿ ಅರ್ಥ ಮಾಡಿಕೊಂಡರೆ, ಅದನ್ನು ಸ್ಮರಿಸಿದರೆ ನನ್ನ ವಾದಕ್ಕೆ ಹೆಚ್ಚಿಗೆ ಪುಷ್ಟಿ ಕೊಡತ್ತದೆಂದು ನಾನು ತಿಳಿದಿದ್ದೇನೆ. ಆ ಒಂದು ತುರ್ತುಪರಿಸ್ಥಿತಿಯನ್ನು ರಾಷ್ಟ್ರದಲ್ಲಿ ಹೇರಿದ್ದು ಯಾವಾಗ ಎಂದರೆ ಪ್ರಧಾನಿಯವರ ಚುನಾವಣೆಯ ಮೊಕದ್ದಮೆ ಅಲಹಬಾದ್ ಕೋರ್ಟಿನಲ್ಲಿ ತೀರ್ಮಾನವಾದ ಮೇಲೆ, ಆದರೆ ಈಗಿನ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಿರುವುದಕ್ಕೆ ಇವರು ಕೊಟ್ಟಿರುವ ಕಾರಣ ರಾಜಕೀಯ ವಿರೋಧಿ ಪಕ್ಷಗಳು ಸಂವಿಧಾನವನ್ನು ಮೀರಿ ಹಾಗೂ ಅದರ ಕಾನೂನುಗಳನ್ನು ಮುರಿಯುವ ಪ್ರಯತ್ನವನ್ನು ನಡೆಸಿದಂಥ ಸನ್ನಿವೇಶದಲ್ಲಿ ನಿಮಗೆ ಏನು ಮಾಡುವುದಕ್ಕೂ ತೋಚದೆ ಇಂತಹ ಒಂದು ತುರ್ತುಪರಿಸ್ಥಿತಿ ಘೋಷಣೆಯನ್ನು ಹೇರಬೇಕಾಯಿತು. ಆದರೆ ಈಗ ಬಂಧನದಲ್ಲಿರತಕ್ಕ ವಿವಿಧ ರಾಜಕೀಯ ಪಕ್ಷದ ನಾಯಕರ ಮೇಲೆ ಇಲ್ಲದಸಲ್ಲದ ಆರೋಪಣೆಗಳನ್ನು ಮಾಡಿ ಅವರು ದೇಶದ್ರೋಹ ಹಾಗೂ ಸಮಾಜಘಾತುಕ ಕೃತ್ಯಗಳನ್ನು ಮಾಡಿದ್ದಾರೆಂದು ಹೇಳಿದ್ದಾರೆ. ಇವರಲ್ಲಿ ನಿಜವಾಗಿ ಸ್ಪಷ್ಟವಾದ ಸಾಕ್ಷಿ, ಸಾಹಿತ್ಯ ಇದ್ದರೆ ಅವುಗಳ ಬಗ್ಗೆ ಅಂತಹವರನ್ನು ವಿಚಾರ ಮಾಡಿ ಅವರ ಒಂದು ಅಪವಾದಕ್ಕೆ ಅನುಗುಣವಾಗಿ ಅವರನ್ನು ಶಿಕ್ಷಿಸಬಹುದು. ಅಂತಹ ಘೋರ ಅಪವಾದವನ್ನು ಮಾಡಿದ್ದರೆ, ಅಂತಹವರನ್ನು ಗಲ್ಲಿಗೂ ಸಹ ಹಾಕಬಹುದು. ಆದ್ದರಿಂದ ಈಗ ಬಂಧನದಲ್ಲಿಟ್ಟಿರುವವರನ್ನು ಯಾವ ರೀತಿಯಲ್ಲಿಯೂ ವಿಚಾರ ಮಾಡದೆ ಅವರನ್ನು ಇನ್ನೂ ಬಂಧನದಲ್ಲಿಟ್ಟಿರುವುದನ್ನು ನೋಡಿದರೆ, ಈ ಸರ್ಕಾರ ಸತ್ಯವನ್ನು ಮರೆ ಮಾಚುವುದಕ್ಕೆ ಎಷ್ಟು ಮಟ್ಟಿಗೆ ನಿರತರಾಗಿದ್ದಾರೆ, ಸತ್ಯವನ್ನು ಹೇಳುವುದಕ್ಕೆ ಹೆದರುತ್ತಾರೆಂಬುದಾಗಿ ನಾವು ಅರ್ಥ ಮಾಡಿಕೊಳ್ಳಬಹುದು. ಸುಳ್ಳನ್ನು ತಿರುಗಿಸಿ ಅದನ್ನೇ ಸತ್ಯವೆಂದು ನಮ್ಮ ಮುಂದೆ ತೋರಿಸುವ ಪ್ರಚಾರಕಾರ್ಯವನ್ನು ಇವರು ಮೊದಲಿನಿಂದಲೂ ಮಾಡುತ್ತಿದ್ದಾರೆ. ಕೇಂದ್ರ ಸರ್ಕಾರವೂ ಸಹ ಅದೇ ರೀತಿ ಮಾಡಿಕೊಂಡು ಬಂದಿದೆ. ಕೇಂದ್ರ ಸರ್ಕಾರವನ್ನೇ ಎಲ್ಲ ವಿಚಾರಗಳಲ್ಲಿಯೂ ಅವಲಂಬಿಸಿಕೊಂಡು ಬಂದಿರತಕ್ಕ ಸರ್ಕಾರಗಳು ಇದೇ ರೀತಿಯಾಗಿ ಮಾಡಿಕೊಂಡು ಬರುತ್ತಿವೆ. ಈ ಸಮಯದಲ್ಲಿ ನಾನು ಒಂದು ವಿಚಾರವನ್ನು ಬಹಳ ವ್ಯಸನದಿಂದ ಹೇಳಬೇಕಾಗುತ್ತದೆ. ಅದು ಏನೆಂದರೆ ಪತ್ರಿಕೆಗಳ ಮೇಲೆ ಹೇರಿರತಕ್ಕ ಒಂದು ಪ್ರತಿಬಂಧಕಾಜ್ಞೆ. ಪತ್ರಿಕೆಗಳ ಮೇಲೆ ಹಾಕಿರತಕ್ಕ ನಿಷೇಧವೇನಿದೆಯೋ ಅದು ಪ್ರಜಾಪ್ರಭುತ್ವವನ್ನು ಉಳಿಸುವುದಕ್ಕೆ ಹಾಗೂ ಬೆಳೆಸುವುದಕ್ಕೆ ಮಾಡಿರತಕ್ಕಂಥ ಒಂದು ಆಜ್ಞೆಯೆಂಬುದಾಗಿ ಯಾರಾದರೂ ಪ್ರತಿಸಾಧಿಸಿದರೆ ಅಂತಹವರು ನಿಜವಾಗಿ ದೇಶದ್ರೋಹ ಮಾಡುತ್ತಿದ್ದಾರೆ, ಮತ್ತು ಅಂತಹವರು ಆತ್ಮವಂಚನೆ

ಮಾಡಿಕೊಂಡು ಮಾತನಾಡುತ್ತಿದ್ದಾರೆಂಬುದಾಗಿ ನಾನು ಹೇಳುತ್ತೇನೆ. ಈ ಸದನದಲ್ಲಿ ಅವರು ಇಂದ್ದಂಥ ಜಾಗ ಕೂಡ ಬದಲಾಗಿದೆ. ಅವರನ್ನು ಸ್ವರ್ಗಕ್ಕೆ ಕಳುಹಿಸಿದ್ದಾರೆ. ಅವರು ಸ್ವರ್ಗಸ್ಥರಾಗಿದ್ದಾರೆ. ಪ್ರಜಾಪ್ರಭುತ್ವದ ಆಧಾರಸ್ತಂಭಗಳಲ್ಲಿ ಒಂದಾದಂಥ ಪತ್ರಿಕೋದ್ಯಮಿಗಳವರ ಕಂಬ ಕಿತ್ತು ಹಾಕಿ ಅವರನ್ನು ಅಟ್ಟದಮೇಲೆ ಹಾಕಿದ್ದಾರೆ.

ಅಧ್ಯಕ್ಷರು.—ಆದಕ್ಕೆ ಅವರು ಜವಾಬ್ದಾರರು ಅಲ್ಲ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅವರಿಗೆ ಸರಿಯಾಗಿ ಕೇಳಿಸುತ್ತಿಲ್ಲವೆನ್ನುವ ಬಗ್ಗೆ ದೂರುಗಳು ಬಂದಿದ್ದವು.

ಶ್ರೀ ಡಿ. ದೇವರಾಜ್ ಅರಸು.—ಮಾನ್ಯ ವಿರೋಧ ಪಕ್ಷದ ನಾಯಕರು ಹೇಳುತ್ತಿರತಕ್ಕಂಥ ಕೆಲಸ ಸರ್ಕಾರದವರು ಮಾಡಿರತಕ್ಕಂದ ಕೆಲಸವಲ್ಲ, ಅದರ ಬಗ್ಗೆ ಈಗಾಗಲೇ ಅಧ್ಯಕ್ಷರವರು ಹೇಳಿದ್ದಾರೆ. ಮಾನ್ಯ ಸದಸ್ಯರು ಹೇಳುತ್ತಿರುವುದು ಅಧ್ಯಕ್ಷರವರ ಕಾರ್ಯದ ಮೇಲೆ ಆಕ್ಷೇಪಣೆ ಹೋರಿಸತಕ್ಕಂಥ ಪ್ರಶ್ನೆ ಆಗಿದೆ ಯಾರು ಎಲ್ಲಿ ಕೂಡಬೇಕು, ಬಿಡಬೇಕು ಎನ್ನುವ ಬಗ್ಗೆ ಅವರು ನಿರ್ಧಾರ ತೆಗೆದುಕೊಳ್ಳುತ್ತಾರೆ. ಅದು ಅಧ್ಯಕ್ಷರಿಗೆ ಇರತಕ್ಕಂಥ ಅಧಿಕಾರ. ಆದುದರಿಂದ ಮಾನ್ಯ ಸದಸ್ಯರು ಅದರ ಮೇಲೆ ಹೆಚ್ಚಿಗೆ ಮಾತನಾಡುವುದಾದರೆ ಅಧ್ಯಕ್ಷರ ಕಾರ್ಯದ ಮೇಲೆಯೇ ಅದು ರಿಫ್ಲೆಕ್ಷನ್ ಆಗುತ್ತದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ನಾನು ಆ ಭಾವನೆಯಿಂದ ಹೇಳಲಿಲ್ಲ. ಅಧ್ಯಕ್ಷರೇ, ಈಗ ರಾಜ್ಯಪಾಲರ ಭಾಷಣದ 3ನೇ ಪುಟದಲ್ಲಿ, "ರಾಷ್ಟ್ರೀಯ ತುರ್ತು ಪರಿಸ್ಥಿತಿಯನ್ನು ಘೋಷಿಸಿ ರಾಷ್ಟ್ರದ ಅಭಿವೃದ್ಧಿಗಾಗಿ 20 ಅಂಶಗಳ ಆರ್ಥಿಕ ಕಾರ್ಯಕ್ರಮವನ್ನು ಜಾರಿಗೆ ತಂದಿರುವ ನಮ್ಮ ಪ್ರಧಾನಿಯವರ ಚೈತನ್ಯಪೂರ್ಣ ನಾಯಕತ್ವವೇ........." ಎಂದು ಮುಂದೆ ಬೇರೆ ವಿಷಯ ಬರುತ್ತದೆ. ಇಲ್ಲಿ ಒಂದು ಕ್ರಿಯಾಲೋಪವಾಗಿದೆ. ಇದನ್ನು ಬರೆಯುವವರು ಸರಿಯಾದ ರೀತಿಯಲ್ಲಿ ಬರೆದಿಲ್ಲವೆಂದು ಕಾಣಿಸುತ್ತದೆ. ಪ್ರಧಾನಿಯವರ ನಾಯಕತ್ವದಲ್ಲಿ ವಾಸ್ತವಿಕವಾಗಿ ಕೆಲಸಕಾರ್ಯಗಳೆ ನಡೆದಿದೆ ನಿಜ. ಆದರೆ ಸಂವಿಧಾನದ ಪ್ರಕಾರ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡತಕ್ಕಂಥವರು ಪ್ರಧಾನಿಯವರು ಅಲ್ಲ. ರಾಷ್ಟ್ರಾಧ್ಯಕ್ಷರು. ಇಂಥ ಸಣ್ಣ ಪುಟ್ಟ ತಪ್ಪುಗಳು ಪತ್ರಿಕೆಗಳಲ್ಲಿ ಪ್ರಿಂಟ್ ಆಗದ ಹಾಗೆ ನೋಡಿಕೊಳ್ಳತಕ್ಕಂಥದ್ದು ಸರ್ಕಾರದವರ ಕರ್ತವ್ಯವಾಗಿದೆ. ಇನ್ನು 20 ಅಂಶಗಳ ಕಾರ್ಯಕ್ರಮದ ಬಗ್ಗೆ ಹೇಳುವುದಾದರೆ, ನಮ್ಮ ದೇಶದಲ್ಲಿ ಎಲ್ಲಾ ಕಾರ್ಯಕ್ರಮಗಳ 20 ಅಂಶಗಳ ಕಾರ್ಯಕ್ರಮಗಳ ಆಶ್ರಯದಲ್ಲಿ ನಡೆಯಬೇಕಾದ್ದು ಇಲ್ಲ. ಈ 20 ಅಂಶಗಳ ಕಾರ್ಯಕ್ರಮಗಳು ಮೊದಲಿನಿಂದಲೂ ಸಹ ಅನೇಕ ಕಾಂಗ್ರೆಸ್ ಅಧಿವೇಶನದಲ್ಲಿ ಚರ್ಚೆಯಾಗಿ, ನಿರ್ಣಯವಾಗಿವೆ. ಇದು ಜರೂರಾಗಿ ಇರಬೇಕಾದಂಥ ಕಾರ್ಯಕ್ರಮ. ಈ 20 ಅಂಶಗಳ ಕಾರ್ಯಕ್ರಮಗಳನ್ನು ವಿರೋಧ ಪಕ್ಷದವರು ವಿರೋಧಿಸುವವರಲ್ಲ. ನಾವು 20 ಅಂಶಗಳ ಕಾರ್ಯಕ್ರಮವನ್ನು ಸ್ವಾಗತಿಸುತ್ತೇವೆ. ಇದು ಬಹಳ ಪ್ರಗತಿಪರವಾದಂಥದ್ದು. ಇದರ ಜೊತೆಗೆ ಇನ್ನೂ 2—3 ಅಂಶಗಳನ್ನು ಸೇರಿಸಿ ಮಾಡುವುದಾದರೆ ಅದನ್ನೂ ನಾವು ಸ್ವಾಗತಿಸುತ್ತೇವೆ. ಈ ದಿಶೆಯಲ್ಲಿ ಆಗಬೇಕಾದಂಥ ಪ್ರಗತಿಪರವಾದ ಕಾರ್ಯಗಳಿಗೆ, ಅಭಿವೃದ್ಧಿ ಕಾರ್ಯಗಳಿಗೆ, ಸಾಮಾಜಿಕ ನ್ಯಾಯವನ್ನು ಒದಗಿಸುವಂಥ ಕಾರ್ಯಗಳಿಗೆ ಯಾವತ್ತೂ ವಿರೋಧ ಪಕ್ಷವು ಅಡ್ಡಿ ಅಡಚಣೆಗಳನ್ನು ಉಂಟು ಮಾಡಿಲ್ಲ. 20 ಅಂಶಗಳ ಕಾರ್ಯಕ್ರಮವನ್ನು ಇದೇ ಸಮಯದಲ್ಲಿ ಅದು ಪ್ರಧಾನಿಯವರ ನಾಯಕತ್ವದಲ್ಲಿ ಅಷ್ಟೊಂದು ಪ್ರಚಾರ ಮಾಡಬೇಕಾದ ಅವಶ್ಯಕತೆ ಇರಲಿಲ್ಲ. ಇನ್ನೊಂದು ವಿಚಾರವೇನೆಂದರೆ, 20 ಅಂಶದ ಕಾರ್ಯಕ್ರಮದ ಬಗ್ಗೆ ಸಭೆ ನಡೆಯುವುದಾದರೆ ಅಲ್ಲಿಗೆ ವಿರೋಧ ಪಕ್ಷದವರು ಭಾಗವಹಿಸುವ ಹಾಗೆ ಇಲ್ಲ. ಮಾನ್ಯ ಮುಖ್ಯಮಂತ್ರಿಗಳಲ್ಲಿ ಭಿನ್ನಹ ಮಾಡಿಕೊಳ್ಳುತ್ತೇನೆ. 20 ಅಂಶದ ಕಾರ್ಯಕ್ರಮವೇನಿದೆ ಅದು ರಾಷ್ಟ್ರದ ಕಾರ್ಯಕ್ರಮ. ಅದು ಬರೀ ಪ್ರಧಾನ ಮಂತ್ರಿಯವರ ಕಾರ್ಯಕ್ರಮವಲ್ಲ ಅಥವಾ ಕಾಂಗ್ರೆಸ್ ಕಾರ್ಯಕರ್ತರೊಬ್ಬರ ಕಾರ್ಯಕ್ರಮವಲ್ಲ. ಅದು ಇಡೀ ರಾಷ್ಟ್ರದ ಕಾರ್ಯಕ್ರಮ. ಆದರೆ ತಾವು ಅದನ್ನು ರಾಜಕೀಯ ದೃಷ್ಟಿಯಿಂದ ಮಾಡಿರತಕ್ಕಂಥದು, ರಾಜಕೀಯ ದುರಾಲೋಚನೆಯಿಂದ ಮತ್ತು ರಾಜಕೀಯ ದುರ್ಲಾಭವನ್ನು ಪಡೆದುಕೊಳ್ಳುವುದಕ್ಕೋಸ್ಕರ ಮಾಡಿರತಕ್ಕಂಥದ್ದು. ಇವತ್ತಿನ ದಿವಸ ಜನಗಳನ್ನು ತಪ್ಪುದಾರಿಗೆ ಎಳೆದಿದ್ದೀರಿ ಈ ರೀತಿ ಮಾಡತಕ್ಕಂಥದ್ದು ಸರಿಯಾದದ್ದು ಅಲ್ಲವೆಂದು ಹೇಳುತ್ತೇನೆ

20 ಅಂಶದ ಕಾರ್ಯಕ್ರಮದ ಬಗ್ಗೆ ಮಂತ್ರಿಗಳು ಎಷ್ಟರಮಟ್ಟಿಗೆ ನಿಷ್ಠಾವಂತರಾಗಿದ್ದಾರೆ
ಎನ್ನುವ ಬಗ್ಗೆ ಒಂದೆರಡು ಮಾತುಗಳನ್ನು ಹೇಳಿದರೆ ಸಾಕು ಎಂದು ಅನ್ನಿಸುತ್ತದೆ. ಈ ತುರ್ತು
ಪರಿಸ್ಥಿತಿ ಘೋಷಣೆ ಬಂದಮೇಲೆ ಈ 20 ಅಂಶಗಳ ಕಾರ್ಯಕ್ರಮಗಳಿಗೆ ಒಂದು ಹೊಸ ತಿರುವು
ಬಂದಿತು ಎನ್ನುವ ಭಾವನೆ ಹೊಂದಿದ ಮೇಲೆ ಎಷ್ಟೋ ಸಂದರ್ಭಗಳಲ್ಲಿ ನಾನು 3ನೇ ಮಹಡಿ
ಯಲ್ಲಿರತಕ್ಕಂಥ ಮಂತ್ರಿಗಳವರನ್ನು ನೋಡಲು ಬಂದಿದ್ದಾಗ ಒಬ್ಬ ಮಂತ್ರಿಗಳೂ ಇರಲಿಲ್ಲ.
ಬೆಳಿಗ್ಗೇನೂ ಬರುವುದಿಲ್ಲ, ಸಾಯಂಕಾಲವೂ ಬರುವುದಿಲ್ಲ. ಅವರು ಈ 20 ಅಂಶಗಳ ಕಾರ್ಯ
ಕ್ರಮದಲ್ಲೂ ಭಾಗಗಳಾಗಿರುವುದಿಲ್ಲ, ಕೇವಲ ಅವರ ಅಸಿಸ್ಟೆಂಟ್ಸ್‌ಗಳು ಮಾತ್ರ ಕಚೇರಿಯಲ್ಲಿರು
ತ್ತಾರೆ. ಸಾಮಾನ್ಯವಾಗಿ ಮಂತ್ರಿಗಳು ಯಾವುದಾದರ ಕಾರ್ಯಕ್ರಮಗಳಿಗೆ ಹಾಜರಿಯಾಗು
ತ್ತೇವೆಂದು ಹೇಳಿದ್ದರೂ ಕೂಡ ಅವರು ಅಂಥ ಕಾರ್ಯಕ್ರಮಗಳಿಗೂ ಹಾಜರಿಯಾಗುವುದಿಲ್ಲ.
ಹಾಜರಿಯಾದರೂ ತಡವಾಗಿ ಹಾಜರಿಯಾಗತಕ್ಕಂಥ ಸಂದರ್ಭಗಳಿರುತ್ತದೆ. ಇವತ್ತಿನ ದಿವಸ ಶಿಸ್ತು
ನಿಮ್ಮಿಂದ ಜನಗಳು ಕಲಿತುಕೊಳ್ಳಬೇಕು. ನೀವು ಇವತ್ತು ಸರಿಯಾದಂಥ ಶಿಸ್ತನ್ನು ಅನುಸರಿಸ
ಬೇಕು. ಈಗ ಭೂ ಹೀನರಿಗೆ ಭೂಮಿಯನ್ನು ಹಂಚತಕ್ಕಂಥ ಕಾರ್ಯಕ್ರಮವೂ ಈ 20 ಅಂಶಗಳ
ಕಾರ್ಯಕ್ರಮದಲ್ಲಿ ಸೇರಿರತಕ್ಕಂಥದ್ದು. ನಮ್ಮ ತಾಲ್ಲೂಕಿಗೆ ಸಂಬಂಧಪಟ್ಟ ಹಾಗೆ ಹೇಳುವು
ದಾದರೆ, ಹಾಗೂ ಬೇರೆ ತಾಲ್ಲೂಕ್‌ಗಳಲ್ಲಿಯೂ ಇದೇ ಪರಿಸ್ಥಿತಿ ಆಗಿದೆ. ಒಂದು ವರ್ಷವಾಗಿ
ದ್ದಾಗ್ಯೂ ಕೂಡ ಭೂಮಿಯನ್ನು ಹಂಚತಕ್ಕದರ ಬಗ್ಗೆ ತಾಲ್ಲೂಕ್ ಮಟ್ಟದ ಸಮಿತಿಯನ್ನು ಕೆಲವು
ಕಡೆ ರಚನೆ ಮಾಡಿಲ್ಲ ಕೆಲವು ಕಡೆ ಮಾಡಿದ್ದರೂ ಅಲ್ಲಿ ಸರಿಯಾದ ಕೆಲಸಗಳು ನಡೆಯುತ್ತಿಲ್ಲ. ಇದು
ಒಂದು 20 ಅಂಶಗಳ ಕಾರ್ಯಕ್ರಮದಲ್ಲಿ ಬರುತ್ತದೆ. ಇದು ನಮ್ಮ ಪ್ರಧಾನಿಯವರ ಕಾರ್ಯಕ್ರಮ
ವೆಂದು ಕರೆಯುತ್ತಾರೆ. 20 ಅಂಶದ ಕಾರ್ಯಕ್ರಮದಲ್ಲಿ ಸರ್ಕಾರದವರು ಎಷ್ಟರಮಟ್ಟಿಗೆ ನಿಷ್ಠೆ
ಯಿಂದ ನಡೆದುಕೊಂಡಿದ್ದಾರೆ ಎನ್ನುವುದಕ್ಕೆ ಇದೊಂದೇ ಸಾಕು. ಒಂದು ವರ್ಷವಾದರೂ ಭೂಮಿ
ಯನ್ನು ಹಂಚುವುದಕ್ಕೆ ಇನ್ನೊಂದು ಸಮಿತಿಯನ್ನು ರಚನೆ ಮಾಡಿಲ್ಲವೆಂದರೆ ಇನ್ನು ಯಾವಾಗ
ಇವರು ಭೂಮಿಯನ್ನು ಹಂಚುವುದಕ್ಕೆ ಸಾಧ್ಯವಾಗುತ್ತದೆ? ಆ ಮೇಲೆ ಭೂ ನ್ಯಾಯ
ಮಂಡಲಿ ಇದೆ. ಭೂ ನ್ಯಾಯ ಮಂಡಲಿಯ ಅಧ್ಯಕ್ಷರು ಯಾರೆಂದರೆ ಸಬ್ ಡಿವಿಜನಲ್ ಅಸಿಸ್ಟೆಂಟ್
ಕಮಿಷನರ್‌ರವರು. ಅವರಿಗೆ ವರ್ಗಾವಣೆಯಾಗಿದೆ. ಒಂದು ವರ್ಷದ ಮೇಲೂ ಕೂಡ ಈ ವ್ಯವ
ಹಾರದ ಬಗ್ಗೆ ಯಾವುದೇ ವಿಧವಾದಂಥ ತೀರ್ಮಾನ ಈ ವಿಷಯದ ಬಗ್ಗೆ ಆಗುವ ರೀತಿಯಲ್ಲಿಲ್ಲ.
ಇಂಥ ಒಂದು ವಾತಾವರಣದ ಪರಿಸ್ಥಿತಿ ಇರುತ್ತದೆ. ಸರ್ಕಾರದವರು ಇಂಥ ವಿಚಾರಗಳಲ್ಲಿ
ಮಾರ್ಗದರ್ಶನ ಮಾಡತಕ್ಕಂಥ ರೀತಿಯಲ್ಲಿ, ಒಂದು ಮಾದರಿಯಾದ ರೀತಿಯಲ್ಲಿ, ಒಂದು ಉತ್ತಮ
ವಾದ ರೀತಿಯಲ್ಲಿ ಅಧಿಕಾರದ ಸೂತ್ರವನ್ನು ಹಿಡಿದುಕೊಂಡಿರತಕ್ಕಂಥವರು ನಡೆದುಕೊಳ್ಳಬೇಕೆಂದು
ಈ ಸಮಯದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಇನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಈ ದಿನ ಒಂದು ಭೀಕರವಾದಂಥ ವಾತಾವರಣ
ನಿರ್ಮಾಣವಾಗಿದೆಯೆಂದರೆ ನೀವು ಇದು ಉತ್ಪ್ರೇಕ್ಷೆಯ ಮಾತು ಎಂದು ತಿಳಿದುಕೊಳ್ಳಬಾರದು.
ಅದಕ್ಕೆ ಕಾರಣವಾದರೂ ಇಷ್ಟೆ, ಕಳೆದ 7—8 ವರ್ಷಗಳಿಂದ ಕಂದಾಯ, ವಾಟರ್ ಕಾಂಟ್ರಿಬ್ಯೂ
ಷನ್, ಸರ್ಕಾರದಿಂದ ತೆಗೆದುಕೊಂಡಿರತಕ್ಕಂಥ ತಕಾವಿ ಸಾಲ, ಪಂಪ್‌ಸೆಟ್ ಸಾಲ, ವಗೈರ
ಸಾಲಗಳನ್ನು ವಸೂಲು ಮಾಡದೇ ಹಾಗೆಯೇ ಬಿಟ್ಟು ಬಿಟ್ಟಿದ್ದಾರೆ. ಅದು ರೈತರ ತಪ್ಪು
ಎಂದರೆ ನನ್ನದೇನು ಅದಕ್ಕೆ ಉತ್ತರವಿಲ್ಲ ಮತ್ತು ಅದು ರೈತರ ತಪ್ಪು ಎಂದು ಹೇಳುವುದಕ್ಕಾಗು
ವುದಿಲ್ಲ. ಹಾಗೆ ನೀವು ರೈತರ ತಪ್ಪು ಎಂದು ಹೇಳಬೇಕಾದರೆ ಇಂಥ ಕಾಲದಲ್ಲಿ ಇಷ್ಟು ಕಂದಾಯ
ವನ್ನು, ಸಾಲವನ್ನು ಮರು ಪಾವತಿ ಮಾಡುವ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕಾಗಿತ್ತು. ಅಂಥ
ಯಾವ ಕ್ರಮವನ್ನು ತೆಗೆದುಕೊಳ್ಳದೇ ಇರುವುದರಿಂದ ಇವತ್ತಿನ ದಿವಸ ಅದು ರೈತರ ತಪ್ಪು ಎಂದು
ಹೇಳುವುದಕ್ಕಾಗುವುದಿಲ್ಲ. ಅಭಾವ ಪರಿಸ್ಥಿತಿ ಕಾರಣದಿಂದ ಸರ್ಕಾರಕ್ಕೆ ಬರತಕ್ಕಂಥ ಹಣವನ್ನು
ಮುಂದೆ ವಸೂಲು ಮಾಡೋಣ ಎಂದು ಮುಂದಕ್ಕೆ ಹಾಕಿಕೊಂಡು ಹೋದಿರಿ. ಅದಕ್ಕೆ ಈಗ ಏನಾ
ಗಿದೆ ವಾಟರ್ ರೇಟ್ ಒಂದಕ್ಕೆರಡರಷ್ಟು ಮಾಡಿದ್ದೀರಿ. ಅದನ್ನು ನಾನು ಬೇರೊಂದು ಸಮಯ
ದಲ್ಲಿ ಪ್ರಸ್ತಾಪ ಮಾಡುತ್ತೇನೆ. ಆದ್ದರಿಂದ ರೈತರಿಗೆ ಎಷ್ಟರಮಟ್ಟಿಗೆ ತೊಂದರೆಯಾಗಿದೆ ಎನ್ನುವ
ಬಗ್ಗೆ ನಾವು ಸ್ವಲ್ಪ ಯೋಚನೆ ಮಾಡಬೇಕು. ಇನ್ನು ಎಲೆಕ್ಟ್ರಿಸಿಟಿ ರೇಟ್‌ನ್ನು 15 ಪರ್ಸೆಂಟ್ ಹೆಚ್ಚು
ಮಾಡಿದ್ದೀರಿ. ಅದು ಕಾನೂನು ಬದ್ಧವೋ ಇಲ್ಲವೋ ಎನ್ನುವ ಪ್ರಶ್ನೆಯಲ್ಲ. ಅದನ್ನು ನಾನು

ಸಮಯೋಚಿತ ಸಂದರ್ಭದಲ್ಲಿ ಮಾತನಾಡುತ್ತೇನೆ. ಈಗ ಅಷ್ಟೇ ಅಲ್ಲಾ ಸಾಲಗಳನ್ನು ಒಟ್ಟಿಗೆ ಈಗಲೇ ಕೊಡಬೇಕೆಂದು ಒತ್ತಾಯ ಮಾಡಿ ಈಗ ಕೊಯ್ಯಲಾಗಿರತಕ್ಕಂಥ ಮೆದೆಗೆ ಬೀಗ ಮುದ್ರೆಯನ್ನು ಹಾಕಿ, ಜಫ್ತಿ ಮಾಡಿ ಸಾಲವನ್ನು ತೀರಿಸಿ ಎಂದು ಗಲಾಟೆ ಮಾಡುತ್ತಿರತಕ್ಕಂಥ ವಿಷಯ ತಮ್ಮ ಗಮನಕ್ಕೆ ಬಂದಿದೆಯೋ ಇಲ್ಲವೋ ಗೊತ್ತಿಲ್ಲ. ಇದು ವ್ಯಾಪಕವಾಗಿ ರಾಜ್ಯಾದ್ಯಂತ ಎಲ್ಲಾ ಭಾಗಗಳಲ್ಲೂ ಅವ್ಯಾಹತವಾಗಿ ನಡೆಯುತ್ತಿದೆ.

ಶ್ರೀ ಡಿ. ದೇವರಾಜ್ ಅರಸ್.—ನಿಮ್ಮ ತಾಲ್ಲೂಕಿನಲ್ಲಿ ಎಷ್ಟು ಕಡೆ ಆಗಿದೆ ?

ಶ್ರೀ ಎಚ್. ಟಿ. ಕೃಷ್ಣಪ್ಪ.—ನಮ್ಮ ಇಡೀ ತಾಲ್ಲೂಕಿನಲ್ಲಿ ಈ ರೀತಿ ಆಗುತ್ತಿದೆ. ನಮ್ಮಲ್ಲಿ 100 ರಿಂದ 200 ರಷ್ಟು ಬಡ ಜನರಿದ್ದಾರೇ ದುಡ್ಡಿರುವ ಶ್ರೀಮಂತರೇನೋ ಸಾಲವನ್ನು ಕಟ್ಟಿ ಬಿಡುತ್ತಾರೆ ಕೆಳಗಿನ ಬಡ ರೈತರು ಒಂದೇ ಸಾರಿ ಕಟ್ಟಿ ಬಿಡಿ ಎಂದರೆ ಎಲ್ಲಿಂದ ಕಟ್ಟುವುದಕ್ಕೆ ಆಗುತ್ತದೆ ?

ಶ್ರೀ ಡಿ. ದೇವರಾಜ್ ಅರಸ್.—ನಾಗಮಂಗಲ ತಾಲ್ಲೂಕಿನಲ್ಲಿ ಎಷ್ಟು ಎಕರೆ ನೀರಾವರಿ ಆಗತಕ್ಕ ಭೂಮಿ ಇದೆ ?

ಶ್ರೀ ಎಚ್. ಟಿ, ಕೃಷ್ಣಪ್ಪ.—ನನ್ನ ತಾಲ್ಲೂಕಿನಲ್ಲಿ ಒಟ್ಟು ಸುಮಾರು 12 ಸಾವಿರ ಎಕರೆ ಯಷ್ಟು ಜಮೀನು ಇರಬಹುದು. ಹಿಂದಿನ ವರ್ಷ ತಾವು ಕೊಡಬೇಕಾದ ಸಾಲವನ್ನೆಲ್ಲಾ ಕೊಟ್ಟರೆ ಸುಸ್ತಿ ಬಡ್ಡಿಯನ್ನು ವಿನಾಯಿತಿ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಅದನ್ನೆಲ್ಲಾ ಒಂದೇ ಕಂತಿನಲ್ಲಿ ಕಟ್ಟುವುದಕ್ಕೆ ಆಗುವುದಿಲ್ಲ. ತಾವು ರೈತರಿಗೆ ಒಂದೆರಡು ಕಂತುಗಳಲ್ಲಿ ಕಟ್ಟಲು ಅವಕಾಶ ಮಾಡಿಕೊಟ್ಟರೆ ಅನುಕೂಲವಾಗುತ್ತದೆ.

ಶ್ರೀ ಡಿ. ದೇವರಾಜ್ ಅರಸ್.—ಈಗಲೂ ಕೂಡ ಹೇಳುತ್ತೇನೆ. ಅವರು ಕಟ್ಟಬೇಕಾ ದ್ದನ್ನೆಲ್ಲಾ ಕಟ್ಟಿ ಬಿಡಲಿ ಅವರಿಗೆ ಸುಸ್ತಿ ಬಡ್ಡಿಯನ್ನು ರಿಯಾಯಿತಿ ಕೊಡುತ್ತೇವೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ದಯವಿಟ್ಟು ಲಾಲಿಸಬೇಕು. ಇವತ್ತಿನ ದಿವಸ ದೊಡ್ಡ ದೊಡ್ಡ ರೈತರಿಗೆ ಹೆಚ್ಚಿನ ಸಹಾಯ ಮಾಡುತ್ತಿದ್ದೀರಿ.

ಸ್ವಾಮಿ, ಈಗ ಟ್ರಾಕ್ಟರ್ ಕೊಳ್ಳತಕ್ಕವರಿಗೆ ರಿಯಾಯಿತಿಯನ್ನು ತಾವು ಕೊಟ್ಟಿದ್ದೀರಿ ಸಾಮಾನ್ಯವಾಗಿ ಟ್ರಾಕ್ಟರ್ ಕೊಳತಕ್ಕವರು ಕಡಿಮೆ ದರ್ಜೆಯವರಾಗಿರುತ್ತಾರೆಯೆ ? ಇವೊತ್ತಿನ ದಿವಸ ಸಾಮಾನ್ಯ ರೈತರು ಬಹಳ ಕಷ್ಟಪಡಬೇಕಾಗಿದೆ.

2-30. P. M.

ಶ್ರೀ ಡಿ. ದೇವರಾಜ ಅರಸ್.—ಅವರು ಸರ್ಕಾರಕ್ಕೆ ಕೊಡಬೇಕಾದ ಹಣವನ್ನು ಕೊಟ್ಟರೆ ಸುಸ್ತಿ ಬಡ್ಡಿ ಹಣವನ್ನು ವಜಾ ಮಾಡುತ್ತೇವೆ.

ಶ್ರೀ ಕೆ. ಹೆಚ್. ಹನುಮೇಗೌಡ.—ಮಾನ್ಯ ಮುಖ್ಯಮಂತ್ರಿಗಳು ಹೋದ ವರ್ಷ ರೈತರು ಕೊಡಬೇಕಾದುನ್ನು ಒಂದೇ ಕಂತಿನಲ್ಲಿ ಕೊಟ್ಟರೆ ಸುಸ್ತಿ ವಜಾ ಮಾಡುತ್ತೇವೆ ಎಂದು ಹೇಳಿದ್ದರು ಆದರೆ ಅಲ್ಲಿ ಹೋಗಿ ಜಿಲ್ಲಾಧಿಕಾರಿಗಳನ್ನು ಕೇಳಿದರೆ ನಮಗೆ ಏನು ಇದರ ಬಗ್ಗೆ ಇನ್‌ಫರ್‌ಮೇಷನ್ ಬಂದಿಲ್ಲ ಎಂದು ಹೇಳುತ್ತಾರೆ.

SRI D. DEVARAJ URS.—If it is not there, I will stick to my original promise even now and I will send it.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಸ್ವಾಮಿ, ತಾವು ಕಳುಹಿಸುವ ಹುಕ್ಕುಂನಲ್ಲಿ 6 ತಿಂಗಳ ಕಾಲ ಅವಕಾಶ ಕೊಡಿ ಎಂದು ಕೇಳಿಕೊಳ್ಳುತ್ತೇನೆ, ಒಂದು ವೇಳೆ ಅಷ್ಟು ಕಾಲ ಕೊಡುವುದಕ್ಕೆ ಸಾಧ್ಯ ವಾಗುವುದಿಲ್ಲ ಎನ್ನುವುದಾದರೆ 3 ತಿಂಗಳ ಕಾಲ ಅವಕಾಶ ಕೊಡಬೇಕು ಎಂದು ಕೇಳಿಕೊಳ್ಳು ತ್ತೇನೆ.

ಇನ್ನು ಕಂದಾಯ ವಾಟರ್ ರೇಟ್ ಏನು ಇದೆ ಅದನ್ನು 7-8 ವರ್ಷಗಳಿಂದ ಕೇಳಿಕೊಂಡು ಬಂದಿಲ್ಲ, ಈಗ ಮಾರ್ಕೋನ ಹಳ್ಳಿ ಅಣೆಯನ್ನು ಕಟ್ಟಿ ಎಷ್ಟು ವರ್ಷಗಳಾದವು ? ಸುಮಾರು 20 ವರ್ಷಗಳಾಗುತ್ತಾ ಬಂತು, ಈಗ 1965 ರಿಂದಲೂ ಕಾಂಟ್ರಿಬ್ಯೂಷನ್ ಕೊಡಿ ಎಂದು ಬರುತ್ತಾರೆ, ಈಗ ಅವರು ಎಲ್ಲಿಂದ ತಂದು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಈಗ ಇರಿಗೇಷನ್ ಆ್ಯಕ್ಟಿನಲ್ಲಿ 20 ಕಂತುಗಳಲ್ಲಿ ಕೊಡಬಹುದು ಎಂದು ಪ್ರೊವೈಡ್ ಮಾಡಿದ್ದಾರೆ. ಅಲ್ಲಿ ಅಧಿಕಾರಿಗಳು ಯಾವ ರೀತಿ ವ್ಯಾಖ್ಯಾನ ಮಾಡುತ್ತಾರೆ ಎಂದರೆ 20 ಕಂತುಗಳು ಎಂದರೆ ನೀರನ್ನು ಉಪಯೋಗಿಸಿ ಕೊಳ್ಳುವುದಕ್ಕೆ ಪ್ರಾರಂಭ ಮಾಡಿದಾಗಿನಿಂದ ಎಂದು ಹೇಳುತ್ತಾರೆ, ನಾನು ಅವರಿಗೆ ಹೇಳ್ಳುವುದು ತಾವು ಕಂತುಗಳನ್ನು ಗೊತ್ತು ಮಾಡಿದಾಗಿನಿಂದ 20 ಕಂತುಗಳು ಎಂದು. ಈಗ 20 ಕಂತುಗಳು ಬೇಕಾಗಿಲ್ಲ, ಈಗ ಬಾಕಿ ಇರತಕ್ಕದ್ದು ಎರಡು ಮೂರು ಕಂತುಗಳು, ಈ ವಾಟರ್ ರೇಟ್ ಬಾಕಿ ನಿಂತಿರುವ ಬಗ್ಗೆ ತಾವು ಸ್ವಲ್ಪ ಸಹಾನುಭೂತಿ ತೋರಿಸಿದಲ್ಲಿ ಬಡ ರೈತರು ತಮ್ಮ ಅಪಾರ ವಿಶ್ವಾಸಕ್ಕೆ ಪಾತ್ರರಾಗುತ್ತಾರೆ ಎಂದು ಹೇಳುತ್ತೇನೆ. ಈ ವಿಚಾರದಲ್ಲಿ ತಾವು ಮುಂಜಾಗರೂಕತೆ ವಹಿಸಿ ಅವರಿಗೆ ಆಗತಕ್ಕ ತೊಂದರೆಯನ್ನು ತಪ್ಪಿಸಬೇಕೆಂದು ಕೇಳಿಕೊಳ್ಳುತ್ತೇನೆ

ಅಧ್ಯಕ್ಷರು.—ಮಾನ್ಯ ಸದಸ್ಯರು ನೆನ್ನೆ ದಿವಸ 10 ನಿಮಿಷಗಳ ಕಾಲ ಮಾತನಾಡಿದ್ದಾರೆ. ಇವೊತ್ತು ಅರ್ಧ ಗಂಟೆಯಿಂದ ಮಾತನಾಡುತ್ತಿದ್ದಾರೆ ಅವರು ಯಾವ ವಿಷಯವನ್ನೂ ಹೇಳಿದ್ದನ್ನೇ ಹೇಳದೆ ಮಾತನಾಡಿದರೆ ಸಾಕು.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಸ್ವಾಮಿ ಇನ್ನು ಪಂಪ್‌ಸೆಟ್ಟುಗಳ ಬಗ್ಗೆ ಹೇಳುವುದಾದರೆ ಈಗ ಡೀಸಲ್ ಪಂಪ್‌ಸೆಟ್ಟುಗಳಿಗೆ ಸರ್ಕಾರದವರು ಸಹಾಯಧನ ಕೊಡತಕ್ಕಂಥಾದ್ದನ್ನು ಇಟ್ಟು ಕೊಂಡಿದ್ದೀರಾ, ಆದರೆ ವಿದ್ಯುಚ್ಛಕ್ತಿಯಿಂದ ಓಡಿಸತಕ್ಕ ಪಂಪ್‌ಸೆಟ್ಟುಗಳಿಗೆ ಸಿಗುತ್ತಿಲ್ಲ, ಆದ್ದರಿಂದ ಎರಡು ರೀತಿಯ ಪಂಪ್‌ಸೆಟ್ಟುಗಳಿಗೂ ಕೂಡ ಒಂದು ರೀತಿಯ ಸೌಕರ್ಯ ಸಿಗುವಂತೆ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಇನ್ನು ಭೂ ಸುಧಾರಣೆ ಬಗ್ಗೆ ಹೇಳುವುದಾದರೆ, ಭೂಸುದಾರಣೆ ಕಾನೂನಿಗೆ ಸಂಬಂಧ ಪಟ್ಟ ಹಾಗೆ 60 ಸಾವಿರ ಕೇಸುಗಳನ್ನು ತೀರ್ಮಾನ ಮಾಡಿದ್ದಾರೆ ಎನ್ನುವ ವರದಿ ನಮ್ಮ ಮುಂದೆ ಇದೆ. ಈ 60 ಕೇಸುಗಳಲ್ಲಿ ಎಷ್ಟು ಕೇಸುಗಳು ಹೈಕೋರ್ಟಿಗೆ ಹೋಗಿವೆ, ಎಷ್ಟು ಕೇಸುಗಳು ಉರ್ಜಿತವಾಗಿವೆ, ಎಷ್ಟು ಕೇಸುಗಳು ಅನೂರ್ಜಿತವಾಗಿವೆ ಎಂಬ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಅಂಕಿಅಂಶ ಗಳನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೇ ಈ ಭೂ ನ್ಯಾಯ ಮಂಡಲಿಯಲ್ಲಿ ಕೆಲಸ ಮಾಡತಕ್ಕ ಕಾಲದಲ್ಲಿ ಅನುಸರಿಸಬೇಕಾದಂಥ ಕೆಲವು ವಿಧಿನಿಯಮಗಳನ್ನು ನೋಡಿ ಸರ್ಕಾರ ದವರು ಗೊತ್ತುಪಡಿಸಿ ಕಾನೂನಿಗೆನುಗುಣವಾಗಿ ನಡೆಯಬೇಕು ಎಂದು ಆದೇಶ ಕೊಟ್ಟರೆ ಒಳ್ಳೆಯದು ಎಂದು ಹೇಳುತ್ತೇನೆ. ಸಾಮಾನ್ಯವಾಗಿ ಯಾರು ಭೂ ನ್ಯಾಯಮಂಡಲಿಯ ಅಧ್ಯಕ್ಷ ರಾಗಿರುತ್ತಾರೆ ಅವರು ಕಾನೂನು ಶಾಸ್ತ್ರದಲ್ಲಿ ಪರಿಣಿತರಾಗಿದ್ದರೆ ತೊಂದರೆ ಕಡಿಮೆ. ಅನೇಕರು ಕಾನೂನು ಓದಿರುವುದಿಲ್ಲ, ಅಲ್ಲದೇ ಕಾನೂನಿನ ಬಗ್ಗೆ ಹೆಚ್ಚು ತಿಳಿದುಕೊಳ್ಳುವ ಆಸಕ್ತಿ ಅವರಿಗೆ ಇರುವುದಿಲ್ಲ. ಏನೋ ಒಂದು ಗಂಟೆಗೆ ಮೂರು ಮೊಳ ನೇಯಬೇಕು ಎನ್ನುವವರೇ ಇದ್ದಾರೆ. ಆದ್ದರಿಂದ ಕೆಲವು ಕಟ್ಟುನಿಟ್ಟಾದ ನಿಯಮಗಳನ್ನು ಹಾಕಿ ತೀರ್ಮಾನ ಮಾಡಬೇಕು ಅಲ್ಲದೇ ಹೈ ಕೋರ್ಟಿಗೆ ಹೋಗಿ ವಜಾ ಆಗಿ ಬರತಕ್ಕ ಸಂಖ್ಯೆ ಕಡಿಮೆಯಾಗಬೇಕು ಎಂದು ಭಾವಿಸುತ್ತೇನೆ. ಯಾವುದಾದರು ತಕರಾರು ಬಂದರೆ ಅದು ಎಷ್ಟರ ಮಟ್ಟಿಗೆ ಉರ್ಜಿತವಾಗಿದೆ, ಅದು ಉರ್ಜಿತ ವಾಗಿಲ್ಲ ಎನ್ನುವ ಬಗ್ಗೆ ಕಾರಣ ಕೊಡದೆ ತೀರ್ಮಾನ ಮಾಡುವ ಸಂದರ್ಭಗಳು ಇವೆ· ಯಾರಾದರೂ ದಾಖಲೆ ಕೊಟ್ಟರೆ ಈ ಕಾರಣಕ್ಕೋಸ್ಕರ ಒಪ್ಪುವುದಿಲ್ಲ ಎನ್ನುವ ವಿಚಾರ ಮಾಡದೆ ತೀರ್ಪುಬರೆದಿ ರುವುದು ಉಂಟು ಎಂದು ಹೇಳುತ್ತೇನೆ. ಆದರೆ ಈ ತೀರ್ಪು ಕಾನೂನಿನ ಚೌಕಟ್ಟಿನಲ್ಲೇ ಇರಬೇಕು ನಾಳೆ ದಿವಸ ಈ ತೀರ್ಪು ಹೈಕೋರ್ಟಿನಲ್ಲಿ ಪ್ರಶ್ನೆ ಮಾಡುವಂಥ ಕಾಲದಲ್ಲಿ ವಜಾ ಮಾಡಬಾರದಂತೆ ಇರಬೇಕ ಎಂದು ಕೇಳಿಕೊಳ್ಳುತ್ತೇನೆ. ಇನ್ನು ತೀರ್ಮಾನವಾದ ಕೇಸುಗಳಲ್ಲಿ ಭೂಮಾಲಿಕರಿಗೆ ಯಾವ ವಿಧವಾದ ಪರಿಹಾರ ದೊರಕಿಲ್ಲ. ಭೂ ಮಾಲೀಕರು ಎಂದರೆ ದೊಡ್ಡ ದೊಡ್ಡ ಭೂ ಮಾಲೀ ಕರು ಎಂದು ಹೇಳುವುದಲ್ಲ, ಅಂದರೆ ತಲೆ ತಲಾಂತರದಿಂದ ಎರಡು ಮೂರು ಎಕರೆ ಜಮೀನನ್ನು ಇಟ್ಟುಕೊಂಡಿದ್ದು ಅವರಿಗೆ ಅದೇ ಜೀವನಾಧಾರವಾದ ವಸ್ತುವಾಗಿದ್ದು ಆ ಜಮೀನನ್ನು ಕಳೆದು ಕೊಂಡು ಯಾವ ಒಂದು ಉದ್ಯೋಗ ಇಲ್ಲದೆ ಪರಿಪಾಟು ಪಡುತ್ತಿದ್ದಾರೆ. ಆದ್ದರಿಂದ ತಾವು ಅವರ

ಒಗ್ಗೆ ಅನುಕಂಪ ತೋರಿಸಬೇಕೆಂದು ಕೇಳುತ್ತೇನೆ. ಈಗ ರಾಜ್ಯದ ಭೂ ಅಭಿವೃದ್ಧಿ ಬ್ಯಾಂಕಿನಲ್ಲಿ ದುಡ್ಡು ಕೊಡುತ್ತಾರೆ ಎಂದು ಹೇಳುವುದು ಅದು ಹಳೆಯದಾಯಿತು, ಇನ್ನು ಯಾವುದಾದರು ಆದಾಯದ ಮೂಲ ಕಂಡು ಹಿಡಿದು ಎರಡು ಮೂರು ಎಕರೆ ಜಮೀನು ಇಟ್ಟುಕೊಂಡಿದ್ದು ಅದನ್ನು ಕಳೆದುಕೊಂಡವರಿಗೆ ಬೇರೆ ಯಾವ ಮಾರ್ಗ ಇಲ್ಲದೇ ಇರತಕ್ಕ ಜನರಿಗೆ ಕೂಡಲೇ ಏನಾದರೂ ಸಹಾಯ ಮಾಡತಕ್ಕ ಕೆಲಸ ಮಾಡಬೇಕು ಎಂದು ಹೇಳುತ್ತೇನೆ. ಈಗ ಋಣಭಾರವನ್ನು ತಪ್ಪಿಸುವುದಕ್ಕೋಸ್ಕರ ಕಡಿಮೆ ಮಾಡುವುದಕ್ಕೋಸ್ಕರ ಈಗ ಒಂದು ಕಾಯಿದೆ ಮಾಡಿದ್ದೀರಾ ಅದನ್ನು ನಾನು ಸ್ವಾಗತ ಮಾಡುತ್ತೇನೆ. ಏಕೆಂದರೆ ಅದರ ಉದ್ದೇಶ ಬಹಳ ಒಳ್ಳೆಯದು ಆದರೆ ಅದರಿಂದ ಆಗಿರತಕ್ಕ ತೊಂದರೆ ಕಡೆ ಗಮನ ಹೋಗಿಲ್ಲ ಎಂದು ಹೇಳುತ್ತೇನೆ. ಗ್ರಾಮಾಂತರ ಪ್ರದೇಶಗಳಲ್ಲಿ ಸಾಲ ತರುತ್ತಿದ್ದರು ಹೇಗೊ ಜೀವನಮಾಡಿಕೊಂಡು ಹೋಗುತ್ತಿದ್ದರು, ಪರಸ್ಪರ ಸಹಕಾರ ಅದರಲ್ಲಿ ನಡೆದುಕೊಂಡು ಬರುತ್ತಿತ್ತು ಎಂದು ಹೇಳುತ್ತೇನೆ. ಶ್ರೀಮಂತರು ಮಾತ್ರ ಸಾಲ ಕೊಡುತ್ತಿದ್ದರು, ಬಡವರಾರೂ ಸಾಲ ಕೊಡುತ್ತಿರಲಿಲ್ಲ ಎಂಬುದು ಸರ್ಕಾರದ ಭಾವನೆಯಾಗಿರಬಹುದು. ಬಡವರಿಗೆ ಶ್ರೀಮಂತರು ಸಾಲ ಕೊಡುವುದು ಅಪರೂಪ. ಹಾಗೇನಾದರೂ ಕೊಟ್ಟ ಪಕ್ಷದಲ್ಲಿ ಆತ ಬಡವನ ಜುಟ್ಟು ಜನಿವಾರ ಎಲ್ಲವನ್ನೂ ಕಿತ್ತುಕೊಂಡು ಕೊಡುತ್ತಾನೆ. ಆದರೆ, ಇಲ್ಲಿನ ಪರಿಸ್ಥಿತಿಯೇ ಬೇರೆಯಾಗಿದೆ ಯಾರೋ ಒಬ್ಬ ಬಡ ರೈತ ಅವನಲ್ಲಿದ್ದ ಕುರಿಯನ್ನೋ, ಎತ್ತನ್ನೋ ಮಾರಿ ಮನೆಯಲ್ಲಿ ದುಡ್ಡು ಇಟ್ಟುಕೊಂಡಿರುತ್ತಿದ್ದ. ಯಾರಾದರೂ ಸಂಕಷ್ಟದಲ್ಲಿ ಈತನಿಂದ ಸಹಾಯ ಕೇಳಿದರೆ, 200-300 ರೂಪಾಯಿಗಳನ್ನು ಸಾಲವಾಗಿ ಕೊಡುತ್ತಿದ್ದ. ಇಲ್ಲಿ ಸಾಲವಾಗಿ ಹಣ ಕೊಟ್ಟ ವ್ಯಕ್ತಿಯೂ ಕೂಡ ರೈತ : ಮತ್ತೆ ಬಡವ ಎಂಬುದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಈಗ ಸರ್ಕಾರದ ಕಾನೂನು ಬಂದು ಏನಾಯಿತು ಎಂದರೆ, ಹಣ ಕೊಟ್ಟ ಬಡವ ಕೆಟ್ಟ ಈ ಒಂದು ಭಯಂಕರವಾದ ದುಷ್ಪರಿಣಾಮದಿಂದ ಬಡವರು ಎಂಥಾ ಸಂಕಷ್ಟದಲ್ಲಿದ್ದರೂ ಹಳ್ಳಿಗಾಡುಗಳಲ್ಲಿ ಒಂದು ಕಾಸೂ ಕೂಡ ಕೊಡುವವರು ಯಾರು ಇಲ್ಲ ಅಭಿವೃದ್ಧಿಗೆ ಸಂಬಂಧಪಟ್ಟ ಸಾಲವಾಗಲೀ ; ಅಥವಾ ನಿತ್ಯ ವ್ಯವಹಾರಗಳಿಗೆ ಸಂಬಂಧಪಟ್ಟಂತೆ ಧನಸಹಾಯವಾಗಲೀ ರೈತಾಪಿ ಜನರಿಗೆ ದೊರಕುವಂಥ ಒಂದು ಪರ್ಯಾಯ ವ್ಯವಸ್ಥೆಯನ್ನು ಸರ್ಕಾರದವರು ಮಾಡಿದರೆ, ಬಹುಶಃ ನನ್ನ ಟೀಕೆಗೆ ಅವಕಾಶ ವಿರುತ್ತಿರಲಿಲ್ಲ. ಆದರೆ, ಇವತ್ತಿನ ದಿವಸ ಈ ಸರ್ಕಾರ ಅಂಥಾ ಒಂದು ಏರ್ಪಾಡು ಮಾಡಲಿಲ್ಲ. ಇದರಿಂದ ಏನಾಗಿದೆ ಎಂದರೆ, ಹಳ್ಳಿಗಾಡುಗಳಲ್ಲಿ ಒಬ್ಬ ರೈತ ಯಾವುದೇ ಒಂದು ಕೆಲಸ ಮಾಡಬೇಕಾದರೂ ಅದಕ್ಕೆ ಬೇಕಾದಂಥ ಧನ ಸಹಾಯ ಸಿಗುತ್ತಾ ಇಲ್ಲ. ಇನ್ನು ಅಲ್ಲಿರುವ ಸಹಕಾರ ಸಂಘಗಳ ಬಗ್ಗೆ ಹೇಳುವುದಾದರೆ, ಎಷ್ಟೋ ಸಹಕಾರಸಂಘಗಳು ಡಿಫಾಲ್ಟರ್ಸ್ ; ಅವು ಜೀವಂತವಾಗಿಲ್ಲ. ಒಂದು ತಾಲ್ಲೂಕಿಗೆ ಸುಮಾರು 8-10 ಸಹಕಾರ ಸಂಘಗಳು ಉತ್ತಮವಾಗಿ ಕೆಲಸ ಮಾಡುತ್ತಿರಬಹುದು. ಆದರೆ, ಇಂಥಾ ಸಹಕಾರ ಸಂಘಗಳಿಂದ ರೈತನಿಗೆ ಬೇಕಾದಂಥ ವಿಧವಿಧವಾದ ಸಾಲಗಳು ಸಿಕ್ಕುವುದಿಲ್ಲ. ಸಹಕಾರ ಸಂಘಗಳ ಸಂಘಟನೆಯನ್ನು ಮಾಡಬೇಕು ; ಸಹಕಾರ ಚಳವಳಿಗೆ ಚೈತನ್ಯ ನೀಡಬೇಕು : ಅದನ್ನು ಬಲಪಡಿಸಬೇಕು ಎಂದು ಸರ್ಕಾರದವರು ಪದೇ ಪದೇ ಹೇಳುತ್ತಲೇ ಇದ್ದಾರೆ. ಆದರೆ, ಇಲ್ಲಿ ಒಂದು ಮಾತನ್ನು ಜ್ಞಾಪಕದಲ್ಲಿಟ್ಟುಕೊಳ್ಳಬೇಕು. ಅದೇನೆಂದರೆ ಹಳ್ಳಿಗಾಡುಗಳಲ್ಲಿರುವ ರೈತಾಪಿ ಜನರ ಹಣಕಾಸಿನ ತೊಂದರೆಗಳನ್ನು ನಿವಾರಣೆ ಮಾಡತಕ್ಕ ಸಾಮರ್ಥ್ಯವನ್ನು ಪಡೆದುಕೊಳ್ಳುವಂಥ ಸಹಕಾರ ಸಂಘ-ಸಂಸ್ಥೆಗಳ ಸಂಘಟನೆ ಆಗಬೇಕು ಅಷ್ಟೆ. ಇಂಥಾ ಒಂದು ಬದಲಾವಣೆ ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆಗದೆ ಹೋದರೆ, ಗ್ರಾಮಾಂತರ ಪ್ರದೇಶದ ರೈತಾಪಿ ಜನಗಳ ಜೀವನ ಬಹಳ ದುಸ್ತರವಾಗುತ್ತದೆ: ಅವರು ಸಂಕಷ್ಟಕ್ಕೊಳಗಾಗುತ್ತಾರೆ ಎಂದು ಹೇಳಿ, ಇದರ ಬಗ್ಗೆ ಸರ್ಕಾರದವರು ವಿಚಾರ ಮಾಡಬೇಕೆಂದು ಹೇಳಬಯಸುತ್ತೇನೆ. ಇದೇ ಸಮಯದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ನನ್ನ ಇನ್ನೊಂದು ಮಾತನ್ನು ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಈಗ ಸರ್ಕಾರ ಋಣ ಪರಿಹಾರ ಕಾಯಿದೆಯನ್ನು ಮಾಡಿದೆ. ಇದರಿಂದ ಏನಾಗುತ್ತದೆ ಎಂದರೆ, ಹಳ್ಳಿಗಾಡಿನ ರೈತಾಪಿ ಜನರಿಗೆ ಸ್ಥಳೀಯ ಸಹಕಾರ ಸಂಘಗಳು, ಬ್ಯಾಂಕುಗಳು ಮತ್ತು ಸಹಕಾರ ಸಂಸ್ಥೆಗಳೊಡನೆ ಹಣಕಾಸಿನ ಸಂಬಂಧದಲ್ಲಿ ಬಹುಪಾಲು ವ್ಯವಹಾರಗಳು ನಡೆಯುತ್ತವೆ. ಈ ಸಹಕಾರ ಸಂಘ-ಸಂಸ್ಥೆಗಳಲ್ಲಿರುವ ಹಣ, ಸಾರ್ವಜನಿಕರದು ; ಇದಕ್ಕೆ ಹೆಚ್ಚು ಗೌರವ ಕೊಡಬೇಕು ಮತ್ತು ಎಚ್ಚರಿಕೆಯಿಂದ ರಕ್ಷಣೆ ಮಾಡಬೇಕಾದುದು ಬಹಳ ಪ್ರಾಮುಖ್ಯವಾದ ಕರ್ತವ್ಯವಾಗಿದೆ. ಆದರೆ, ಈ ಸಂಘ-ಸಂಸ್ಥೆಗಳಲ್ಲಿ

ನುಸ್ತಿ ಬಡ್ಡಿಯ ಹಾವಳಿ ವಿಪರೀತವಾಗಿದೆ. ಇದರ ಬಗ್ಗೆ ನಾನೊಂದು ನಿದರ್ಶನವನ್ನು ಹೇಳು ವುದಾದರೆ: ಒಬ್ಬ ಹಳ್ಳಿಗಾಡಿನ ರೈತ ಒಂದು ಸಾವಿರ ರೂ.ಪಾಯಿ ಸಾಲವನ್ನು ಭೂ ಅಭಿವೃದ್ಧಿ ಬ್ಯಾಂಕಿನಿಂದ ತೆಗೆದುಕೊಂಡ ಎಂದು ತಿಳಿಯೋಣ. ಆತ ಈಗಾಗಲೇ ಬಡ್ಡಿಗೆ ಎರಡು ಸಾವಿರ ಕೊಟ್ಟು ಇನ್ನೂ 300 ರೂಪಾಯಿ ಬಡ್ಡಿಯ ರೂಪದಲ್ಲಿ ಕಟ್ಟಿದ ಮೇಲೆ, ಇನ್ನು ಮೇಲೆ ಕಟ್ಟಲಾಗುವ ಕಂತನ್ನು ಅಸಲಿಗೆ ಜಮಾ ಮಾಡಿಕೊಳ್ಳುವ ಪ್ರಸಂಗಗಳು ಇವೆ, ಮಾನ್ಯ ಮುಖ್ಯ ಮಂತ್ರಿಗಳಿಗೆ ಬೇಕಾದರೆ ನಾನು ತೋರಿಸುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ವಿವರಗಳು ನಿನ್ನೆ ನನ್ನ ಬಳಿ ಇದ್ದುವು. ಆದರೆ ಇಂದು ಇಲ್ಲ. ಇವತ್ತಿನ ದಿವಸ ಒಬ್ಬ ಹಳ್ಳಿಗಾಡಿನ ರೈತ ಒಂದು ಸಹಕಾರ ಬ್ಯಾಂಕಿನಿಂದ ಒಂದು ಸಾವಿರ ರೂ. ಸಾಲ ತೆಗೆದುಕೊಂಡು, 2,300 ರೂಪಾಯಿ ಬಡ್ಡಿ ಕೊಟ್ಟು ಅಸಲನ್ನು ತೀರಿಸಬೇಕಾದ ಪರಿಸ್ಥಿತಿ ಬಂದಿದೆ. ಆದುದರಿಂದ, ರೈತಾಪಿ ಜನರ ಮೇಲೆ ಬ್ಯಾಂಕು ಗಳ ಮತ್ತು ಸಹಕಾರಿ ಸಂಸ್ಥೆಗಳ ನುಸ್ತಿ ಬಡ್ಡಿಯ ಭಾರ ಬೀಳದಂತೆ ಸರ್ಕಾರದವರು ನೋಡಿ ಕೊಳ್ಳಬೇಕೆಂದು ಈ ಸಮಯದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಜೀತ ಪದ್ಧತಿ ನಿರ್ಮೂಲನ ವಿಚಾರ. ಒಬ್ಬ ಮನುಷ್ಯ ಸಮಾಜದಲ್ಲಿರುವ ಇನ್ನೊಬ್ಬ ಮನುಷ್ಯನನ್ನು ತನ್ನ ದಾಸನನ್ನಾಗಿ ಮಾಡಿಕೊಂಡು ಆಳುವುದು ಮನುಷ್ಯತ್ವವಲ್ಲ. ಈ ತತ್ವ ಬಹಳ ದೊಡ್ಡ ತತ್ವ; ಇದನ್ನು ಎಲ್ಲರೂ ಒಪ್ಪತಕ್ಕದ್ದಾಗಿದೆ. ಆದರೆ, ಜೀತ ಪದ್ಧತಿಯನ್ನು ನಿರ್ಮೂಲನೆ ಮಾಡಿ ಸರ್ಕಾರದವರು ಏನು ಸುಗ್ರೀವಾಜ್ಞೆಯನ್ನು ಹೊರಡಿಸಿದ್ದಾರೆ, ಅದರ ಚೌಕಟ್ಟಿನೊಳಗೆ ಇದರ ಪ್ರಕರಣಗಳು ಬರುತ್ತವೆಯೋ ಇಲ್ಲವೋ ಎಂಬ ಅನುಮಾನ ನನಗೆ ಬಂದಿದೆ. ವ್ಯವಸಾಯ ವಿಸ್ತರಣಾಧಿಕಾರಿ ಮತ್ತು ಗ್ರಾಮ ಸೇವಕರುಗಳಿಗೆ, ಹಾಗೂ ಕ್ಷೇತ್ರಾಭಿವೃದ್ಧಿ ಅಧಿಕಾರಿಗಳಿಗೆ ಸರ್ಕಾರದವರು ಒಂದು ಆದೇಶವನ್ನು ಕಳುಹಿಸಿ, ಯಾವ ಯಾವ ಊರಿನಲ್ಲಿ; ಮತ್ತು ಆ ಊರಿನ ಕುಟುಂಬಗಳಲ್ಲಿ ಯಾರು ಯಾರು ಜೀತದಾಳುಗಳನ್ನು ಇಟ್ಟುಕೊಂಡಿದ್ದಾರೆ ಅವರೆಲ್ಲರನ್ನೂ ರೌಂಡ್ ಅಪ್ ಮಾಡಿಕೊಂಡು ಕರೆದುಕೊಂಡು ಬನ್ನಿ ಎಂದು ತಿಳಿಸಿದ್ದಾರೆ. ನಾನು ಆ ಕಾನೂನನ್ನು ಓದಿ ಅರ್ಥಮಾಡಿಕೊಳ್ಳುವುದಕ್ಕೆ ಪ್ರಯತ್ನ ಪಟ್ಟೆ. ಈ ಕಾನೂನಿನ ಚೌಕಟ್ಟಿ ನೊಳಗೆ ಅವರೆಲ್ಲಾ ಬರುವುದಿಲ್ಲ. ಎಷ್ಟೋ ಜನ ಕಾಂಟ್ರಾಕ್ಟ್ ಕಾರ್ಮಿಕರು ಇರುತ್ತಾರೆ. ಅವರು ಈ ಜೀತ ಪದ್ಧತಿಗೆ ಬರುವುದಿಲ್ಲ. ಆದರೆ, ಅವರಿಗೂ ಸಹ ಚಿತ್ರಹಿಂಸೆ ಕೊಡುತ್ತಿದ್ದಾರೆ. ಕೆಲವು ರಾಜಕೀಯ ಮುಖಂಡರುಗಳ ಹಿಂಬಾಲಕರು ಮತ್ತು ಸ್ನೇಹಿತರು ಕೆಲವರನ್ನು ಹಿಡಿದು ಕೊಂಡು, ಜೀತ ಪದ್ಧತಿ ನಿರ್ಮೂಲನಾ ಕಾನೂನಿನಲ್ಲಿ ಎಷ್ಟು ವರ್ಷ ಜೈಲಿನಲ್ಲಿ ಹಾಕಬೇಕೆಂದು ಇದೆ; ಆದುದರಿಂದ ನಿಮ್ಮನ್ನು ಜೈಲಿಗೆ ಹಾಕಿಸುತ್ತೇವೆ. ಹಣ ಕೊಟ್ಟು ಬಿಟ್ಟರೆ ನಿಮ್ಮನ್ನು ಬಿಟ್ಟು ಬಿಡುತ್ತೇವೆ; ಜೈಲಿಗೆ ಹಾಕಿಸುವುದಿಲ್ಲ ಎಂದು ಹೇಳುತ್ತಿದ್ದಾರೆ. ಪಾಪ! ಅವರೆಲ್ಲಾ ವಾರಕೂಲಿ, ದಿನಕೂಲಿ ಮತ್ತು ಮಾಸ ಕೂಲಿಗಳನ್ನು ಮಾಡಿಕೊಂಡು ಬದುಕುತ್ತಿದ್ದವರು. ಅವರನ್ನು ಹಿಡಿದು ಈ ರೀತಿ ಮಾಡುತ್ತಿದಾರೆ.

ಶ್ರೀ ಡಿ. ದೇವರಾಜ ಅರಸ್.—ಹಾಗೆ ಮಾಡುತ್ತಿರುವವರು ಯಾರು ?

ಶ್ರೀ ಹೆಚ್. ಟಿ. ಕೃಷ್ಣಪ್ಪ.—ನಿಮ್ಮ ಯುವಕ ಕಾಂಗ್ರೆಸ್ಸಿನ ಮುಖಂಡರು, ಅವರ ಹೆಸರು ಗಳನ್ನು ಆಮೇಲೆ ಹೇಳುತ್ತೇನೆ. ದಯವಿಟ್ಟು ಮಾನ್ಯ ಮುಖ್ಯ ಮಂತ್ರಿಗಳು ಅವರ ಮೇಲೆ ಸ್ವಲ್ಪ ಹತೋಟಿಯನ್ನು ಇಟ್ಟುಕೊಳ್ಳಬೇಕು ಎಂದು ಹೇಳುತ್ತೇನೆ. ಕಾನೂನನ್ನು ಒಳಿತಿಗಾಗಿ ಮಾಡಿರುವುದು ನಿಜ. ಆದರೆ, ಅದನ್ನು ದುರುಪಯೋಗ ಮಾಡಿಕೊಂಡು ಕೆಲವರು ಹಣ ವಸೂಲಿ ಮಾಡುತ್ತಿದ್ದಾರೆ. ಲಕ್ಷಾಂತರ ರೂಪಾಯಿ ವಸೂಲಾಗಿದೆ, ಎಲ್ಲಾ ಕಡೆಗಳಲ್ಲೂ ಇದು ಆಗಿದೆ, ಎಲ್ಲಿ ಕುತ್ತಿಗೆಗೆ ಬರುತ್ತದೋ ಎಂದು ಎಲ್ಲರೂ ಹೇಳುವುದಕ್ಕೆ ಭಯಪಡುತ್ತಾರೆ. ಎಲ್ಲಾ ಕಡೆಯಲ್ಲೂ ಕತ್ತಲು ಆವರಿಸಿದೆ,

ಶ್ರೀ ಕೊಣಂದೂರು ಲಿಂಗಪ್ಪ.—ಯಾರು ಯಾರು ಹಣ ವಸೂಲು ಮಾಡುತ್ತಿದ್ದಾರೆ ಎಂಬು ದನ್ನು ಹೇಳಿ, ಜೈಲಿಗೆ ಹೋದರೂ ಚಿಂತೆ ಇಲ್ಲ!

ಶ್ರೀ ಎಂ.ಬಿ. ರಾಮಸ್ವಾಮಿ.—ಯಾವ ಯಾವ ತಾಲ್ಲೂಕಿನಲ್ಲಿ ನಡೆಯುತ್ತದೆ ಎಂಬುದನ್ನು ಆಧಾರಸಹಿತವಾಗಿ ಹೇಳಿ.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಬೇಕಾದಷ್ಟು ನಿದರ್ಶನಗಳು ಇವೆ. ಪೋಲಿಸ್ ಸಬ್ ಇನ್ಸ್ಪೆಕ್ಟರ್ ಹತ್ತಿರ ಹೋಗಿ ಬೆದರಿಸಿದ ನಿದರ್ಶನಗಳು ಬೇಕಾದಷ್ಟು ಇವೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.—ಇಲ್ಲಿ ಯಾವುದೇ ಪ ದ ವಿಚಾರ ಮಾತನಾಡುತ್ತಾ ಇಲ್ಲ. ಕೆಲವರು ಸಬ್ಇನ್ಸ್ಪೆಕ್ಟರ್‌ನ್ನು ಹೆದರಿಸಿ, ನಾನು ಮುಖ್ಯ ಮಂತ್ರಿಗಳಿಗೆ ಗೊತ್ತಿರುವವ, ಅವರ ಬಳಿಗೆ ಹೋಗಿ ನಿನ್ನನ್ನು ವರ್ಗ ಮಾಡಿಸುತ್ತೇನೆ ಎಂದೆಲ್ಲಾ ಬೆದರಿಕೆ ಹಾಕುತ್ತಾರೆ. ಹೀಗಿ ಮಾಡಿ ಕೆಲವು ಗ್ರಾಮಸ್ಥರನ್ನು ಹೆದರಿಸಿ ಹಣ ವಸೂಲು ಮಾಡುತ್ತಿದ್ದಾರೆ. ಇವರು ಆಳುವ ಕಾಂಗ್ರೆಸ್ಸಿಗೆ ಸೇರಿರಲಿ, ವಿರೋಧ ಪಕ್ಷಕ್ಕೆ ಸೇರಿರಲಿ, ಹೀಗೆ ನಡೆಯುತ್ತಿದೆ, ಇದನ್ನು ತಪ್ಪಿಸಬೇಕೆಂದು ನಮ್ಮ ನಾಯಕರು ಹೇಳುತ್ತಿರುವುದು.

ಶ್ರೀ ಡಿ. ದೇವರಾಜ ಅರಸ್.—ವಿಧಾನ ಸಭೆಗೆ ಬಂದಮೇಲೆ ಮಾನ್ಯ ಸದಸ್ಯರಿಗೆ ಇದೆಲ್ಲಾ ಜ್ಞಾಪಕಕ್ಕೆ ಬರುತ್ತದೆ ಎಂದು ನಾನು ತಿಳಿಯುತ್ತೇನೆ. ಏಕೆಂದರೆ, ಇಲ್ಲಿ ಭಾಷಣ ಮಾಡುವುದಕ್ಕೆ ಅನುಕೂಲವಾಗುತ್ತದೆ, ಏನು ಬೇಕಾದರೂ ಹೇಳಬಹುದು ಎಂದು ಮಾನ್ಯ ಸದಸ್ಯರು ತಿಳಿದು ಕೊಂಡಿರಬಹುದು. ದಯವಿಟ್ಟು ಮಾನ್ಯ ಸದಸ್ಯರು ಕ್ಷಮಿಸಬೇಕು. ಮಾನ್ಯ ಸದಸ್ಯರು ಜನತಾ ಪ್ರತಿನಿಧಿಗಳು, ಮಾತನಾಡುವ ಹಕ್ಕು ಇದೆ. ಮಾನ್ಯ ಸದಸ್ಯರು ಇಲ್ಲಿಯವರೆಗೆ ಮಾತನಾಡಿದ್ದು ನಾನು ಕೇಳಿದ್ದೇನೆ. ಅವರು ಹೇಳುವಾಗ ಇಂಥವನು ಇಂಥವರಿಂದ, ಇಷ್ಟು ಹಣವನ್ನು, ಇಂಥಾ ಊರಿನಲ್ಲಿ ಪಡೆದಿದ್ದಾನೆ ಎಂಬುದನ್ನು ಆಧಾರಸಹಿತವಾಗಿ ತಿಳಿಸಿದರೆ ಒಳ್ಳೆಯದು. ಅಥವಾ ಇವೆಲ್ಲಾ ಮಾಹಿತಿಗಳನ್ನು ನಮಗೆ ರಹಸ್ಯವಾಗಿ ಬರೆದು ತಿಳಿಸಿರಿ. ತಾವು ತಿಳಿಸಿದ ಮೇಲೂ ನಾನು ಸಂಬಂಧಪಟ್ಟವರ ಮೇಲೆ ಯಾವುದೇ ಕ್ರಮ ತೆಗೆದುಕೊಳ್ಳದೆ, ಅದನ್ನು ದೂರಿಕರಿಸಿ, ಅಥವಾ ವಿನಾಕಾರಣ ಸುಮ್ಮನೆ ಇದ್ದುಬಿಟ್ಟರೆ, ಅಥವಾ ಅಲಕ್ಷ್ಯ ಮಾಡಿದರೆ, ಆಗ ಮಾನ್ಯ ಸದಸ್ಯರು ದೂರು ಮಾಡಿದರೆ, ಅದಕ್ಕೆ ಅರ್ಥ ಇದೆ. ಆದರೆ ಮಾನ್ಯ ಸದಸ್ಯ ಸ್ನೇಹಿತರು ಇದುವರೆಗೂ ಇಂಥಾ ಒಂದು ದೂರನ್ನು ನನ್ನ ಗಮನಕ್ಕೆ ತಂದಿಲ್ಲ ಇದ್ದಕ್ಕಿದ್ದಹಾಗೆ, ಈ ಸದನದಲ್ಲಿ ಅಲ್ಲಿ ಹೀಗಾಗಿದೆ, ಇಲ್ಲಿ ಹೀಗಾಗಿದ ಎಂದು ಲೋಕೋಭಿರಾಮವಾಗಿ ಹೇಳಿದರೆ ಇದರ ಅರ್ಥವೇನು? ಪ್ರತ್ಯಕ್ಷವಾಗಿ ಕಂಡರೂ ಪ್ರಾಮಾಣಿಕರಿಸಿ ನೋಡು ಎಂದು ನಾಣ್ಣುಡಿ ಇದೆ. ಸುಮ್ಮನೆ ಉತ್ಪ್ರೇಕ್ಷೆ ಮಾಡುತ್ತಾ ಹೇಳುವುದು ಸರಿಯಲ್ಲ. ಹಾಗೆ ಉತ್ಪ್ರೇಕ್ಷೆ ಮಾಡಿ ಮಾತನಾಡಿದನ್ನೆಲ್ಲಾ ನಾವು-ನೀವು ಗಮನಕ್ಕೆ ತೆಗೆದುಕೊಳ್ಳುವುದೂ ಕಷ್ಟ. ಆದುದರಿಂದ ತಾವು, ಮಾನ್ಯ ಸದಸ್ಯರು ಆಧಾರ ಸಹಿತ ವಾಗಿ ಹೇಳಿದರೆ ಅಥವಾ ನಮಗೆ ತಿಳಿಸಿದರೆ ಅದರ ಮೇಲೆ ಕ್ರಮ ತೆಗೆದುಕೊಳ್ಳುವುದಕ್ಕೆ ನಮಗೂ ಅನುಕೂಲವಾಗುತ್ತದೆ ಕೋಟಿಗಟ್ಟಲೆ ಜನರಿಗೆ ಸಂಬಂಧಪಟ್ಟ ಕಾರ್ಯಕ್ರಮಗಳು ಏಕಕಾಲದಲ್ಲಿ ನಡೆಯುತ್ತಾ ಇರುವಾಗ, ಇಂಥಾ ಅಲ್ಪಸ್ವಲ್ಪ ತಪ್ಪುಗಳು ಆಗಿಹೋಗಬಹುದು. ಆದುದರಿಂದ, ಆಧಾರಸಹಿತವಾಗಿ ಮಾನ್ಯ ಸದಸ್ಯರು ಹೇಳಿದರೆ, ಮತ್ತು ಅದರಲ್ಲಿ ಏನಾದರೂ ಲೋಪದೋಷ ಗಳು ನಮಗೆ ಕಂಡುಬಂದರೆ ಪರಿಹಾರ ಕಂಡುಹಿಡಿಯುವುದಕ್ಕೆ ಅನುಕೂಲವಾಗುತ್ತದೆ ಎಂದು ಹೇಳಬಯಸುತ್ತೇನೆ. ಇಲ್ಲಿ ಯಾವುದೇ ಪಕ್ಷದ ವಿಚಾರವಿಲ್ಲ. ಯಾವ ಪಕ್ಷದವರು ಮಾಡಿದರೂ ಇದರಲ್ಲಿ ಯಾವುದೇ ದಾಕ್ಷಿಣ್ಯವಿಲ್ಲ. ಆದರೆ ಇಲ್ಲಿ ಕುಳಿತಿರುವ ಪ್ರತಿಯೊಬ್ಬ ಮಾನ್ಯ ಸದಸ್ಯರಿಗೂ ಜವಾಬ್ದಾರಿ ಇದೆ. ಇಂಥಾ ವಿಚಾರಗಳು ಮಾನ್ಯಸದಸ್ಯರ ಗಮನಕ್ಕೆ ಇಲ್ಲಿ ಕುಳಿತ ಮೇಲೆನೂ ಬರುವುದಿಲ್ಲ. ತಮಗೆಲ್ಲಾ ಮೊದಲೇ ಗೊತ್ತಿರುವಂಥಾದ್ದು ಆದುದರಿಂದ, ಇವೆಲ್ಲವನ್ನೂ ನಮ್ಮ ಗಮನಕ್ಕೆ ತಂದರೆ ಒಳ್ಳೆಯದು. ಅದರ ಬಗ್ಗೆ ಸರ್ಕಾರದ ಕರ್ತವ್ಯ ಇದೆ, ಅದು ಮಾಡುತ್ತದೆ. ಹಾಗೇನಾದರೂ ನಾವು ಕರ್ತವ್ಯಲೋಪ ಮಾಡಿದರೆ, ನಿಂದನೆ ಮಾಡತಕ್ಕ ಅಧಿಕಾರ ತಮಗೆ ಇದೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಮಾನ್ಯ ಮುಖ್ಯಮಂತ್ರಿಗಳು ಏನು ವಿಚಾರ ತಿಳಿಸಿದರು ಅದರ ಬಗ್ಗೆ ನನ್ನ ಪೂರ್ಣ ಅನುಮೋದನೆ ಇದೆ. ಆದರೆ ಇಂಥ ಪ್ರಸಂಗಗಳು ಏನು ಆಗುತ್ತವೆ, ಅಂಥ ವರು ಯಾರೂ ಮುಂದೆ ಒಂದು ಸಾಕ್ಷಿ ಹೇಳುವುದಕ್ಕೆ ತಯಾರಿರುವುದಿಲ್ಲ. ನೊಂದ ವ್ಯಕ್ತಿಯೂ ಸಹ ಬರುವುದಿಲ್ಲ.

ಶ್ರೀ ಡಿ. ದೇವರಾಜ ಅರಸ್.—ಯಾರೋ ಒಬ್ಬರು ನಿಮ್ಮ ಮೇಲೆ ದೂರು ಮಾಡುತ್ತಾರೆ, ಅವರು ಸಾಕ್ಷಿ ಹೇಳುವುದಕ್ಕೆ ಮುಂದೆ ಬರಧಿದ್ದರೆ Can I believe that you did such and such a thing?

ಶ್ರೀ ಹೆಚ್.ಟಿ. ಕೃಷ್ಣಪ್ಪ.--ಸಣ್ಣಪುಟ್ಟ ಮನೆಗಳನ್ನು ಮಾತ್ರ ಹೊಡೆದು ಹಾಕಿದ್ದಾರೆ, ದೊಡ್ಡ ಮನೆಗಳನ್ನು ಹೊಡೆದು ಹಾಕಿಲ್ಲ, ಇದರಲ್ಲಿಯೂ ಸಹ ಲಂಚ ತಿನ್ನುವ ವ್ಯವಹಾರ ನಡೆದಿದೆ.

ಶ್ರೀ ಹೆಚ್.ಎಂ. ಚನ್ನಬಸಪ್ಪ.—ತಾವು ವಿಷಯಗಳನ್ನು ಪೂರ್ತಿ ಅರಿತುಕೊಳ್ಳದೆ ಮಾತ ನಾಡುವುದಕ್ಕೆ ನಾನು ವಿಷಾದ ಪಡಬೇಕಾಗಿದೆ. ರಸ್ತೆಗಳನ್ನು ಅಗಲ ಮಾಡತಕ್ಕದ್ದು ನಮ್ಮ ಉದ್ದೇಶ. ಇನ್ನೊಬ್ಬರ ಜಮೀನಲ್ಲಿ ಒಂದು ಇಂಚು ಜಾಗವನ್ನು ವಶಪಡಿಸಿಕೊಳ್ಳುವ ಇಚ್ಛೆಯೂ ನಮಗೆ ಇಲ್ಲ. ಸರ್ಕಾರದ ಜಮೀನನ್ನು ಯಾರು ಅಕ್ರಮಣ ಮಾಡಿಕೊಂಡಿದ್ದಾರೋ ಅಂತಹವ ರನ್ನು ಬಿಡಿಸಬೇಕೋ ಬೇಡವೋ ತಾವೆ ಹೇಳಿ? ಮೊದಲು ಅಧಿಕಾರಿಗಳಿಗೆ ಸೂಚನೆ ಕೊಟ್ಟಾಗ ತಪ್ಪು ಅರ್ಥ ಮಾಡಿಕೊಂಡು ಈ ರೀತಿ ನಡೆದಿವೆ. ನಮಗೆ 60 ಅಡಿ ಮಾಡಬೇಕೆನ್ನುವ ಇಚ್ಛೆ ಬಂದರೆ, ಜಮೀನನ್ನು ಅಕ್ವೈರ್ ಮಾಡಿಕೊಂಡು ಮುಂದಕ್ಕೆ ಬರುತ್ತೇವೆ. ಸರ್ಕಾರಿ ಜಮೀನಿನಲ್ಲಿ ಎನ್‌ಕ್ರೋಚ್‌ಮೆಂಟ್ ಆಗಿರುವುದನ್ನು ಮಾತ್ರ ಬಿಡಿಸುವುದೇ ಸರ್ಕಾರದ ಉದ್ದೇಶ ಅನ್ಯಾಥಾ ಇಲ್ಲ.

ಶ್ರೀ ಹೆಚ್.ಟಿ. ಕೃಷ್ಣಪ್ಪ.--ಒತ್ತುವರಿ ಮಾಡಿಕೊಂಡು ಜನಗಳಿಗೆ ತೊಂದರೆಯಾದರೆ, ನಮ್ಮ ಸಹಾನುಭೂತಿ ಇಲ್ಲ. ಆದರೆ ಕೆಲವರಿಗೆ ಒಂದು ರೀತಿ ಇನ್ನೂ ಕೆಲವರಿಗೆ ಇನ್ನೊಂದು ರೀತಿ ಮಾಡಿರುತ್ತಾರೆ.

ಶ್ರೀ ಹೆಚ್.ಎಂ. ಚನ್ನಬಸಪ್ಪ.--ಆ ರೀತಿ ನಡೆದಿರುವ ಅಂಶವನ್ನು ನನ್ನ ಗಮನಕ್ಕೆ ತಂದರೆ 24 ಗಂಟೆಯೊಳಗೆ ಸರಿಪಡಿಸುತ್ತೇನೆ.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಅಧ್ಯಕ್ಷರೆ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡ ಗಳ ಅಭಿವೃದ್ಧಿ ಕಾರ್ಪೊರೇಷನ್ ಏನು ಇದೆ, ಈ ಕಾರ್ಪೊರೇಷನ್‌ನಲ್ಲಿ ಸಹಾಯ ಮಾಡುವುದಕ್ಕೆ ಎಷ್ಟು ಧನವಿದೆಯೋ ನನಗೆ ಗೊತ್ತಿಲ್ಲ. ಎಷ್ಟು ಕಡೆಗೆ ಸಹಾಯ ಕೊಡುವುದಕ್ಕೆ ಧನ ಶೇಖರಣೆ ಯಾಗಿದೆಯೋ ಗೊತ್ತಿಲ್ಲ. ಒಟ್ಟಾರೆ ನಾನು ತಿಳಿದುಕೊಂಡಿರುವ ಪ್ರಕಾರ ಒಂದೊಂದು ತಾಲ್ಲೂಕಿ ನಿಂದ ಒಂದು ಕೋಟಿ ರೂಪಾಯಿಗಳಿಗೂ ಮೀರಿ ಸಹಾಯ ಕೋರುವ ಅರ್ಜಿಗಳು ಕಾರ್ಪೊರೇಷನ್ ತಲುಪಿವೆ. ಉದಾಹರಣೆಗೆ ನಮ್ಮಲ್ಲಿ ಅನುಸೂಚಿತ ಜಾತಿಯ ವರ್ಗಕ್ಕೆ ಸೇರಿದಂತಹ ಜನ ಕೇವಲ 8 ಪರ್ಸೆಂಟ್ ಇದ್ದಾರೆ. ಒಟ್ಟು ಜನಸಂಖ್ಯೆಯಲ್ಲಿ 8 ಪರ್ಸೆಂಟ್ ಅಂದರೆ 1400 ಅರ್ಜಿಗಳು ಬರೀ 10 ಸಾವಿರ ರೂಪಾಯಿನ ಅರ್ಜಿಗಳೇ ಬಂದಿವೆ, 3-4 ಸಾವಿರ ರೂಪಾಯಿನದು ಬಿಟ್ಟು. ಇದರ ಬಗ್ಗೆ ಎಷ್ಟು ಅರ್ಜಿಗಳು ಬಂದಿವೆ, ಉತ್ತರ ಕೊಡುವ ಕಾಲದಲ್ಲಿ ದಯಮಾಡಿ ತಿಳಿಸಬೇಕು. ಪ್ರತಿ ಯೊಬ್ಬರೂ ಅರ್ಜಿ ಹಾಕುವುದಕ್ಕಾಗಿ 100-150 ರೂಪಾಯಿಗಳನ್ನು ಖರ್ಚುಮಾಡಿದ್ದಾರೆ ಒಂದೊಂದು ಅರ್ಜಿ ಫಾರಂಗೆ 5 ರೂಪಾಯಿನಂತೆ ಮಾರಾಟ ಮಾಡಿದ್ದಾರೆ. ಹರಿಜನ ಮುಖಂಡರೇ ಹರಿಜನರನ್ನು ಉದ್ಧಾರ ಮಾಡುತ್ತೇವೆಂದು ಅವರ ರಕ್ತ ಹೀರುತ್ತಿದ್ದಾರೆ.

ಶ್ರೀ ಎಂ.ಬಿ. ರಾಮಸ್ವಾಮಿ —ಈ ಮನೆಯ ಹೊರಗಡೆ ನಡೆಯುತಕ್ಕ ವಿಚಾರಗಳ ಬಗ್ಗೆ ಇಲ್ಲಿ ಅಪಾದನೆ ಮಾಡುತ್ತಿರುವುದು.

ಅಧ್ಯಕ್ಷರು.—ಮಾನ್ಯ ರಾಮಸ್ವಾಮಿಯವರು ಮಾತನಾಡುವಾಗ ನನ್ನ ಅಪ್ಪಣೆ ತೆಗೆದು ಕೊಂಡು ಮಾತನಾಡಬೇಕು. ನಾಲ್ಕು ವರ್ಷವಾಗಿದೆ ತಾವು ಇನ್ನೂ ಈ ರೀತಿ ಮಾಡಿಕೊಂಡು ಹೋದರೆ ಹೇಗೆ? ಇದು ಸಭೆಯ ಲಕ್ಷಣವೇ? ಮಾನ್ಯ ಕೃಷ್ಣಪ್ಪನವರೇ ದಯಮಾಡಿ ಭಾಷಣವನ್ನು ಮುಗಿಸಬೇಕು.

ಶ್ರೀ ಹೆಚ್.ಟಿ. ಕೃಷ್ಣಪ್ಪ.—ಹರಿಜನ ಬಗ್ಗೆ ನಮಗೂ ಜವಾಬ್ದಾರಿ ಇದೆ, ದೇಶಕ್ಕೂ ಜವಾ ಬ್ದಾರಿ ಇದೆ. ಹರಿಜನರಿಗೆ ಅನ್ಯಾಯವಾದರೆ, ದೇಶಕ್ಕೆ ಅನ್ಯಾಯ ಆದಂತೆ. ಅಂಥಾದ್ದನ್ನು ಕಂಡಾಗ, ಕೇಳಿದಾಗ ಹೇಳಬೇಕಾದುದು ನನ್ನ ಕರ್ತವ್ಯ ವೈಯಕ್ತಿಕವಾಗಿ ಯಾರನ್ನು ಉದ್ದೇ ಶಿಸಿಯೂ ಮಾತನಾಡಿಲ್ಲ. ಇಂತಾದ್ದು ಬೇಕಾದಷ್ಟು ನಡೆದಿದೆ, ಗ್ರಾಮಾಂತರ ಪ್ರದೇಶಕ್ಕೆ ಹೋಗಿ ನೋಡಿ. ತಾಲ್ಲೂಕು ಮತ್ತು ಹೋಬಳಿ ಮಟ್ಟದಲ್ಲಿ ನಾನು ಸಾಲ ಕೊಡಿಸುತ್ತೇನೆಂದು ಚೀಲ ಹಾಕಿಕೊಂಡು ವಸೂಲು ಮಾಡುತ್ತಿರುವುದು ನಡೆಯುತ್ತಾ ಇದೆ. ನೀವು ಸಾಧ್ಯವಾದಷ್ಟು ಮಟ್ಟಿಗೆ ತಿದ್ದಿ, ನಾವೇ ತಿದ್ದುತ್ತೇವೆಂದು ತಿಳಿದುಕೊಂಡಿದ್ದಾರೆ ಅದಕ್ಕಿಂತ ತಪ್ಪು ಬೇರೆ ಇಲ್ಲ.

3 P.M.

ಈ ರಾಜ್ಯಪಾಲರ ಭಾಷಣದ ಬಗ್ಗೆ ಮಾತನಾಡತಕ್ಕಂಥಾದ್ದು ಬಹಳ ಇದ್ದರೂ ಕೂಡ ಅದಕ್ಕೆ ಬೇರೆ ಸಮಯವನ್ನು ಉಪಯೋಗಿಸಿಕೊಂಡು ನಾನು ಮಾತನಾಡುವವನಿದ್ದೇನೆ ಆದುದರಿಂದ ನಾನು ಮಾತನಾಡುವುದಕ್ಕೆ ಹೆಚ್ಚು ಕಾಲಾವಕಾಶವನ್ನು ತೆಗೆದುಕೊಳ್ಳದೆ ಒಂದೇ ಒಂದು ವಿಚಾರವನ್ನು ತಮ್ಮಲ್ಲಿ ಭಿನ್ನಹ ಮಾಡಿಕೊಳ್ಳುತ್ತೇನೆ. ಅದು ಯಾವ ವಿಷಯವೆಂದರೆ ಪತ್ರಿಕೋದ್ಯಮದ ಬಗ್ಗೆ. ಮೊದಲೂ ಸಹ ಆ ಬಗ್ಗೆ ಪ್ರಸ್ತಾಪ ಮಾಡಿದ್ದೇನೆ. ಮೊದಲು ತುರ್ತು ಪರಿಸ್ಥಿತಿ ಬರುವ ಮುನ್ನವೂ ಇಂತಿಂಥಾದ್ದನ್ನು ಬರೆಯಬಾರದು ಎನ್ನುವ ಆದೇಶ ಹೋಗಿತ್ತು. ಈ ದಿವಸ ತುರ್ತು ಪರಿಸ್ಥಿತಿ ಬಂದಮೇಲೆ ಇಂತಿಥಾದ್ದನ್ನು ಬರೆಯಲೇಬೇಕು ಅನ್ನುವ ಆದೇಶ ಹೋಗಿದೆ. ಇವೆರಡಕ್ಕೂ ವ್ಯತ್ಯಾಸ ಇಷ್ಟೆ. ಇದು ಎಲ್ಲಿಯತನಕ ಹೋಗುತ್ತಾ ಇದೆ ಎಂದರೆ ಯಾವದಾದರು ಒಂದು ರಾಜಕೀಯ ಪಕ್ಷದಲ್ಲಿ ಬೇರೆ ಪಕ್ಷದ ಸದಸ್ಯರೊಬ್ಬರು ಭಾಗವಹಿಸಿದರೆ ಅದೂ ಕೂಡ ಪ್ರೆಸ್ಸಿಗೆ ಹೋಗುವುದಕ್ಕೆ ಅವಕಾಶ ಇಲ್ಲ. ಇಂಥಿಂಥ ವಿಷಯಗಳನ್ನು ಹೀಗೀಗೇ ಹಾಕಬೇಕು, ಮುಖ ಪುಟದಲ್ಲಿ ಪ್ರಧಾನಿಯವರ ಫೋಟೋ ಹೀಗೆ ಇರಬೇಕು ಅನ್ನುವ ಆದೇಶ ಇದೆ, ಅಲ್ಲದೆ ದಪ್ಪ ಅಕ್ಷರದಲ್ಲಿ ಮುಖಪುಟದಲ್ಲಿ ಹೀಗೆ ಇರಬೇಕು ಎನ್ನುವ ಆದೇಶವೂ ಇದೆ, ಚಿಲ್ಲರೆ ನಾಯಕರದ್ದು ಇದ್ದರೆ ಅದು ಯಾವ ರೀತಿ ಬರೆಯಬೇಕು ಅಂತ ಇದೆ. ಇಂಥಾ ಒಂದು ಪತ್ರಿಕೋದ್ಯಮವನ್ನು ನಾವು ಇಟ್ಟು ಕೊಂಡರೆ ಇದು ಎಷ್ಟರಮಟ್ಟಿಗೆ ಪ್ರಜಾಪ್ರಭುತ್ವ ಬಳೆಸುವುದಕ್ಕೆ ಸಹಾಯವಾಗುತ್ತದೆ ಎನ್ನುವುದನ್ನು ನೋಡಬೇಕು. ಇದು ನಾಚಿಗೆಗೇಡುತನ, ಇದು ಊಹೆಗೆ ನಿಲುಕದೇ ಇರತಕ್ಕಂಥಾ ವಿಚಾರ, ಇದು ನ್ಯಾಯವೇ, ಇದು ಪೂರ್ಣ ಖಂಡನೀಯ ಎಂದು ನಾನು ಪ್ರತಿಭಟಿಸಿ ನನಗೆ ಇಷ್ಟು ಮಾತನಾಡಲು ಮಾನ್ಯ ಅಧ್ಯಕ್ಷರು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ಪುಟ್ಟಸ್ವಾಮಿ (ಚಾಮರಾಜನಗರ).—ಸನ್ಮಾನ್ಯ ಅಧ್ಯಕ್ಷರೇ, ಈ ಸದನದಲ್ಲಿ ಮಾನ್ಯ ರಾಜ್ಯಪಾಲರು ಮಾಡಿದ ಭಾಷಣಕ್ಕೆ ವಂದನಾ ನಿರ್ಣಯವನ್ನು ಮಂಡಿಸಿರತಕ್ಕಂಥಾ ಮಾನ್ಯ ಸದಸ್ಯರ ನಿರ್ಣಯಕ್ಕೆ ನನ್ನ ಬೆಂಬಲವನ್ನು ಸೂಚಿಸುತ್ತಾ, ಒಂದೆರಡು ವಿಷಯಗಳನ್ನು ಪ್ರಸ್ತಾಪ ಮಾಡಿ ಆ ಬಗ್ಗೆ ನಾನು ಕೆಲವು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ.

ಮಾನ್ಯ ರಾಜ್ಯಪಾಲರು ಅವರ ಭಾಷಣದಲ್ಲಿ ರಾಷ್ಟ್ರದ ಮುಂದೆ ನಮ್ಮ ಸಮಾಜವಾದ ಗುರಿಯನ್ನು ಇಡುವಸಲುವಾಗಿ 20 ಅಂಶಗಳ ಒಂದು ಕಾರ್ಯಕ್ರಮವನ್ನು ಹಾಕಿಕೊಂಡು ನಮ್ಮ ಸರ್ಕಾರ ಏನು ಪ್ರಯತ್ನಗಳನ್ನು ಮಾಡುತ್ತಾ ಇದೇ ಅಂತ ಹೇಳಿದ್ದಾರೆ. ಆ ಪ್ರಯತ್ನಗಳಿಗೆ ತಕ್ಕ ಕಾರ್ಯಕ್ರಮ ಹಾಕಿಕೊಂಡು ತ್ವರಿತವಾಗಿ ಮತ್ತು ಯಶಸ್ವಿಯಾಗಿ ಜಾರಿಗೆ ಕೊಡುವ ಸಲುವಾಗಿ. ಗ್ರಾಮಾಂತರದಲ್ಲಿ ಆ ಕಾರ್ಯಕ್ರಮಗಳನ್ನು ಅಳವಡಿಸುವ ಸಲುವಾಗಿ, ಈಗಾಗಲೇ ಸರ್ಕಾರದ ಆಶ್ರಯದಲ್ಲಿ ಕೆಲಸ ಮಾಡತಕ್ಕಂಥಾ ಸಹಕಾರೀ ಇಲಾಖೆ ಏನು ಇದೆ ಅದು ಸಹಕಾರ ಸಂಘಗಳನ್ನು ಸ್ಥಾಪನೆ ಮಾಡಿ ಅವರ ಮೂಲಕ 20 ಅಂಶದ ಕಾರ್ಯಕ್ರಮ ಏನು ಇದೆ ಅದರಲ್ಲಿ ಇರುವುದಕ್ಕಿಂತಲೂ ಕೂಡ ಒಂದು ಹೆಚ್ಚಿನ ಕಾರ್ಯಕ್ರಮಗಳನ್ನು ಅಳವಡಿಸಿಕೊಂಡು ಕೆಲಸಮಾಡುತ್ತಿದ್ದಾರೆ. ಬಡವರನ್ನು ಉದ್ಧಾರ ಮಾಡುವ ದೃಷ್ಟಿಯಿಂದ ಏನು ಒಂದು ನೀತಿಯನ್ನು ಸರ್ಕಾರ ಹಾಕಿಕೊಂಡಿದೆ ಅದು ಸಂತೋಷದ ವಿಷಯ. ಅಲ್ಲದೆ ಅವರು ರಿಸರ್ವ್ ಬ್ಯಾಂಕ್ ನವರೊಡನೆ ಸಮಾಲೋಚನೆ ನಡೆಸಿ ಅವರು ಕೊಟ್ಟಂಥ ಸಲಹೆಗಳನ್ನು ಈವೊತ್ತು ಅನುಸರಿಸಿ ಸಹಕಾರೀ ಸಂಘಗಳನ್ನು, ಅಂದರೆ ಕೃಷಿಕರ ಸಂಘಗಳನ್ನು ರಚನೆ ಮಾಡುತ್ತಿದ್ದಾರೆ. ಸಹಕಾರೀ ಸಂಘಗಳನ್ನು ಹೊಸದಾಗಿ ರಚನೆ ಮಾಡುವುದಕ್ಕೆ ಅವರ ಒಂದು ನೀತಿಯನ್ನು ಸರ್ಕಾರ ಒಪ್ಪಿ ಹಾಲಿ ಇರತಕ್ಕಂಥ ಸಹಕಾರ ಸಂಘಗಳನ್ನು ಒಟ್ಟುಗೂಡಿಸಿ ಕೆಲವು ಆಧಾರಗಳನ್ನು ಅನುಸರಿಸಿ ರಚನೆ ಮಾಡುತ್ತಿದ್ದಾರೆ. ಯಾವ ರೀತಿ ಕೃಷಿ ಸೇವಾ ಸಹಕಾರ ಸಂಘಗಳನ್ನು ಮಾಡಬೇಕು ಅನ್ನುವುದಕ್ಕೆ ಸರ್ಕಾರ ಒಂದು ನೀತಿಯನ್ನು ಹಾಕಿಕೊಂಡಿದೆ. ಮತ್ತು ನಮ್ಮ ರಾಜ್ಯದಲ್ಲಿ ಅದರಲ್ಲೂ ರೇಷ್ಮೆ ಬೆಳೆ ಬೆಳೆಯುವ ಭಾಗಗಳಲ್ಲಿ ರೇಷ್ಮೆ ಬೆಳೆ ಬೆಳೆಯುವ ವ್ಯವಸಾಯಗಾರರನ್ನೂ ಸೇರಿಸಿ ಒಂದು ಸಹಕಾರೀ ಸಂಘವನ್ನು ರಚನೆ ಮಾಡಬೇಕು ಅನ್ನುವ ಒಂದು ನೀತಿಯನ್ನು ಸರ್ಕಾರ ಹಾಕಿಕೊಂಡಿದೆ. ಈಗಾಗಲೇ ನಮ್ಮ ಮೈಸೂರು ರಾಜ್ಯದಲ್ಲಿ ಈ ರೀತಿಯಾಗಿ ಹೆಚ್ಚು ರೇಷ್ಮೆ ಬೆಳೆ ಬೆಳೆಯುತಕ್ಕಂಥ ಭಾಗದಲ್ಲೂ ಕೂಡ ಏನು ಮಾಡಿದ್ದಾರೆ ಎಂದರೆ ರೇಷ್ಮೆ ವ್ಯವಸಾಯ ಮತ್ತು ಕೃಷಿ ವ್ಯವಸಾಯ ಇವೆರಡನ್ನೂ ಹೊಂದಿಸಿಕೊಂಡಂತೆ

ಒಂದು ಸಹಕಾರೀ ಸಂಘವನ್ನು ಸ್ಥಾಪನೆ ಮಾಡುವುದಕ್ಕೆ ಒಂದು ನೀತಿ ಹಾಕಿಕೊಂಡಿದ್ದಾರೆ. ಅವರು ಏನು ಒಂದು ನೀತಿ ಇಟ್ಟುಕೊಂಡಿದ್ದಾರೆ ಎಂದರೆ ಕನಿಷ್ಠಪಕ್ಷ ಗ್ರಾಮಾಂತರ ಪ್ರದೇಶದಲ್ಲಿ 10 ಸಾವಿರ ಪ್ರಜಾಸಂಖ್ಯೆ ಇರತಕ್ಕಂಥಾ ಕಡೆ ಆ ಗ್ರಾಮಗಳನ್ನು ಒಟ್ಟುಗೂಡಿಸಿ ಅಲ್ಲಿ ಇರತಕ್ಕಂಥಾ ಪಂಚಾಯಿತಿಗಳಲ್ಲಿರುವ ಸಹಕಾರ ಸಂಘಗಳನ್ನು ಒಂದುಗೂಡಿಸಿ ಪಂಚಾಯಿತಿ ಸೇವಾ ಸಹಕಾರ ಸಂಘಗಳನ್ನು ಸ್ಥಾಪನೆ ಮಾಡುವುದಕ್ಕೆ, ವಯಬಲ್ ಯೂನಿಟ್ ಮಾಡತಕ್ಕಂಥಾ ಒಂದು ಗುರಿಯನ್ನು ಇಟ್ಟುಕೊಂಡಿದ್ದಾರೆ. ಈ ಒಂದು ನೀತಿಯನ್ನು ಸರ್ಕಾರದವರು ಇಟ್ಟು ಕೊಂಡಿದ್ದಾರೆ, 10 ಸಾವಿರ ಜನಸಂಖ್ಯೆ ಇರಬೇಕು; ಸಾವಿರ ಕೃಷಿ ಜಮೀನ್ದಾರರು ರಬೇಕು, ರೇಷ್ಮೆ ಬೆಳೆಗಾರರಾದರೆ 2 ಸಾವಿರ ಎಕರೆಯಲ್ಲಿ ರೇಷ್ಮೆ ಬೆಳೆಯತಕ್ಕಂಥಾ ವ್ಯವಸಾಯಗಾರರು ಇರಬೇಕು ಮತ್ತು ಈ ಸಹಕಾರ ಸಂಘಕ್ಕೆ ಎಲ್ಲಾ ವರ್ಗದ ಜನರೂ ಷೇರುದಾರರಾಗಿರಬೇಕು ಅಂತ ಒಂದು ನೀತಿ ಇಟ್ಟುಕೊಂಡಿದ್ದಾರೆ. ಮತ್ತು ಈ ರೀತಿಯಾದಂಥ ಒಂದು ಸಂಘವನ್ನು ರಚನೆ ಮಾಡಬೇಕಾದರೆ. ಅದು 5 ಮೈಲಿ ಸುತ್ತಳತೆ ಒಳಗೆ ಇರಬೇಕು ಅಂತ ಇದೆ. ಈ ರೀತಿಯಾಗಿ ಕೆಲವು ಆಧಾರಗಳನ್ನು ಅನುಸರಿಸಿ ಸಹಕಾರಿ ಸಂಘಗಳನ್ನು ಸರ್ಕಾರದವರು ರಚನೆ ಮಾಡುತ್ತಾರೆ. ನಮ್ಮ ಜಿಲ್ಲೆಯಲ್ಲಿ ಈ ರೀತಿಯಾಗಿ ಕೆಲವು ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡಿದ್ದಾರೆ. ಇನ್ನು ಕೆಲವೊಂದು ಸಂಘಗಳನ್ನು ರಿಜಿಸ್ಟರ್ ಮಾಡುವುದಕ್ಕೆ ಒಂದು ಸಮಿತಿ ಮಾಡಿದ್ದಾರೆ, ಅದರಲ್ಲಿ ಜಿಲ್ಲಾ ಮಟ್ಟದ ಒಬ್ಬ ಅಧಿಕಾರಿ, ರೇಷ್ಮೆ ವಿಭಾಗದ ಜಿಲ್ಲಾ ಮಟ್ಟದ ಅಧಿಕಾರಿ ಮತ್ತು ಜಿಲ್ಲಾ ಬ್ಯಾಂಕ್‌ನಿಂದ ಒಬ್ಬ ಅಧಿಕಾರಿ ಇರುತ್ತಾರೆ. ಅವರು ಆ ಭಾಗದಲ್ಲಿ ಸಂಚಾರ ಮಾಡಿ ಸಲಹೆಗಳನ್ನು ಕೊಟ್ಟು ಅವರಿಂದ ಆ ಸಂಘಗಳನ್ನು ರಚಿಸುವುದಕ್ಕೆ ಸರ್ಕಾರ ಈ ಒಂದು ಸಮಿತಿಯನ್ನು ನೇಮಿಸಿದೆ. ಈ ಒಂದು ಹೊಸ ನೀತಿಯನ್ನು ಹಾಕಿಕೊಂಡಿದ್ದಕ್ಕೆ ಅದನ್ನು ನಾನು ಸ್ವಾಗತ ಮಾಡುತ್ತೇನೆ. ನಾನು ಮೊದಲೇ ಹೇಳಿದ ಹಾಗೆ ಒಂದು ಸಹಕಾರ ಸಂಘ ರಚನೆ ಮಾಡಬೇಕಾದರೆ ಕನಿಷ್ಠಪಕ್ಷ 10 ಸಾವಿರ ಜನ ಸಂಖ್ಯೆ ಇರಬೇಕು 4 ಸಾವಿರ ಎಕರೆ ಕೃಷಿ ಜಮೀನ್ದಾರರು ಇರಬೇಕು ಇಲ್ಲವೇ 2 ಸಾವಿರ ಎಕರೆಯಲ್ಲಿ ರೇಷ್ಮೆ ಬೆಳೆ ಬೆಳೆಯುತಕ್ಕಂಥ ವ್ಯವಸಾಯಗಾರರು ಇರಬೇಕು ಮತ್ತು ಇದು 5 ಮೈಲಿ ಸುತ್ತಳತೆಯಲ್ಲಿ ಇರಬೇಕು ಅಂತ ಇದೆ ಮತ್ತು 4-6 ಸಹಕಾರಿ ಸಂಘಗಳನ್ನು ಒಟ್ಟುಗೂಡಿಸಿ ಒಂದು ಸಂಘ ಇರಬೇಕು ಅಂತ ಇದೆ. ಈಗಾಗಲೇ 4-6 ಸಹಕಾರೀ ಸಂಘಗಳನ್ನು ಅಸಿಸ್ಟೆಂಟ್ ರಿಜಿಸ್ಟ್ರಾರ್ ರಿಜಿಸ್ಟರ್ಡ್ ಮಾಡಿಸಿದ್ದಾರೆ. ಇದಕ್ಕೆ ಬೋರ್ಡ್ ಆಫ್ ಡೈರೆಕ್ಟರ್ಸ್‌ನ್ನು ಇಲಾಖೆಯ ಮುಖ್ಯಾಧಿಕಾರಿಗಳು ನೇಮಕ ಮಾಡುತ್ತಾರೆ. ಸರ್ಕಾರ ಈ ಒಂದು ನೀತಿಯನ್ನು ಒಪ್ಪಿರುವುದರಿಂದ ರಿಜಿಸ್ಟ್ರಾರ್ ಮಾಡಿಸತಕ್ಕಂಥ ಸಂಘಕ್ಕೆ ನಾಮಿನೇಷನ್ ಮಾಡತಕ್ಕಂಥ ಒಂದು ವ್ಯವಸ್ಥೆ ನೋಡಿ ಸರ್ಕಾರಕ್ಕೆ ನಾನು ಒಂದು ಮನವಿಯನ್ನು ಕೊಟ್ಟಿದ್ದೇನೆ. ಸರ್ಕಾರ ಏನು ಆಧಾರಗಳನ್ನು ಇಟ್ಟುಕೊಂಡು ಈ ಒಂದು ಸಂಘವನ್ನು ಮಾಡಬೇಕು ಅಂತ ಹೇಳಿದ್ದಾರೆ ಅದರಲ್ಲಿ ಒಂದೆರಡು ಆಧಾರಗಳನ್ನು ಒಪ್ಪಿಕೊಳ್ಳುತ್ತೇನೆ. ಇದರಲ್ಲಿ ಇನ್ನೊಂದು ವಿಷಯ ಹೇಳುವುದಾದರೆ ಈಗಾಗಲೇ ರಿಜಿಸ್ಟರ್ಡ್ ಮಾಡತಕ್ಕಂಥಾ ಸಂಘಗಳಿಗೆ ಏನು ನಾಮಿನೇಷನ್ ಮಾಡಿದ್ದಾರೆ ಅವರು ನೂರಕ್ಕೆ 90 ಭಾಗ ಈ ಆಧಾರಗಳನ್ನು ಅನುಸರಿಸಿಲ್ಲ. ನಾಮಿನೇಷನ್ ಮಾಡತಕ್ಕಂಥಾ ಕಾಲಕ್ಕೆ ಯಾವರೀತಿ ನಾಮಿನೇಷನ್ ಮಾಡಬೇಕು ಅಂತ ಏನು ಇದೆ ಅವನ್ನು ಅಳವಡಿಸಿಕೊಂಡು ಮಾಡಿಲ್ಲ. ಬಹುಶಃ ಅಧಿಕಾರಿಗಳು ಒತ್ತಾಯಕ್ಕೆ ಮಣಿದಿರಬಹುದು ಅಥವಾ ಇನ್ನು ಯಾವ ಕಾರಣದಿಂದಲೋ ? ಸರ್ಕಾರಕ್ಕೆ ಈ ಬಗ್ಗೆ ಒಂದು ದೂರು ಮಾಡಿದ್ದೇನೆ. ಮಂತ್ರಿಗಳಿಗೆ ಮತ್ತು ಇಲಾಖಾ ಅಧಿಕಾರಿಗಳಿಗೆ ದೂರು ಕೊಟ್ಟಿದ್ದೇನೆ; ಇದರ ಬಗ್ಗೆ ತನಿಖೆ ನಡೆಸಿ, ತಪ್ಪಾಗಿರತಕ್ಕಂಥಾದ್ದನ್ನು ಸರಿಪಡಿಸಿ ಮತ್ತು ಮುಂದೆ ಮಾಡಬೇಕಾದಂಥ ರಿಜಿಸ್ಟ್ರೇಷನ್ ಬಗ್ಗೆ ಈ ಆಧಾರಗಳನ್ನು 10 ಕ್ಕೆ 90 ಭಾಗದಷ್ಟು ಅಳವಡಿಸಿ ಈ ರೀತಿಯಾದಂಥ ಸಹಕಾರ ಸಂಘಗಳನ್ನು ರಚನೆ ಮಾಡಿಸಿ ಎಂದು. ಈ ಬಗ್ಗೆ ಮಾನ್ಯ ಸಹಕಾರ ಮಂತ್ರಿಗಳು ಗಮನ ಇಟ್ಟು ತಕ್ಕ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ನಾನು ಇಷ್ಟಪಡುತ್ತೇನೆ.

ಇನ್ನು ರಾಜ್ಯಪಾಲರ ಭಾಷಣದಲ್ಲಿ ನಮ್ಮ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಅರಣ್ಯ ಉತ್ಪನ್ನದಿಂದ ಹೆಚ್ಚು ಉತ್ಪತ್ತಿಯಾಗಿದೆ ಎಂದು ನಿನ್ನೆ ಮಾನ್ಯ ಸದಸ್ಯರಾದ ಶ್ರೀಮಾನ್ ಕೆ. ಪುಟ್ಟಸ್ವಾಮಿಯವರು ಮಾತನಾಡಿದರು. ಬಹುಶಃ 71–72ರಲ್ಲಿ ಅರಣ್ಯದಿಂದ ನಮ್ಮ ಸರ್ಕಾರದ ಬೊಕ್ಕಸಕ್ಕೆ ಏನು ಹಣ ಬರುತ್ತಿತ್ತು, ಈಗ ಏನು ಒಂದು ಹಣ ಬರುತ್ತಿದೆ ಅನ್ನುವುದನ್ನು ಅಂಕಿಅಂಶ ಕೊಟ್ಟು ಹೇಳಿದರು ಬಹಳ ಸಂತೋಷ. ಅರಣ್ಯ ಇಲಾಖೆಯವರು ಉತ್ಪನ್ನ ಜಾಸ್ತಿ ಮಾಡಿದ್ದಾರೆ. ಅದಕ್ಕಾಗಿ ಅವರಿಗೆ ನಾನು ವಂದನೆಯನ್ನು ಅರ್ಪಿಸುತ್ತೇನೆ. ಮತ್ತು ಹೆಚ್ಚಾಗಿ ಕಾಡುಗಳನ್ನು ಬೆಳೆಸುವುದಕ್ಕೆ ಮನೆಗಳನ್ನು ಕಟ್ಟುವುದಕ್ಕೆ ಬೇಕಾದಂಥಾ ಮರಗಳನ್ನು ಮತ್ತು ಕೈಗಾರಿಕೆಗಳಿಗೆ ಬೇಕಾಗಿರತಕ್ಕಂಥ ಮರಗಳನ್ನೂ ಬೆಳೆಸುವುದಕ್ಕೆ ಸುಮಾರು ಸಾವಿರಾರು ಎಕರೆಗಳಲ್ಲಿ ಅರಣ್ಯಗಳನ್ನು ಬೆಳೆಸಲು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಅದರಲ್ಲಿ ಹೆಚ್ಚು ಭಾಗ ಅರಣ್ಯವನ್ನು ಸೃಷ್ಟಿ ಮಾಡುವ ಕೆಲಸ ನಡೆದಿದೆ. ಅದಕ್ಕೆ ಕೋಟ್ಯಾಂತರ ರೂಪಾಯಿ ಖರ್ಚಾಗಿದೆ ಎಂದು ತಿಳಿಸಿದ್ದಾರೆ.

ನಮ್ಮ ಭಾಗದಲ್ಲಿ ಅಂದರೆ ಚಾಮರಾಜನಗರ, ಗುಂಡ್ಲುಪೇಟೆ, ಕೊಳ್ಳೆಗಾಲ, ಎಳಂದೂರು ಈ ತಾಲ್ಲೂಕುಗಳಲ್ಲಿ ಹೆಚ್ಚು ಭಾಗದ ಅರಣ್ಯವಿದೆ. ಈ ಭಾಗದಲ್ಲಿ ಕಾಡನ್ನು ಬೆಳೆಸುವ ಬಗ್ಗೆ ಮತ್ತು ಅದರಿಂದ ಬರುವ ಉತ್ಪನ್ನದ ಬಗ್ಗೆ ಒಂದೆರಡು ಮಾತುಗಳನ್ನು ಈ ಸಮಯದಲ್ಲಿ ಹೇಳಿದರೆ ಬಹುಶಃ ಅದು ಸಾಧುವಾದುದು ಎಂಬ ಭಾವನೆ ನನಗಿರುವುದರಿಂದ ಆ ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ. ಈ ಕಾಡುಗಳಲ್ಲಿ ಸಾವಿರಾರು ಹೊಸ ಗಿಡಗಳನ್ನು ಬೆಳೆಸುವ ಬಗ್ಗೆ ಅಲ್ಲಿಯ ಡಿವಿಜನ್ ಅವರು ಕಾರ್ಯಕ್ರಮ ಹಾಕಿಕೊಂಡು, ಇಷ್ಟು ಸಾವಿರ ಎಕರೆಗಳಲ್ಲಿ ಹೊಸದಾಗಿ ಕಾಡನ್ನು ಬೆಳೆಸಿದ್ದೇವೆಂದು ಸರ್ಕಾರಕ್ಕೆ ಲೆಕ್ಕ ಕೊಟ್ಟಿದ್ದಾರೆ ಆ ರೀತಿ ಬೆಳೆಸಲು ಇಷ್ಟು ಹಣ ಖರ್ಚಾಗಿದೆ ಎಂದು ಲೆಕ್ಕ ಕೊಟ್ಟು ಆ ಹಣವನ್ನು ದುರುಪಯೋಗ ಮಾಡಿರುವ ನಿದರ್ಶನಗಳು ಹಲವಾರು ಇವೆ ; ಈ ಬಗ್ಗೆ ಸರ್ಕಾರಕ್ಕೆ ಹಲವಾರು ಸಲ ಕಾಗದ ಬರೆದು ತನಿಖೆ ಮಾಡಬೇಕೆಂದು ತಿಳಿಸಿದ್ದೇವೆ. ಈ ಸಂದರ್ಭದಲ್ಲಿಯೂ ಸಹ ಸಂಬಂಧಪಟ್ಟ ಮಂತ್ರಿಗಳ ಗಮನಕ್ಕೆ ಆ ವಿಷಯವನ್ನು ತರುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಕಾಡಿನ ಉತ್ಪನ್ನ ಜಾಸ್ತಿಯಾಗಿರುವುದು ಸಂತೋಷಪಡತಕ್ಕಂಥ ವಿಷಯವೇ ಆಗಿದೆ. ಆದರೆ ನಮ್ಮ ಚಾಮರಾಜನಗರ ಡಿವಿಜನ್‌ನಲ್ಲಿ ಆಗಿರತಕ್ಕಂಥ ಅನಾಹುತವನ್ನು ಮಾನ್ಯ ಸಭೆಯ ಗಮನಕ್ಕೆ ತಂದರೆ ಅದು ತಪ್ಪಾಗಲಾರದೆಂದು ನಾನು ಭಾವನೆ ಮಾಡುತ್ತೇನೆ. ಅರಣ್ಯ ಇಲಾಖೆಯವರು ಕಾಡಿನಲ್ಲಿರತಕ್ಕಂತ ತೇಗ, ಬೀಟೆ, ಹೊನ್ನೆ ಮುಂತಾದ ಬೆಲೆ ಬಾಳುವ ಮರಗಳನ್ನು ಕೂಪು ಮಾಡಿ ನಂತರ ಕಡಿದು ಸರ್ಕಾರದ ಡಿಪೋಗಳಿಗೆ ಸಾಗಿಸುತ್ತಾರೆ. ಇಲ್ಲವೇ ಆ ಮರಗಳನ್ನು ಕಡಿದು ಸಾಗಿಸುವ ಬಗ್ಗೆ ಹರಾಜು ಮಾಡುತ್ತಾರೆ. ಆಗ ಖಾಸಗೀಯವರು ಹರಾಜಿನಲ್ಲಿ ಭಾಗವಹಿಸಿ ಮರಗಳನ್ನು ಕಡಿದು ಕೊಳ್ಳುವ ಬಗ್ಗೆ ಅನುಮತಿ ಪಡೆದುಕೊಳ್ಳುತ್ತಾರೆ. ನಮ್ಮ ಭಾಗದಲ್ಲಿ 1962 ರಿಂದ ಅಂದರೆ ಕಳೆದ 12–13 ವರ್ಷಗಳಿಂದ ಈ ಜಾತಿಯ ಮರಗಳನ್ನು ಕೂಪು ಮಾಡಿ ಹರಾಜು ಮಾಡುತ್ತಿದ್ದಾರೆ; ಕೆಲವು ಸಲ ಇಲಾಖೆಯವರೇ ಕಡಿದು ದೊಡ್ಡ ದೊಡ್ಡ ಲಾಂಟಿಗಳನ್ನು ಲಾರಿಗಳಲ್ಲಿ ಸಾಗಿಸಿ ಸರ್ಕಾರೀ ಸಾಮಿಲಗಳಲ್ಲಿ ಇಡುತ್ತಾರೆ. ಈ ರೀತಿ ಮರಗಳನ್ನು ಕಡಿದ ಮೇಲೆ ಆ ಮರಕ್ಕೆ ಸೇರಿದ ಲಾಪ್ಸ್ ಅಂಡ್ ಟಾಪ್ಸ್‌ನ್ನು ಸಹ ಸರ್ಕಾರೀ ಡಿಪೋಗಳಿಗೆ ಸಾಗಿಸಿ, ಸಣ್ಣ ಸಣ್ಣ ಕಿಟಕಿ, ಕುರ್ಚಿ, ಮೇಜು ಮತ್ತು ಮನೆಗಳಿಗೆ ಬೇಕಾಗುವ ಇತರೇ ಸಣ್ಣ ಸಣ್ಣ ಸಾಮಾನುಗಳನ್ನು ಮಾಡಲು ಅವನ್ನು ಮಾರಾಟ ಮಾಡುವ ವ್ಯವಸ್ಥೆ ಅರಣ್ಯ ಇಲಾಖೆಯಲ್ಲಿದೆ ಎಂಬುದಾಗಿ ನಾನು ಭಾವನೆ ಮಾಡುತ್ತೇನೆ. ಆದರೆ ನಮ್ಮ ಚಾಮರಾಜನಗರದ ಡಿವಿಜನ್‌ನಲ್ಲಿ ಏನಾಗಿದೆ ಎಂದರೆ, ಒಬ್ಬರು ಫಾರೆಸ್ಟ್ ಕಂಟ್ರಾಕ್ಟರು ಇದ್ದಾರೆ, ಅವರ ಹೆಸರನ್ನು ಇಲ್ಲಿ ಹೇಳಲು ನಾನು ಇಚ್ಛೆಪಡುವುದಿಲ್ಲ, ಅವರು ಒಳ್ಳೆಯ ಪ್ರಭಾವಯುತರಾದಂಥ ವ್ಯಕ್ತಿಯಾಗಿದ್ದಾರೆ. ಅವರು ಆ ಭಾಗದ ಅಧಿಕಾರಿಗಳನ್ನು ಒಳಗೆ ಹಾಕಿ ಕೊಂಡು ಈ ಲಾಪ್ಸ್ ಅಂಡ್ ಟಾಪ್ಸನ್ನು ಕಾಡಿನಿಂದ ಕದ್ದು ಸಾಗಿಸಿ ಲಕ್ಷಾಂತರ ರೂಪಾಯಿಗಳನ್ನು ಸಂಪಾದನೆ ಮಾಡಿದ್ದಾರೆ ಒಂದು ಲಾರಿ ಲೋಡನ್ನು ಕದ್ದು ಸಾಗಿಸಿದರೆ ಅದರಿಂದ ಹತ್ತು ಸಾವಿರದಿಂದ ಇಪ್ಪತ್ತು ಸಾವಿರದವರೆಗೆ ವರಮಾನ ಬರುತ್ತದೆಂದು ನಾನು ಕೇಳಿದ್ದೇನೆ. 1962ರಿಂದ ಇದೇ ರೀತಿ ನಡೆದುಕೊಂಡು ಬಂದಿದೆ ಎಂದು ನಾನು ಮೊನ್ನೆ ವಿಚಾರ ಮಾಡಿದಾಗ ತಿಳಿದು ಬಂತು, ನಾನು ಕಳೆದ 3-4 ವರ್ಷಗಳಿಂದ ಈ ಬಗ್ಗೆ ಎರಡು ಮೂರು ಸಲ ಸರ್ಕಾರಕ್ಕೆ ಕಾಗದ ಬರೆದು ಸಂಬಂಧಪಟ್ಟ ಅಧಿಕಾರಿಗಳಿಂದ ತನಿಖೆ ನಡೆಸಬೇಕೆಂದು

ಕೇಳಿದ್ದೆ, ಅದರೆ ಈ ವಿಚಾರದಲ್ಲಿ ನನಗೆ ಬಂದ ದೂರು ಏನೆಂದರೆ, ಕ್ರಮ ಕೈಕೊಳ್ಳಬೇಕಾಗಿದ್ದ ಅಧಿಕಾರಿಗಳಿಗೆ ಮಂತ್ರಿಗಳ ಮಟ್ಟದಲ್ಲಿ ಸೂಚನೆ ಹೋಗಿ, ಅವರು ಯಾವ ಕ್ರಮವನ್ನೂ ತೆಗೆದುಕೊಳ್ಳಲಿಲ್ಲ ಎಂದು, 1962 ರಿಂದ 1976ರರವರೆಗೆ ಇದೇ ರೀತಿ ನಡೆದುಕೊಂಡು ಬಂದಿದೆ. ಪ್ರತಿವರ್ಷವೂ ಸರ್ಕಾರದ ಖಜಾನೆಗೆ ಬರಬೇಕಾಗಿದ್ದಂಥ ನಾಲ್ಕಾರು ಲಕ್ಷರೂಪಾಯಿಗಳು ಈ ಕ್ರಮದಿಂದ ತಪ್ಪಿಹೋಗುತ್ತಿದೆ. ಈ ಮರವನ್ನು ಹರಾಜು ಮೂಲಕ ವಿಲೇವಾರಿ ಮಾಡುವ ಬದಲು ಸಂಬಂಧಪಟ್ಟ ಅಧಿಕಾರಿಗಳು ಮತ್ತು ಆ ಕಂಟ್ರಾಕ್ಟರ್ ಜೊತೆಯಾಗಿ ಸೇರಿಕೊಂಡು ಅದರಿಂದ ಬರುವ ಹಣವನ್ನು ಭಾಗ ಮಾಡಿ ಕೊಂಡು ಸರ್ಕಾರಕ್ಕೆ ಬರುವ ವರಮಾನವನ್ನು ತಪ್ಪಿಸುತ್ತಿರುವುದು ಸರಿಯಲ್ಲ, ಇದರ ಬಗ್ಗೆ ಮಾನ್ಯ ಅರಣ್ಯ ಇಲಾಖೆಯ ಮಂತ್ರಿಗಳು ವಿಶೇಷವಾದಂಥ ಒಂದು ಸ್ಕ್ವಾಡನ್ನು ಅಲ್ಲಿಗೆ ಕಳುಹಿಸಿ ಸಮಗ್ರವಾದಂಥ ತನಿಖೆಯನ್ನು ನಡೆಸಿ, ಇದರಲ್ಲಿ ಯಾವ ಯಾವ ಅಧಿಕಾರಿಗಳು ಸಂಬಂಧಪಟ್ಟಿದ್ದಾರೆ, ಇದರಲ್ಲಿ ಕಂಟ್ರಾಕ್ಟರ್ ಎಷ್ಟರಮಟ್ಟಿನ ಹೊಣೆಗಾರಿಕೆ ಹೊಂದಿದ್ದಾರೆ ಎಂಬುದನ್ನು ಕಂಡುಹಿಡಿಯಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಮಾನ್ಯ ಸದಸ್ಯರು ಗುರುತರವಾದ ಆಪಾದನೆ ಮಾಡುತ್ತಿದ್ದಾರೆ, ಆದರೆ ಸಂಬಂಧಪಟ್ಟ ಮಂತ್ರಿಗಳೇ ಸಭೆಯಲ್ಲಿ ಇಲ್ಲ.

ಶ್ರೀ ಟಿ. ಎಂ. ಮಂಜುನಾಥ.—ಈಗ ತುರ್ತುಪರಿಸ್ಥಿತಿ ಜಾರಿಯಲ್ಲಿದೆ, ಆದರೂ ಸಹ ಇಂತಹ ಅಕ್ರಮಗಳು ನಡೆಯುತ್ತಿರುವುದಕ್ಕೆ ಯಾರು ಕಾರಣ? ಈ ತುರ್ತುಪರಿಸ್ಥಿತಿಯಲ್ಲಿ ಸರ್ಕಾರದವರೇ ಕರ್ತವ್ಯಲೋಪ ಮಾಡಿದರೆ, ಇನ್ನು ವಿರೋಧಪಕ್ಷದವರು ಯಾವ ರೀತಿ ಕೆಲಸ ಮಾಡಲು ಸಾಧ್ಯ ?

ಶ್ರೀ ಸಿ. ಬೈರೇಗೌಡ.—ಮಾನ್ಯ ಮಂತ್ರಿಗಳೊಬ್ಬರು ಶಿಫಾರಸು ಮಾಡುವುದರ ಮೂಲಕ ದುಡ್ಡು ಹೊಡೆದಿದ್ದಾರೆಂದು ಮಾನ್ಯ ಸದಸ್ಯರು ಹೇಳಿದರು ಆ ಮಂತ್ರಿಗಳ ಹೆಸರನ್ನು ಅವರು ಹೇಳಿದರೆ ಅದರಿಂದ ಈ ಸಭೆಗೆ ಲಾಭವಾಗುತ್ತದೆ ಮತ್ತು ಜನರಿಗೂ ಸಹ ಅದು ತಿಳಿಯುತ್ತದೆ.

ಅಧ್ಯಕ್ಷರು.—ಅವರು ಆ ರೀತಿ ಹೇಳಲಿಲ್ಲ, ಮಾನ್ಯ ಸದಸ್ಯರು ಬೇಕಾದರೆ ದಾಖಲೆ ತೆಗೆದು ನೋಡಬಹುದು.

ಶ್ರೀ ಕೆ. ಎಚ್. ಹನುಮೇಗೌಡ.—ಇದರ ಬಗ್ಗೆ ಸರ್ಕಾರದವರು ಏನು ಕ್ರಮ ತೆಗೆದುಕೊಳ್ಳುತ್ತಾರೆಂಬ ಬಗ್ಗೆ ಈಗ ಖಂಡಿತವಾಗಿ ತಿಳಿಸಬೇಕು. ಒಬ್ಬ ಪೋಲೀಸ್ ಕಾನ್‌ಸ್ಟೇಬಲ್ ಹತ್ತು ರೂಪಾಯಿಗಳನ್ನು ಯಾರಿಂದಲಾದರೂ ಪಡೆದುಕೊಂಡರೆ ಅವನನ್ನು ಹಿಡಿದುಹಾಕುತ್ತಾರೆ, ಆದರೆ ಇಲ್ಲಿ ಒಬ್ಬ ಕಂಟ್ರಾಕ್ಟರ್ ಲಕ್ಷಾಂತರ ರೂಪಾಯಿಗಳವರೆಗೆ ಲೂಟಿ ಮಾಡಿದ್ದರೂ ಸಹ ಆತನನು ಹಿಡಿಯದೆ ಮಂತ್ರಿಗಳು ಆದೇಶ ಕೊಡುವುದರ ಮೂಲಕ ಬಿಟ್ಟುಬಿಡಲು ಕಾರಣವೇನು ? ಇದಕ್ಕಿಂತ ನಾಚಿಕೆಗೇಡಿನ ವಿಷಯ ಬೇರೆ ಏನಿದೆ ? ಇದನ್ನು ಸರ್ಕಾರದವರು ಲಘುವಾಗಿ ತೆಗೆದುಕೊಳ್ಳಬಾರದು, ಮಂತ್ರಿಗಳೊಬ್ಬರು ಆ ರೀತಿ ಹೇಳಲು ಕಾರಣವೇನು ಎಂಬುದನ್ನು ಮಾನ್ಯ ಸಭೆಗೆ ತಿಳಿಸಬೇಕು. ಇಲ್ಲದಿದ್ದರೆ ಈ ಸಭೆ ನಡೆಯಲು ಅವಕಾಶ ಕೊಡುವುದಿಲ್ಲ.

ಅಧ್ಯಕ್ಷರು—ಈಗ ಸಂಬಂಧಪಟ್ಟ ಮಂತ್ರಿಗಳು ಇಲ್ಲ, ಅವರಿಗೆ ಬೇರೆ ಮಂತ್ರಿಗಳು ತಿಳಿಸುತ್ತಾರೆ.

ಶ್ರೀ ಕೆ. ಎಚ್. ಹನುಮೇಗೌಡ.—ಜಂಟೀ ಜವಾಬ್ದಾರಿ ಎಂದು ಹೇಳುತ್ತಾರೆ, ಆದಕಾರಣ ಇಲ್ಲಿರುವವರೇ ಇದಕ್ಕೆ ಉತ್ತರ ಕೊಡಬೇಕು, ಇದು ಅನ್ಯಾಯದ ಪರಮಾವಧಿ, ಇದರಿಂದ ದೇಶ ಹಾಳಾಗುತ್ತದೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಮಾನ್ಯ ಸದಸ್ಯರು ಭಾಷಣ ಮಾಡಿ ವಿಷಯಗಳನ್ನು ಸರ್ಕಾರಕ್ಕೆ ಸಭೆಯ ಮೂಲಕ ತಿಳಿಸುತ್ತಿದ್ದಾರೆ. ಅದಕ್ಕೆ ಸೂಕ್ತ ಸಮಯದಲ್ಲಿ ಸೂಕ್ತವಾದ ಉತ್ತರವನ್ನು ಕೊಡಲಾಗುತ್ತದೆ. ಅದು ಬಿಟ್ಟು ಈಗಲೇ ಉತ್ತರ ಕೊಡಿ ಎಂದರೆ ಹೇಗೆ ?

ಶ್ರೀ ಎಸ್. ಪುಟ್ಟಸ್ವಾಮಿ.—ಈಗ ಸರ್ಕಾರದವರು ಹಲವಾರು ವರ್ಷಗಳಿಂದ ಅರಣ್ಯ ಜಮೀನನ್ನು ವ್ಯವಸಾಯಕ್ಕಾಗಿ ಭೂಹೀನರಿಗೆ ಹಂಚುತ್ತಾ ಬಂದಿದ್ದಾರೆ. ನಮ್ಮ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಈ ರೀತಿ ಮಾಡಿದ್ದಾರೆ. ನಮ್ಮಲ್ಲಿಯೂ ಸಹ ಕಳೆದ ಹತ್ತಾರು ವರ್ಷಗಳಿಂದ ಅರಣ್ಯ ಜಮೀನನ್ನು ಸಾವಿರಾರು ಎಕರೆಯವರೆಗೆ ಹಂಚಿರುವ ನಿದರ್ಶನಗಳಿವೆ.

ಇದರ ಜೊತೆಗೆ ಅರಣ್ಯ ಇಲಾಖೆಗೆ ಸೇರಿದಂತಹ ಸಾವಿರಾರು ಎಕರೆ ಜಮೀನನ್ನು ದುರ್ಬಲ ವರ್ಗದವರೇ ಅಲ್ಲ ಬಹಳ ಪ್ರಬಲ ವರ್ಗದವರು ಸೇರಿಕೊಂಡು 10-20-100 ಎಕರೆಯವರೆಗೆ ಇನ್ನೂ ಹೆಚ್ಚಿನ ಮಟ್ಟದಲ್ಲಿ ಜಮೀನನ್ನು ಆಕ್ರಮಣ ಮಾಡಿಕೊಂಡು ಟಿ. ಟಿ. ಕೊಡ ಕೊಡದೆ ನೂರಾರು ಎಕರೆ ಭೂಮಿಯನ್ನು ಅನುಭವಿಸುತ್ತಿದ್ದಾರೆ. ಅವರಲ್ಲಿಯೂ ನಮ್ಮ ಮೈಸೂರು ಜಿಲ್ಲೆಯ, ಹೆಗ್ಗಡದೇವನ ಕೋಟೆ, ಗುಂಡ್ಲುಪೇಟೆ, ಇನ್ನೂ ಕೆಲವು ತಾಲ್ಲೂಕುಗಳಲ್ಲಿ ಈ ರೀತಿ ಅಕ್ರಮಣ ನಡೆದಿರುತ್ತದೆ. ಮೊದಲನೆಯದಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿಗಳನ್ನು ವೈಯಕ್ತಿಕವಾಗಿ ಅಭಿನಂದಿಸುತ್ತೇನೆ. ಒಂದು ನಿದರ್ಶನವನ್ನು ಅವರ ಗಮನಕ್ಕೆ ತಂದ ತಕ್ಷಣವೇ ಆರ್ಡರ್ ಮಾಡಿ ಆ ರೀತಿ ತಪ್ಪನ್ನು ಮಾಡುವವರ ಮೇಲೆ ಪ್ರಾಸಿಕ್ಯೂಟ್ ಮಾಡುವುದಕ್ಕೆ ವ್ಯವಸ್ಥೆ ಮಾಡಿದರು ಈ ಮಧ್ಯೆ ನನ್ನ ಗಮನಕ್ಕೆ ಬಂದ ಹಾಗೆ ಮಾನ್ಯ ಅರಣ್ಯ ಇಲಾಖೆಯವರು ಯಾರೋ ಪ್ರಭಾವಯುತ ವ್ಯಕ್ತಿಗಳು ಪ್ರಭಾವ ಬೀರಿದರು ಎಂದು ಮಾನ್ಯ ಮಂತ್ರಿಗಳು ಮಾಡಿದ ತನಿಖೆ ಆರ್ಡರ್ಸ್ ಜಾರಿಯಾಗದೆ ನಿಂತು ಆಕ್ರಮ ಸಾಗುವಳಿ ಮಾಡಿದಂತವರಿಗೆ ಅವರು ಬೆಳೆದ ಬೆಳೆಯನ್ನು ಅವರೇ ತೆಗೆದುಕೊಳ್ಳುವುದಕ್ಕೆ ಅವಕಾಶ ಮಾಡಿದ್ದಾರೆಂದು ತಿಳಿದುಬಂದಿದೆ, ಬಹುಶಃ ಸರ್ಕಾರದಲ್ಲಿ ಈ ರೀತಿ ಅಗತಕ್ಕಂಥಾದ್ದು ಸರಿಯಾದುದು ಅಲ್ಲ. ಆದ್ದರಿಂದ ನಾನು ಸರ್ಕಾರದಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ಇದರ ಬಗ್ಗೆ ಖಚಿತವಾದ ಒಂದು ಆದೇಶವನ್ನು ಕೊಟ್ಟು ಅದರ ವಿಚಾರದಲ್ಲಿ ಸಮಗ್ರವಾದ ತನಿಖೆಮಾಡಿ ಯಾರು ಇದಕ್ಕೆ ಹೊಣೆಯಾಗಿದ್ದಾರೆ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಂಡು ಶಿಕ್ಷೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ :—ಇದು ಯಾವ ತಾಲ್ಲೂಕಿನಲ್ಲಿ ನಡೆದಿದೆ ಎಂದು ದಯಮಾಡಿ ಹೇಳಿ.

ಅಧ್ಯಕ್ಷರು :—ಗುಂಡ್ಲುಪೇಟೆ ತಾಲ್ಲೂಕಿನಲ್ಲಿ, ಶ್ರೀ ಎಸ್. ಪುಟ್ಟಸ್ವಾಮಿ : ನಮ್ಮ ಜಿಲ್ಲೆಗೆ ಈ ವರ್ಷ ಹೆಚ್ಚು ಹಣವನ್ನು ಒದಗಿಸಿಕೊಡಬೇಕೆಂದು ಮತ್ತು ಹೆಚ್ಚು ಹೆಚ್ಚು ಜಮೀನಿಗೆ ನೀರು ಕೊಡುವುದಕ್ಕೆ ಕಾರ್ಯಕ್ರಮ ಹಾಕಿಕೊಂಡಿದೆ. ನಮ್ಮ ಭಾಗದಲ್ಲಿ ಅಂದರೆ ಮೈಸೂರು ಜಿಲ್ಲೆಯಲ್ಲಿ ಕೆಲವಾರು ದೊಡ್ಡ ಪ್ರಮಾಣದ, ಮಧ್ಯಮ ಪ್ರಮಾಣದ ಜಲಾಶಯಗಳನ್ನು ಕಟ್ಟುವ ಕೆಲಸ ನಡೆಯುತ್ತಿದೆ. ಅದರಲ್ಲಿ ಕಬಿನಿ ಪ್ರಾಜೆಕ್ಟ್ ಬಹಳ ಮುಖ್ಯವಾದ ಜಲಾಶಯ ಆದರ ಕೆಲಸಕಾರ್ಯಗಳು ಸ್ಥಗಿತಗೊಂಡಿದೆ ಕಳೆದ ಎರಡು ವರ್ಷಗಳಲ್ಲಿ ಏನು ಕೆಲಸಕಾರ್ಯ ನಡೆಯಬೇಕೋ ಅದೂ ನಡೆದರೂ ಆ ಅಣೆಕಟ್ಟಿನ ನಾಲಾ ತೋಡಿ ನೀರನ್ನು ಬಳಸಬೇಕಾದರೆ ಚಾನಲ ತೆಗೆದು ಅದರ ಮುಖಾಂತರ ನೀರನ್ನು ಕೊಡಬೇಕಾದರೆ ಸುಮಾರು 60 ಮೈಲ ಮೇಲೆ ತೆಗೆದರೆ ಮಾತ್ರ ಸಾಧ್ಯ. ಅಗ ಅಚ್ಚುಕಟ್ಟಿಗೆ ನೀರು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ನಾಲಾ ತೆಗೆಯುವ ಕೆಲಸಕಾರ್ಯಗಳು ಸ್ಥಗಿತಗೊಂಡಿರುವುದರಿಂದ ಕಬಿನಿ ಪ್ರಾಜೆಕ್ಟ್ ನಾಲಾ ತೆಗೆಯುವ ಕೆಲಸಕಾರ್ಯಗಳನ್ನು ಮಾಡಲು 1976 77ರಲ್ಲಾದರೂ ಸ್ವಲ್ಪ ಜಾಸ್ತಿ ಹಣವನ್ನು ಒದಗಿಸಿ ನಮಗೆ ಆದಷ್ಟು ಜಾಗ್ರತೆ ನೀರು ಸರಬರಾಜು ಆಗುವಂತೆ ಮಾಡಬೇಕು. ಸುಮಾರು 1 ಲಕ್ಷದ 20 ಸಾವಿರದ ಎಕರೆಗೆ ಈ ಪ್ರಾಜೆಕ್ಟ್ ಇರುವುದರಿಂದ ಜೊತೆಗೆ ಈ ಹೊಳೆಯಿಂದ ಬೇಸಿಗೆ ಬೆಳೆಗೂ ನೀರನ್ನು ಕೊಡುತ್ತೇವೆಂದು ಆಶ್ವಾಸನೆ ಕೊಡಬೇಕು. ಆದಕ್ಕೆ ಅವಕಾಶ ಇರುವುದರಿಂದ ಇದನ್ನು ಸರ್ಕಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ನಾನು ಇನ್ನು ಒಂದು ವಿಷಯವನ್ನು ನನ್ನ ಕ್ಷೇತ್ರದ ಬಗ್ಗೆ ಹೇಳಲು ಇಷ್ಟಪಡುತ್ತೇನೆ. 1968ರಲ್ಲಿ 2 ಕೆರೆ ಕೆಲಸಗಳನ್ನು ಮಂಜೂರು ಮಾಡಿದ್ದರು. ಕಾರಣಾಂತರದಿಂದ ಇನ್ನು ಆ ಕೆಲಸಗಳನ್ನು ಪ್ರಾರಂಭ ಮಾಡಲಿಲ್ಲ. ಇದರಿಂದ ಲಕ್ಷಾಂತರ ರೂಪಾಯಿ ಏನೂ ಖರ್ಚಾಗುವುದಿಲ್ಲ. ಏನು ಎರೆಡು ಕೆಲಸಗಳನ್ನು ತೆಗೆದುಕೊಂಡಿದ್ದಾರೆ. ಇವು ಬಹಳ ಸಣ್ಣ ಸಣ್ಣ ಕೆಲಸಗಳು. ಇದರ ಜೊತೆಗೆ ಲಿಫ್ಟ್ ಇರಿಗೇಷನ್ ಸ್ಯಾಂಕ್ಷನ್ ಆಗಿ ಎರಡು ವರ್ಷಗಳಾಯಿತು. ಅದನ್ನು ಕೂಡ ಪ್ರಾರಂಭಮಾಡಿಲ್ಲ. ಸಂಭಂಧಪಟ್ಟ ಇಲಾಖೆಯವರು ದೊಡ್ಡ ಮನಸ್ಸುಮಾಡಿ ಕೂಡಲೇ ಈ ಕೆಲಸಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇನ್ನು ಕೆಲವು ಹೊಸ ಯೋಜನೆಗಳನ್ನು ಮಾಡು

ವವರು ಇದ್ದಾರೆಂದು ತಿಳಿದಿದ್ದೇನೆ. ಈಗ ಏನು ನಾನು ಮೇಲೆ ತಿಳಿಸಿದ ಎರಡು ಕೆಲಸದ ಬಗ್ಗೆ ತನಿಕೆಯಾಗಿ ಏರ್ಪಾಡು ನಡೆದಿದೆ. ಆದ್ದರಿಂದ 1976-77ರ ಸಾಲಿನಲ್ಲಿ ಇನ್ನು 2-3 ಕೆಲಸಗಳನ್ನು ಮಂಜೂರು ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ. ಇನ್ನು 20 ಅಂಶದ ಕಾರ್ಯಕ್ರಮಗಳು ಎಂದರೆ ಬಡವರು ಮತ್ತು ಹರಿಜನಗಿರಿಜನರಿಗೆ, ದೀನದಲಿತರಿಗೆ ಏನು ಈ ಕಾರ್ಯಕ್ರಮವನ್ನು ಅಳವಡಿಸಿದ್ದಾರೆ ಆ ಕಾರ್ಯಕ್ರಮಗಳನ್ನು ಜಾರಿಯಾದ ತಕ್ಷಣ ಬಹಳ ಯಶಸ್ವಿಯಾಗಿ ನಡೆಸುತ್ತಿದ್ದಾರೆ. ಜೊತೆಗೆ ನಮ್ಮ ಮೈಸೂರು ಜಿಲ್ಲೆಯಲ್ಲಿಯೂ ಕೂಡ ನಿವೇಶನ ಹಂಚತಕ್ಕಂಥ ಕೆಲಸ ಬಹಳ ಪ್ರಗತಿದಾಯಕವಾಗಿ ನಡೆದಿದೆ. ಯಾರು ಬಡವರಿಗೆ ಸೈಟುಗಳನ್ನು ಹಂಚಲು ಅವಕಾಶವಾಗುವಂತೆ ಅವರ ಜಮೀನನ್ನು ವಾಲೆಂಟಿಯರಾಗಿ ಕೊಟ್ಟಿದ್ದಾರೆ ಅವರಿಗೆ ಬೇಗ ಬೇಗ ಅವಾರ್ಡ್ ಪಾಸ್‌ಮಾಡಿ ಅವರಿಗೆ ಕೊಡಬೇಕಾದ ಪರಿಹಾರವನ್ನು ಕೊಡಿಸಿಕೊಂಡಬೇಕೆಂದು ಮನವಿಮಾಡಿಕೊಂಡು ರಾಜ್ಯಪಾಲರ ಭಾಷಣಕ್ಕೆ ವಂದನೆಯನ್ನು ಸೂಚಿಸಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಟಿ. ಎಂ ಮಂಜುನಾಥ್ (ತಿಪಟೂರು) :— ಸನ್ಮಾನ್ಯ ಅಧ್ಯಕ್ಷರೇ, ಪ್ರಪ್ರಥಮವಾಗಿ ಕರ್ನಾಟಕ ರಾಜ್ಯಕ್ಕೆ ನೂತನವಾಗಿ ರಾಜ್ಯಪಾಲರಾಗಿ ನೇಮಕಗೊಂಡಿರುವ ಸನ್ಮಾನ್ಯ ದೀಕ್ಷಿತ್‌ರವರನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಅವರು ಕೊಟ್ಟಂಥ ಹೇಳಿಕೆಗೆ ವಿರೋಧ ವ್ಯಕ್ತಪಡಿಸಿ ಎರಡು ಮಾತುಗಳನ್ನು ಹೇಳಲು ಅಪೇಕ್ಷೆ ಪಡುತ್ತೇನೆ. ಕರ್ನಾಟಕ ದೇಶ ಒಂದಾನೊಂದು ಕಾಲದಲ್ಲಿ ಮಾದರಿಯ ದೇಶವೆಂದು ಹೆಸರು ಪಡೆದಿತ್ತು. ರಾಜ್ಯದ ಸೂತ್ರವನ್ನು ಹಿಡಿದಿರತಕ್ಕಂಥ ನಮ್ಮ ಸರ್ಕಾರದ ಆಡಳಿತದಲ್ಲಿ ಪ್ರಜಾತಂತ್ರದ ಹೆಸರಿನಲ್ಲಿ ಮತ್ತು ಪ್ರಜಾಪ್ರಭುತ್ವದ ಹೆಸರಿನಲ್ಲಿ ಸರ್ವ ಸ್ವತಂತ್ರ್ಯವನ್ನು ಕಳೆದುಕೊಂಡಿರತಕ್ಕಂಥ ಗುಲಾಮಗಿರಿ ಜೀವನವನ್ನು ನಡೆಸತಕ್ಕಂಥ ಜನ ನಾವು ಆಗಿದ್ದೇವೆ. ನಮ್ಮ ಸ್ವಾತಂತ್ರ್ಯ ಪರಿಪೂರ್ಣವಾಗಿ ನಮಗೆ ಇಲ್ಲದೆ ನಮಗೆ ಏನು ಅಭಿಪ್ರಾಯಗಳಿವೆ ಅವನ್ನು ಜನತೆಯ ಮುಂದೆ ಮತ್ತು ಸರಕಾರದ ಮುಂದೆ ಇಡತಕ್ಕಂಥ ಒಂದು ಸನ್ನಿವೇಶ ಇಲ್ಲದೆ ಹೋಗಿದೆ. ತಮಗೆ ಗೊತ್ತಿರುವ ಹಾಗೆ ನಾವು ಒಂದು ಕತ್ತಲೆಯಲ್ಲಿ ಇದ್ದೇವೆ. ದೇಶದಲ್ಲಿ ಜನಜೀವನ ಯಾವರೀತಿ ಇದೆ, ಯಾವ ಸ್ಥಿತಿಗತಿ ಇದೆ ಎನ್ನುವುದನ್ನು ತಿಳಿದು ದೇಶದ ಪ್ರಗತಿಗೋಸ್ಕರ ಉತ್ತಮವಾದ ಸಲಹೆಗಳನ್ನು ಕೊಡತಕ್ಕಂಥ ಅವಕಾಶ ಈ ಮನೆಗೆ ಇಲ್ಲವಾಗಿದೆ. ಇಂತಹ ಒಂದು ಕಠಿಣ ಅಥವಾ ಹೀನ ಪರಿಸ್ಥಿತಿಗೆ ಬಹುಶಃ ಈ ಪ್ರಜಾಪ್ರಭುತ್ವ ಬರುತ್ತದೆಂದು ನಾವು ನಂಬಿರಲಿಲ್ಲ. ಬಹುಶಃ ಶ್ರೀಮತಿ ಇಂದಿರಾಗಾಂಧಿಯವರ ನೇತೃತ್ವದಲ್ಲಿ ಜನತೆಗೆ ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ರಂಗಗಳಲ್ಲಿ ಸ್ವಾತಂತ್ರ್ಯ ಸಿಗುತ್ತದೆ, ಆದರ ಮುಖಾಂತರ ಪ್ರಜಾಪ್ರಭುತ್ವದ ಸವಿಯನ್ನುಂಡು ಜನತೆಯ ಏಳಿಗೆಗೋಸ್ಕರ ದುಡಿಯುವ ಮೂಲೋದ್ದೇಶ ಇನ್ನೂ ಕಾರ್ಯಗತವಾಗಿಲ್ಲ. ತಮಗೆ ಗೊತ್ತಿರುವ ಹಾಗೆ ಈ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದಂಥ ಕಾಲದಲ್ಲಿ ದೇಶದ ಹಿತಕ್ಕೋಸ್ಕರ ಹಾಗೂ ಜನತೆಯ ಕಲ್ಯಾಣಕ್ಕೋಸ್ಕರ ಇದು ಅವಶ್ಯಕವಾಗಿ ಬೇಕಾಗಿತ್ತು ಎಂಬುದು ನಿಜ. ಈ ರೀತಿಯಾದಂಥ ತುರ್ತು ಪರಿಸ್ಥಿತಿಯನ್ನು ಜಾರಿಗೆ ತರದೇ ಹೋಗಿದ್ದರೆ ದೇಶ ಏಳಿಗೆಯಾಗುತ್ತಿರಲಿಲ್ಲವೆಂಬ ಮಾತನ್ನು ಹೇಳಿದ್ದಾರೆ. ಅದರ ಬಗ್ಗೆ ಅನೇಕ ಕಾರ್ಯಕ್ರಮಗಳನ್ನು ಸರ್ಕಾರ ತೆಗೆದುಕೊಂಡಿರತಕ್ಕಂಥಾದ್ದನ್ನು ನಮ್ಮ ಮುಂದೆ ಇಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಬೇಕಾಗಿದೆ. ಬಹುಶಃ ಆಳುವ ಪಕ್ಷ ಜನತೆಗೆ ಮೊದಲಿನಿಂದಲೂ ದ್ರೋಹ ಮಾಡಿದ್ದರಿಂದ ಆಳುವ ಪಕ್ಷ ತಾನು ಚುನಾವಣೆಯಲ್ಲಿ ಕೊಟ್ಟಂಥ ಆಶ್ವಾಸನೆಗಳನ್ನು ಸರಿಯಾಗಿ ನಡೆಸಿಕೊಡದೇ ಇರುವುದರಿಂದ ನಿಜವಾಗಿಯೂ ಜನ ನಾಯಕರು ತಮ್ಮನ್ನು ಸುಮ್ಮನೆ ಬಿಡುವುದಿಲ್ಲವೆಂಬ ಒಂದು ಹೆದರಿಕೆಯಿಂದ ಇಂತಹ ಒಂದು ತುರ್ತು ಪರಿಸ್ಥಿತಿಯನ್ನು ಈಗ ಸರಕಾರದವರು ಘೋಷಿಸಿದ್ದಾರೆ. ಇದು ನಿಜವಾಗಿಯೂ ನಾಚಿಕೆಗೇಡು. ಮಾನ್ಯ ಶ್ರೀ ಜಯಪ್ರಕಾಶ್ ನಾರಾಯಣ ಅವರಂತಹ ನಾಯಕರು ಅಭಿಪ್ರಾಯವನ್ನು ತಿಳಿಯುವುದಾದರೆ. ಅವರು ಈ ದೇಶದ ಕಲ್ಯಾಣಕ್ಕಾಗಿಯೇ ಚಳುವಳಿ ಮಾಡಿದ್ದು ಎಂಬುದು ಎಲ್ಲರಿಗೂ ಗೊತ್ತಿದೆ. ಇವತ್ತು ನಮ್ಮ ಭರತಖಂಡದ ಪ್ರಜಾಪ್ರಭುತ್ವವೇ ಇಡೀ ಪ್ರಪಂಚದಲ್ಲಿ ಅತ್ಯಂತ ದೊಡ್ಡ ಪ್ರಜಾಪ್ರಭುತ್ವ ನಮ್ಮ ದೇಶಕ್ಕೆ ಸ್ವಾತಂತ್ರ ಬಂದು 25 ವರ್ಷಗಳ ಅವಧಿಯಲ್ಲಿ ಪ್ರಜಾಪ್ರಭುತ್ವ ಸುಗಮವಾಗಿ ನಡೆಯಬೇಕಾದರೆ ಕೇವಲ ಆಡಳಿತ ಪಕ್ಷ ಒಂದರಿಂದಲೇ ಅಲ್ಲ. ವಿರೋಧಪಕ್ಷದ ಜನ ನಾಯಕರು ಸಂಪೂರ್ಣ ಬೆಂಬಲ ಕೊಟ್ಟಿದ್ದರಿಂದಲೇ ಈ ಒಂದು ಪ್ರಜಾಪ್ರಭುತ್ವ ಬಹಳ ಚೆನ್ನಾಗಿ ನಡೆಯುತ್ತಿದೆ.

ನಿಮ್ಮ ಒಂದು ಪ್ರತಿಷ್ಠೆ. ಗೌರವ ಹೆಚ್ಚಿರುವುದು ನಿಮ್ಮಿಂದಲೇ ಅಲ್ಲ, ಅದಕ್ಕೆ ಸಮಾಜ ಸುಧಾರಕರು ಹಾಗೂ ವಿರೋಧಪಕ್ಷದ ಜನ ನಾಯಕರ ಸಂಪೂರ್ಣ ಬೆಂಬಲವೂ ಕಾರಣವೆಂಬುದನ್ನು ಮರೆಯ ಬಾರದು. ನಮಗೆ ಸ್ವಾತಂತ್ರ್ಯವನ್ನು ತಂದುಕೊಟ್ಟಂಥ ಹಿಂದಿನ ಮಹಾನುಭಾವರೂ ಸಹ ಅದಕ್ಕೆ ಕಾರಣರಾಗಿ ಇದ್ದಾರೆಂದು ಹೇಳಿದರೆ ಅದೇನೂ ತಪ್ಪಾಗಲಾರದು. ಅಂತಹ ಮಹಾನುಭಾವರು ನಿಮ್ಮನ್ನೇನೂ ಈಗ ಅಧಿಕಾರ ಕೇಳುತ್ತಾ ಇಲ್ಲ. ಅಂತಹವರ ಬಗ್ಗೆ ನಿಮ್ಮ ಒಂದು ಕೃಪಾ ನಿಜ ವಾಗಿಯೂ ಶೋಭಾಯಮಾನವಾದುದಲ್ಲ. ಇವತ್ತು ಮೀಸಾ (MISA) ಎಂಬ ಒಂದು ದೊಡ್ಡ ಬಲೆಯನ್ನು ಹಾಕಿ ಅನೇಕ ರೀತಿಯಲ್ಲಿ ಆಜ್ಞೆಗಳನ್ನು ಹೊರಡಿಸಿದ್ದೀರಿ, ಅದರಿಂದ ನಿಮಗೆ ಸಣ್ಣ ಸಣ್ಣ ಮೀನು ಅಂದರೆ ಸೀಗಡಿ ಮೀನುಗಳಂತಹವರು ಸಿಕ್ಕಿದ್ದಾರಷ್ಟೆ. ದೊಡ್ಡ ದೊಡ್ಡ ಮೀನು ಗಳಂತೆ ಇರುವವರನ್ನು ಎಲ್ಲಿಯೋ ಬಿಟ್ಟುಬಿಟ್ಟಿದ್ದೀರಿ. ಅವರನ್ನು ಕೆಣಕಲು ನಿಮಗೆ ಹೆದರಿಕೆ ಇದೆ ಯೆಂಬುದು ಗೊತ್ತು. ನಾನು ಈ ಮನೆಯಲ್ಲಿ ಮಾತನಾಡಬೇಕಾದರೆ ಅತ್ಯಂತ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ರಾಜಧನವನ್ನು ಮೊದಲು ನಿರ್ಮೂಲ ಮಾಡಿದಿರಿ, ರಾಜರನ್ನು ಪಾಪರ್ ಚೀಟಿ ಮಾಡಿದಿರಿ, 1971ನೇ ಇಸವಿಯಲ್ಲಿ ಅನೇಕರು ಯಾವ ಸ್ಥಿತಿಯಲ್ಲಿದ್ದರು ಈಗ ಯಾವ ಸ್ಥಿತಿ ಯಲ್ಲಿದ್ದಾರೆಂಬುದನ್ನು ನೋಡಿದರೆ, ಅವರಿಗೆ ಆ ಶ್ರೀಮಂತತನ ಎಲ್ಲಿ ಬಂತು ? ಅಂತಹವರು ತಮ್ಮ ಆತ್ಮವನ್ನು ಪರಿಶೋಧನೆ ಮಾಡಿಕೊಳ್ಳಲಿ. ಅಂತಹವರು ಸಮಾಜದ್ರೋಹಿಗಳು, ಸಮಾಜಘಾತ ಕರು. ಅಂತಹವರನ್ನು ಸಮಾಜದ ಮುಂದೆ ತಂದು ನಿಲ್ಲಿಸಬೇಕು. ಇಡೀ ರಾಜ್ಯದಲ್ಲಿ ಈಗ ಆಗು ತ್ತಿರುವ ಬದಲಾವಣೆಗಳನ್ನು ನೋಡುತ್ತಿದ್ದರೆ, ಬಹಳ ವಿಚಿತ್ರವಾಗಿದೆ. ವರ್ತಮಾನ ಪತ್ರಿಕೆಗಳಲ್ಲಿ ನೋಡಿದರೆ ಕೇವಲ ಇಲ್ಲಿ 14 ಸಾವಿರ ರೂಪಾಯಿ ಸಿಕ್ಕಿತು ಅಲ್ಲಿ 20 ಸಾವಿರ ರೂಪಾಯಿ ಸಿಕ್ಕಿತು ಎಂಬುದಾಗಿ ಬರುತ್ತದೆಯಷ್ಟೆ. ಆದರೆ ಈ ದೇಶದಲ್ಲಿರತಕ್ಕ ಅದರಲ್ಲಿಯೂ ಸಮಾಜದಲ್ಲಿ ಸೇರಿಸಿ ಕೊಂಡಿರತಕ್ಕ ಸಮಾಜ ದ್ರೋಹಿಗಳು ಸಮಾಜಘಾತುಕರು ಯಾರ್ಯಾರು ಇದ್ದಾರೆಯೋ ಅಂತಹವ ರನ್ನು ಏಕೆ ಅಪವಾದಕ್ಕೆ ಒಳಪಡಿಸುವುದಿಲ್ಲವೆಂದು ನಾನು ಪ್ರಶ್ನೆಮಾಡುತ್ತೇನೆ. ಈಗ ಒಂದು ತುರ್ತು ಪರಿಸ್ಥಿತಿಯನ್ನು ತಂದಿದ್ದೀರಿ. ನಿಮ್ಮ ವಾದದ ಬಗ್ಗೆ ನಿಮಗೆ ಗೌರವವಿದ್ದರೆ, ಅಂತಹ ಸಮಾಜ ಘಾತಕರನ್ನು ಏಕೆ ಶಿಕ್ಷೆಗೆ ಗುರಿಪಡಿಸಬಾರದು ? 7 ಸಾವಿರ ಕೋಟಿ ರೂಪಾಯಿಗಳಲ್ಲಿ ಕಪ್ಪುಹಣ ಒಂದೂವರೆ ಸಾವಿರ ಕೋಟಿ ರೂಪಾಯಿಗಳು ಸಿಕ್ಕಿದೆ ಎಂದು ಏಕೆ ಹೇಳುತ್ತೀರಿ ? ವಿತ ಕ್ಕೋಸ್ಕರ ಪೂರ್ತಿ 7 ಸಾವಿರ ಕೋಟಿ ರೂಪಾಯಿಗಳಷ್ಟು ಕಪ್ಪುಹಣವನ್ನು ಪಡೆಯಲಿಕ್ಕೆ ಸಾಧ್ಯವಾ ಗಿಲ್ಲ? ಬಾಕಿ ಐದೂವರೆಸಾವಿರ ಕೋಟಿ ರೂಪಾಯಿಗಳಷ್ಟು ಹಣ ಎಲ್ಲಿ ಹೋಯಿತು? ಅದನ್ನು ಏಕೆ ಪತ್ತೆ ಹಚ್ಚಿಲ್ಲ? ಈ ಮಾತನ್ನು ನಾನು ಬಹಳ ಕಷ್ಟದಿಂದ ಹೇಳುತ್ತಿದ್ದೇನೆ ಬಡ ರೈತರಾದವರು ತಮ್ಮ ತಾತ ಮುತ್ತಾತನ ಕಾಲದಿಂದ ಬೆವರು ಸುರಿಸಿ ದುಡಿದುಸಂಪಾದನೆ ಮಾಡಿದಂತಹವರನ್ನು ಮತ್ತು ಅವರ ಮುಖಂಡರಾಗಿ ಇರತಕ್ಕವರನ್ನು ಇವತ್ತು ನಿರಪರಾಧಿಗಳೆಂದು ಪರಿಗಣಿಸಿ ಅವರಿಗೆ ಚಿತ್ರಹಿಂಸೆಯನ್ನು ಕೊಡುತ್ತಿದ್ದೀರಿ. ಅವರು ಯಾವ ಪಕ್ಷಕ್ಕೇ ಸೇರಿರಲಿ, ಅದು ಬೇರೆ ವಿಚಾರ. ಸಮಾಜ ಕಂಟಕರನ್ನು ಮೊದಲು ಹಿಡಿಸುವುದಕ್ಕೆ ಪ್ರಯತ್ನಮಾಡಿದರೆ ಆಗ ನಿಮ್ಮನ್ನು ನಾನು ಬೇಷ್ ಎಂಬುದಾಗಿ ಹೇಳುತ್ತೇನೆ.

3-30 P. M.

ಇವತ್ತು ರಾಜ್ಯಪಾಲರ ಭಾಷಣದಲ್ಲಿ ಅನೇಕ ವಿಚಾರಗಳನ್ನು ಪ್ರಸ್ತಾಪಮಾಡಿದ್ದಾರೆ. ನಮ್ಮ ದೇಶದ ಪ್ರಗತಿಯ ಬಗ್ಗೆ, ಆರ್ಥಿಕ ಪ್ರಗತಿಯ ಬಗ್ಗೆ ವ್ಯವಸಾಯ ಪ್ರಗತಿಯ ಬಗ್ಗೆ ಹೆಚ್ಚಿಗೆ ಪ್ರಸ್ತಾಪಮಾಡಿದ್ದಾರೆ. ಅದಕ್ಕಾಗಿ ನಾನು ಬಹಳ ಸಂತೋಷಪಡುತ್ತೇನೆ. ಪ್ರಧಾನಿಯವರು 20 ಅಂಶಗಳ ಕಾರ್ಯಕ್ರಮಗಳನ್ನು ತಂದಿರುವುದರಿಂದ ಅವುಗಳ ಬಗ್ಗೆ ನೀವಾಗಲೀ ನಾವಾಗಲೀ ಸೂಕ್ತಕ್ರಮ ತೆಗೆದುಕೊಳ್ಳುವಾಗ ಅದು ಮಾನವನ ಉದ್ಧಾರ ಕ್ಕೋಸ್ಕರ ಮಾಡುವ ಕಾರಣ ಅವಕ್ಕೆ ಸದಾಕಾಲದಲ್ಲಿಯೂ ನಾವು ಪೂರ್ಣಬೆಂಬಲವನ್ನು ಕೊಡು ತ್ತೇವೆ. ಆದರೆ ಅವನ್ನು ಜಾರಿಗೆ ತರುವ ವಿಧಾನದಲ್ಲಿ ಬದಲಾವಣೆ ಇದೆ. ಸಮಾಜದಲ್ಲಿ ನಿರಪ ರಾಧಿಗಳಿಗೆ ಸಂಬಂಧಪಟ್ಟಂತೆ ಕೆಲವು ಕಾನೂನುಗಳು ನಿರೂಪಣೆಯಾಗಿವೆ. ಅಂತಹುಗಳನ್ನು ಜವಾಬ್ದಾರಿಯುತವಾಗಿ ಹೋಗಲಾಡಿಸುವುದಕ್ಕೆ ಪ್ರಯತ್ನವಾಡಬೇಕು. ಶೋಷಣರಹಿತವಾದ ಸಮಾಜವರ್ಗವನ್ನು ನಿರ್ಮಾಣಮಾಡಬೇಕು. ಶ್ರೀ ಸಾಮಾನ್ಯನ ಬಗ್ಗೆ ರಕ್ಷಣೆ ಕೊಡುವುದಕ್ಕಾಗಿಯೇ

ಸಮಾಜ ಮುಖಂಡರು ರಾಜೀನಾಮೆ ಕೊಟ್ಟಿದ್ದು. ಇವತ್ತು ಆಹಾರದಲ್ಲಿ ಹೆಚ್ಚು ಪ್ರಗತಿಯಾಗಿದೆ ಯೆಂದು ಹೇಳಿದ್ದಾರೆ, ತುಂಬ ಸಂತೋಷ. ರೈತರ ಹೆಚ್ಚಿನ ದುಡಿಮೆಯಿಂದ ಹಾಗೂ ದೈವೀ ಸಂಪತ್ತಿನಿಂದ ಇವತ್ತು ವ್ಯವಸಾಯ ಕ್ಷೇತ್ರದಲ್ಲಿ ಪ್ರಗತಿಯನ್ನು ಕಂಡಿದ್ದಾರೆ. ಸಹಜ. ಇಂತಹ ಒಂದು ಪ್ರಗತಿಯನ್ನು ಕಂಡಂಥ ಕಾಲದಲ್ಲಿ ರೈತರ ಆರ್ಥಿಕ ಪರಿಸ್ಥಿತಿ ಎಷ್ಟರ ಮಟ್ಟಿಗೆ ಅಧೋಗತಿಗೆ ಇಳಿದಿದೆ ಎನ್ನುವುದನ್ನು ನಾವೂ ನೀವೂ ಕೂತು ವಿಚಾರಮಾಡಬೇಕಾಗಿದೆ. ಏಕೆಂದರೆ ಇತ್ತೀಚೆಗೆ ರೈತನಾದವನು ಎಲ್ಲಾ ಕ್ಷೇತ್ರಗಳನ್ನೂ ಹಿಡಿದಿದ್ದಾನೆ. ಆದರೆ ಅವನಿಗೆ ಬಹುಮುಖ್ಯವಾಗಿ ಬೇಕಾಗಿರತಕ್ಕದ್ದು ಹಣ. ಇದನ್ನು ಒದಗಿಸುವ ಸಂಸ್ಥೆಗಳು ಇವತ್ತು ಸಹಕಾರ ಸಂಘಗಳು ಮತ್ತು ರಾಷ್ಟ್ರೀಯ ಬ್ಯಾಂಕುಗಳು. ಇವೆರಡರ ಮುಖಾಂತರ ಹಾಗೂ ಪ್ರತ್ಯೇಕವಾಗಿ ಬೇರೆ ಬೇರೆ ಕಡೆಗಳಿಂದಲೂ ಇಂತಹ ಪ್ರಗತಿ ಕಾರ್ಯಗಳಿಗೆ ಹಣವನ್ನು ಒದಗಿಸಿಕೊಳ್ಳಬೇಕಾಗಿದೆ. ಆದರೆ ಈಗ ತಾವುಒಂದು ಉತ್ತಮವಾದಂಥ ಕೆಲಸವನ್ನು ಮಾಡಿದ್ದೀರಿ. 2,400 ರೂಪಾಯಿಗಳೊಳಗೆ ವರಮಾನ ಇರತಕ್ಕ ಯಾರೇ ಸಣ್ಣ ರೈತರಿದ್ದರೆ ಅಥವಾ ಕಾರ್ಮಿಕರಿದ್ದರೆ ಅವರು ತೆಗೆದುಕೊಂಡ ಸಾಲದ ಹಣವನ್ನು ಕೊಡದೇ ಇರತಕ್ಕ ಒಂದು ಕಾನೂನನ್ನು ತಂದಿದ್ದೀರಿ. ಅಂತಹವರು ಸಾರ್ವಜನಿಕರಿಂದ ಹಣ ತೆಗೆದುಕೊಂಡು ಪುನಃ ಅವನಿಗೆ ಹಿಂದಕ್ಕೆ ಕೊಡುವ ಶಕ್ತಿ ಖಂಡಿತವಾಗಿ ಇರುವುದಿಲ್ಲ. ಆದ್ದರಿಂದ ಅವನಿಗೆ ಸಹಕಾರ ಸಂಘಗಳ ಮೂಲಕವಾಗಲೀ ಅಥವಾ ಬ್ಯಾಂಕುಗಳ ಮೂಲಕವಾಗಲೀ ಹಣವನ್ನು ಕೊಡಿಸಿ ಅವನನ್ನು ಋಣಮುಕ್ತನನ್ನಾಗಿ ಮಾಡಿದರೆ ಮತ್ತು ಸರ್ವ ಕ್ಷೇತ್ರಗಳಿಂದ ಅವನನ್ನು ಉದ್ಧಾರಮಾಡಿದರೆ ಆಗ ಅವನು ಅದರಿಂದ ಪಾವನನಾಗುತ್ತಾನೆ. ಆ ರೀತಿ ಮಾಡದೆ ಖಾಸಗೀ ಕ್ಷೇತ್ರಕ್ಕೇ ಒಂದು ಕಾನೂನನ್ನು, ಮತ್ತೊಂದು ಕ್ಷೇತ್ರಕ್ಕೇ ಒಂದು ಕಾನೂನು ಮಾಡತಕ್ಕದ್ದು ಸರಿಯಲ್ಲವೆಂದು ನಾನು ಹೇಳಬಯಸುತ್ತೇನೆ. ತಮಗೆಲ್ಲಾ ಗೊತ್ತಿರುವ ಹಾಗೆ ಈಗ ಜಿಲ್ಲಾ ಬ್ಯಾಂಕುಗಳು ಎಲ್ಲೆಲ್ಲಿವೆಯೋ ಅಲ್ಲೆಲ್ಲಾ ಬೇರೆ ಬೇರೆ ಬ್ಯಾಂಕುಗಳನ್ನೂ ಸಹ ಕೊಟ್ಟಿದ್ದಾರೆ ಅವುಗಳ ಬಗ್ಗೆ ನಾನು ಒಂದು ಮಾತನ್ನು ಹೇಳಬೇಕಾಗಿದೆ. ನನಗೆ ತಿಳಿದು ಬಂದಿರುವ ಪ್ರಕಾರ ರಾಷ್ಟ್ರೀಕೃತವಾಗಿರುವ ಬ್ಯಾಂಕುಗಳ ಪೈಕಿ ಇವತ್ತು ಸುಮಾರು 8 ಬ್ಯಾಂಕುಗಳು ಲುಕ್ಸಾನಿನಲ್ಲಿಯೇ ನಡೆಯುತ್ತಿವೆ. ಇದೇ ಹಾದಿಯಲ್ಲಿಯೇ ಹೋದರೆ ನಿಜವಾಗಿಯೂ ಇವತ್ತು ರಿಜರ್ವ್ ಬ್ಯಾಂಕಿನಿಂದ ಕೈಗಾರಿಕೆಯ ಕ್ಷೇತ್ರಗಳಿಗಾಗಲೀ ವ್ಯವಸಾಯ ಕ್ಷೇತ್ರಗಳಿಗಾಗಲೀ ಹೆಚ್ಚಿನ ಹಣವನ್ನು ಒದಗಿಸುವ ಶಕ್ತಿ ನಿಮ್ಮಲ್ಲಿದೆಯೇ ಎಂಬುದನ್ನು ಮೂಲತಃ ನೀವು ಆಲೋಚನೆಮಾಡಬೇಕಾಗಿದೆ. ಏಕೆಂದರೆ ನಿಮ್ಮಲ್ಲಿ ಇನ್ನೂ ಅನೇಕ ಬದಲಾವಣೆಗಳು ಆಗಬೇಕಾಗಿವೆ. ಸಾಮಾಜಿಕವಾಗಿ ಅನೇಕ ಬದಲಾವಣೆಗಳು ಆಗಬೇಕಾದರೆ ಸ್ವಲ್ಪ ಕ್ರಾಂತಿ ಆಗುತ್ತದೆ. ಮನಸ್ಸಿಗೆ ಬೇಸರವಾಗುತ್ತದೆ. ಮುಖ್ಯವಾಗಿ ಸಾಮಾಜಿಕ ಬದಲಾವಣೆಯಾಗಬೇಕಾದರೆ ಯಾವ ಒಂದು ವರ್ಗಕ್ಕೂ ಶೋಷಣೆ ಮಾಡದೆ ಪ್ರತಿಯೊಬ್ಬರೂ ಕನ್ನಡ ಜನ ಎಂಬ ಒಂದು ಮನೋಭಾವನೆಯನ್ನು ಇಟ್ಟುಕೊಂಡು ಸಾಮಾಜಿಕ ಬದಲಾವಣೆಗಳನ್ನು ಮಾಡಬೇಕು. ಒಂದು ದಿವಸ ಒಬ್ಬರ ತಲೆಯನ್ನು ಕತ್ತರಿಸಿ ಮತ್ತೊಬ್ಬರನ್ನು ಉದ್ಧಾರಮಾಡುವುದು ತುಂಬಾ ಶೋಚನೀಯವಾದುದು. ಇವತ್ತು ಬಸ್ಸುಗಳ ರಾಷ್ಟ್ರೀಕರಣ ಮಾಡಿದ್ದೀರಿ. ಇತ್ತೀಚೆಗೆ ಕಾಂಟ್ರಾಕ್ಟ್ ಕ್ಯಾರೇಜ್ ಬಸ್ಸುಗಳನ್ನು ಒಂದೇ ರಾತ್ರಿಯಲ್ಲಿ ತೆಗೆದುಕೊಳ್ಳುವುದಕ್ಕೆ ಪ್ರಯತ್ನ ಪಟ್ಟಿದ್ದೀರಿ. ಆದರೆ ಇಂತಹ ಆಜ್ಞೆಗಳಿಂದ ಜನತೆಗೆ ಎಷ್ಟರಮಟ್ಟಿಗೆ ಉಪಯೋಗವಾಗುತ್ತದೆಂಬುದನ್ನು ಗಮನಿಸಬೇಕು, ಹಾಗೂ ಸಣ್ಣಪುಟ್ಟವರಿಗೆ ಎಷ್ಟರಮಟ್ಟಿಗೆ ಇದರಿಂದ ತೊಂದರೆಯಾಗುತ್ತದೆಂಬುದನ್ನೂ ಸಹ ಯೋಚನೆಮಾಡಬೇಕು. ಹಿಂದಿನಿಂದಲೂ ನೀವು ಗರೀಬೀ ಹಟಾವೋ ಮಾಡುತ್ತೇವೆಂಬ ವಾದವನ್ನು ಇಟ್ಟುಕೊಂಡು ಬರುತ್ತಲೇ ಇದ್ದೀರಿ. ನಿಮ್ಮ ಕಾರ್ಯಕ್ರಮಗಳಲ್ಲಿ ಈಗ ಎಷ್ಟು ಜನ ಗರೀಬಿ ಹಟಾವೋ ಆಗಿದ್ದಾರೆ? ಮಾನ್ಯ ಶ್ರೀ ಕಂಠಯ್ಯನವರನ್ನು ನೋಡಿದರೆ, ಅವರು ಮಾತ್ರ ಒಳ್ಳೆಯ ಲಕ್ಷಣವಾದಂಥ ಡ್ರೆಸ್ಸನ್ನು ಹಾಕಿಕೊಂಡು ಬಂದು ಇಲ್ಲಿ ಕುಳಿತಿದ್ದಾರೆ. ಅವರಹಾಗೆ ಪ್ರತಿಯೊಬ್ಬರೂ ಡ್ರೆಸ್ ಹಾಕಿಕೊಂಡರೆ ಅದು ಸಮತಾವಾದ. ಎಲ್ಲಜನರೂ ನಮ್ಮಂತೆಯೇ ಸುಖವಾಗಿರಬೇಕು ಎಲ್ಲಜನರನ್ನೂ ನಮ್ಮಂತೆಯೇ ಸುಖದಿಂದಿಡಲು ಪ್ರಯತ್ನಮಾಡಬೇಕೆಂದು ಹೇಳಿದರೆ ಆಗ ಅದು ಸರಿಯಾದ ವಾದ. ನಾನು ಬಹಳ ಜವಾಬ್ದಾರಿಯಿಂದ ಮಾತನಾಡುತ್ತಿದ್ದೇನೆ. ಕೇವಲ ಒಬ್ಬ ಶ್ರೀಮಂತನಾದರೆ ಸಾಲದು. ಹಿಂದೆ ಅಂತಹ ಒಂದು ವಾದವಿತ್ತು. ಈಗ ಅದು ನಿಮ್ಮಿಂದ ಸಾಧ್ಯವಾಗದು. ಏಕೆಂದರೆ ಟಾಟಾ, ಬಿರ್ಲಾ ಅಂತಹ ಕಂಪನಿಗಳನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ನೀವು ಹೊರಟರೆ, ನಿಜವಾ

ಗಿಂತಲೂ ಅದು ನಿಮ್ಮಿಂದ ಸಾಧ್ಯವಾಗಲಾರದು. ಶ್ರೀಮತಿ ಇಂದಿರಾ ಗಾಂಧಿಯವರು ಇದರ ಬಗ್ಗೆ ಏನು ಹೇಳುತ್ತಾರೋ ಹೇಳಲಿ. ಏಕೆಂದರೆ ಅವರ ಕಂಪೆನಿಯನ್ನೇ ಆಗಲೀ, ಅವರ ಮೈಯನ್ನಾಗಲೀ ಇವರು ಮುಟ್ಟುವುದಕ್ಕಾಗುವುದಿಲ್ಲ. ಹಾಗೆ ಹೋಗೋಣವೆಂದರೆ ನಿಮ್ಮ ತಳವೇ ಬಂದೋಬಸ್ತು ಇಲ್ಲ.

ಅದಕ್ಕೆ ಏನು ಉತ್ತರ ಕೊಡುತ್ತೀರಿ ? ಇವತ್ತು ಯಾವುದೋ ಒಬ್ಬ ಮಾಲೀಕ ಪ್ರೈವೇಟ್ ಕ್ಯಾರೇಜಸ್‌ನ್ನು ಓಡಿಸುತ್ತಿದ್ದ, ಅಂಥ ಬಸ್‌ಗಳನ್ನೆಲ್ಲಾ ಹಿಡಿದು ರಾಷ್ಟ್ರೀಕರಣ ಮಾಡಿದ್ದೇವೆಂದು ಹೇಳುತ್ತಿದ್ದೀರಿ ಇದಕ್ಕಿಂತ ನಾಚಿಕೆ ಏನು ಬೇಕು ? ಸಮತಾವಾದದ ಮಾತನ್ನು ನಾನು ಒಪ್ಪುತ್ತೇನೆ. ಆದರೆ ಜನತೆಗೆ ವಿಷವನ್ನು ಬಿಟ್ಟು ಬಿಟ್ಟು ಏತಕ್ಕೆ ಕೊಲ್ಲುತ್ತೀರಿ ?

ಶ್ರೀ ಕೋಣಂದೂರು ಲಿಂಗಪ್ಪ.—ಅಷ್ಟು ಧೈರ್ಯವಿದ್ದರೆ ಸಿನಿಮಾ ಮಂದಿರಗಳನ್ನೂ ರಾಷ್ಟ್ರೀಕರಣ ಮಾಡಿ.

ಶ್ರೀ ಟಿ. ಎಂ. ಮಂಜುನಾಥ್.—ಇವತ್ತು ದೇಶಕೋಸ್ಕರ ಸಿನಿಮಾ ಮಂದಿರಗಳನ್ನು ತೆಗೆದುಕೊಳ್ಳುವುದಾದರೆ ನಾನು ನನ್ನ ಸಿನಿಮಾ ಮಂದಿರವನ್ನು ಬಿಟ್ಟುಕೊಡುವುದಕ್ಕೆ ತಯಾರಾಗಿದ್ದೇನೆ. ಈ ಸಮಯದಲ್ಲಿ ನನ್ನ ಕೆಲವು ಸ್ನೇಹಿತರಿಗೆ ಗಾಬರಿಯಾಗುತ್ತಿದೆ ಆದರೆ ನಾನು ದೇಶಕೋಸ್ಕರ ನನ್ನ ಸಿನಿಮಾ ಮಂದಿರವನ್ನು ಬೇಕಾದರೂ ತ್ಯಾಗ ಮಾಡುವುದಕ್ಕೆ ಸಿದ್ಧವಾಗಿದ್ದೇನೆ. ಒಂದು ಉದಾಹರಣೆ ತಮಗೆ ಹೇಳುತ್ತೇನೆ. ಮಾನ್ಯ ಚನ್ನಬಸಪ್ಪನವರು ನಮ್ಮ ಊರಿಗೆ ಬಂದಿದ್ದರು. ಸ್ಟೇಟ್ ಹೈವೇಯನ್ನು ಮಾಡುವುದಕೋಸ್ಕರ ಸುಂದರವಾಗಿ ಕಟ್ಟಿರತಕ್ಕಂಥ ಕಟ್ಟಡವನ್ನು ಒಡೆಯಬೇಕೆಂದು ತೀರ್ಮಾನ ಮಾಡಿದ್ದರು ಆಗ ಮಾನ್ಯ ಚನ್ನಬಸಪ್ಪನವರು ಬಂದು ನೋಡಿ ಅವರು ವಿಚಾರ ಮಾಡಿ ನೋಡುತ್ತೇನೆಂದು ಹೇಳಿದರು ಅದೇ ಬೇರೆಯವರು ಆಗಿದ್ದರೆ ಮನೆ ಮುರುಕತನ ಕೆಲಸ ಮಾಡುತ್ತಿದ್ದರು.

ಮಾನ್ಯ ಅಧ್ಯಕ್ಷರೇ, ನಮ್ಮ ದೇಶದಲ್ಲಿ ರಾಜ್ಯಪಾಲರು ಹೇಳಿದ ಹಾಗೆ ಆಹಾರದ ಪರಿಸ್ಥಿತಿ ತುಂಬಾ ಚೆನ್ನಾಗಿದೆ ಮತ್ತು ತಮಗೂ ಅದು ಗೊತ್ತಿದೆ. ಇವತ್ತು ರೈತ ಅವಲಂಬಿಸಿರತಕ್ಕಂಥದ್ದು ತಾನು ಬೆಳೆದಂಥ ಪದಾರ್ಥಕ್ಕೆ ಒಳ್ಳೆಯ ಸರಿಯಾದ ಬೆಲೆ ದೊರೆತಾಗ ಅವನು ಜೀವನ ನಡೆಸಲು ಅನುಕೂಲವಾಗುತ್ತದೆ. ತಮಗೆ ಗೊತ್ತಿರುವ ಹಾಗೆ 50-60 ರೂಪಾಯಿಗಳವರೆಗೆ ರಾಗಿ ವ್ಯಾಪಾರವಾಗಿದೆಂದು ತಿಳಿದು ಬಂದಿದೆ. ಮತ್ತು ಮುಖ್ಯಮಂತ್ರಿಗಳು ಭತ್ತವನ್ನು ಪೇಟೆಯ ಬೆಲೆಗೆ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಜೋಳಕ್ಕೂ ಹಾಗೆ ಹೇಳಿದ್ದರು ಜೋಳವನು ಬೆಳೆದವರು ಹಳ್ಳಕ್ಕೆ ಹೋದರು. ನಾನು ಹೇಳತಕ್ಕಂಥ ಪ್ರಶ್ನೆ ಇಷ್ಟೇ. ಏತಕ್ಕೆ ಹೇಳುತ್ತೇನೆಂದರೆ ರೈತರು ಸರ್ಕಾರದಿಂದಾಗಲಿ ಸಾರ್ವಜನಿಕ ಕ್ಷೇತ್ರದಿಂದಾಗಲೀ ತನ್ನ ವ್ಯವಸಾಯದ ಪ್ರಗತಿಗೋಸ್ಕರ ಕೊಳ್ಳತಕ್ಕಂಥ ಪದಾರ್ಥಗಳ ಬೆಲೆಯನ್ನು ತಾವು ವಿಮರ್ಶೆ ಮಾಡಿದರೆ ಹಾಗೂ ಅವನು ಕೊಳ್ಳತಕ್ಕಂಥ ಉಪಕರಣಗಳೇ ಆಗಲೀ, ಗೊಬ್ಬರಕ್ಕೆ ಆಗಲೀ ಮತ್ತು ತಾವು ಅಗ್ರಿಕಲ್ಚರಲ್ ಲೇಬರ್ ಇಷ್ಟೇ ಎಂದು ಲಿಮಿಟ್ ಮಾಡಿದ್ದೀರಿ ಇದನ್ನೆಲ್ಲಾ ಅವನು ಕೊಟ್ಟಾಗ ಅವನ ಪರಿಸ್ಥಿತಿ ಯಾವ ಮಟ್ಟಕ್ಕೆ ಬಂದಿತು ? ಬಡವ ಬೆಳೆದಂಥ ಪದಾರ್ಥಗಳಿಗೆ ಒಳ್ಳೆಯ ರೇಟನ್ನು ದೊರಕಿಸಿ ಕೊಡತಕ್ಕಂಥ ಜವಾಬ್ದಾರಿ ಯಾರದು ? ಯಾರು ಇವತ್ತು ರೈತರ ಶೋಷಣೆ ಮಾಡುತ್ತಿದ್ದಾರೆ ? ಇದನ್ನು ನಾವು ವಿಚಾರ ಮಾಡಬೇಕಾಗಿದೆ. ಇವತ್ತು ರೈತ ನಮ್ಮ ದೇಶದಲ್ಲಿ ಸುಖವಾಗಿರುವಂತೆ ನೋಡಬೇಕು. ಆದರೆ ಇವತ್ತು ರೈತ ನ್ಯಾಷನಲ್ ಬ್ಯಾಂಕುಗಳಲ್ಲಿ ಅಥವಾ ಸೊಸೈಟಿಗಳಲ್ಲಿ ತನ್ನ ಎಲ್ಲಾ ಆಸ್ತಿಯನ್ನೂ ಸಾಲಕೋಸ್ಕರ ಅಡವು ಮಾಡಿರುತ್ತಾನೆ. ಇವತ್ತು ಬಳಕೆದಾರನ ಕೊಳ್ಳುವ ಶಕ್ತಿಯೂ ಉಡುಗಿ ಹೋಗಿದೆ. ತಮಗೆಲ್ಲಾ ಗೊತ್ತಿದೆ ಈಗಿನ ಆರ್ಥಿಕ ಪರಿಸ್ಥಿತಿಯಲ್ಲಿ ಬಳಕೆದಾರನಿಗೆ ತನಗೆ ಬೇಕಾದಂಥ ಅತ್ಯಾವಶ್ಯಕ ಪದಾರ್ಥಗಳನ್ನು ಕೊಳ್ಳುವ ಚೈತನ್ಯವಿಲ್ಲ. ಹೋದ ವರ್ಷ ನೀವು ಕೈಗಾರಿಕೆಗಳಲ್ಲಿ ಅದಂಥ ಪ್ರಗತಿಯ ಚಿತ್ರವನ್ನು ನಮಗೆ ತೋರಿಸಿದ್ದೀರಿ ಆದರೆ ಮುಂದಿನ ವರ್ಷದ ಬಡ್ಜೆಟ್‌ನಲ್ಲಿ ಕೈಗಾರಿಕಾ ಕ್ಷೇತ್ರದಲ್ಲಿ ಹೆಚ್ಚುವರಿ ಪದಾರ್ಥಗಳನ್ನು ತಯಾರು ಮಾಡುವುದಕ್ಕೆ ಆಗಲಲ್ಲವೆಂದು ಹೇಳುತ್ತೀರಿ ಇದಕ್ಕೆ ಕಾರಣವಿದೆ. ಅದು ಏನೆಂದರೆ ಇವತ್ತು ಬಳಕೆದಾರರು ಪದಾರ್ಥಗಳನ್ನು ಕೊಂಡುಕೊಳ್ಳತಕ್ಕ ಶಕ್ತಿ ಏನು ಇದೆ ಅದು ಇವತ್ತಿನ ದಿವಸ

ಇಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳಬಯಸುತ್ತೇನೆ ಇವತ್ತು ನಮ್ಮಲ್ಲಿ ಸ್ಟೀಲ್
ತಯಾರಾಗುತ್ತಿದೆ. ಅಂಕಿಅಂಶಗಳನ್ನು ತರಿಸಿ ನೋಡಿ ಗೌವರ್ನಮೆಂಟ್ ಸೆಕ್ಟಾರ್‌ನಲ್ಲಿ,
ಪ್ರೈವೇಟ್ ಸೆಕ್ಟಾರ್‌ನಲ್ಲಿ ಪ್ರತ್ಯೇಕ ಪ್ರತ್ಯೇಕವಾಗಿ ಎಷ್ಟರಮಟ್ಟಿಗೆ ಉಪಯೋಗವಾಗುತ್ತಿದೆ
ಎನ್ನುವುದು ತಮಗೇ ಗೊತ್ತಾಗುತ್ತದೆ. ಬಳಕೆದಾರರ ಕೊಂಡುಕೊಳ್ಳತಕ್ಕಂಥ ಶಕ್ತಿ ಕುಗ್ಗಿ
ಇವತ್ತು ಕೈಗಾರಿಕಾ ಕ್ಷೇತ್ರಗಳಲ್ಲಿ ಉತ್ಪಾದನೆ ಮಾಡತಕ್ಕಂಥದ್ದು ಕುಸಿದು ಬೀಳತಕ್ಕಂಥ
ಪರಿಸ್ಥಿತಿ ಬಂದಿದೆ ಇದರ ಬಗ್ಗೆ ತಾವು ಆರ್ಥಿಕ ಪರಿಣಿತರೊಂದಿಗೆ ಆಲೋಚನೆ ಮಾಡಬೇಕು.
ಇಷ್ಟೇ ಅಲ್ಲದೆ ಇವತ್ತು ಬ್ಯಾಂಕುಗಳಲ್ಲಿ ಡಿಪಾಜಿಟ್ ತೆಗೆದುಕೊಳ್ಳಬೇಕಾದರೆ ಇಲ್ಲವೇ
ನ್ಯಾಷನಲ್ ಸರ್ಟಿಫಿಕೇಟ್ಸ್‌ಗಳನ್ನು ಕೊಡುವುದಾದರೆ ಅವರು ಕೊಡುತಕ್ಕಂಥದ್ದು 10–10½
ಪರ್ಸೆಂಟ್ ಬಡ್ಡಿ ಅದೇ ಅವರು ಇತರರಿಗೆ ಸಾಲ ಕೊಟ್ಟರೆ 18 ಪರ್ಸೆಂಟ್ ಬಡ್ಡಿಯನ್ನು
ಹಾಕುತ್ತಾರೆ. ಮಾನ್ಯ ಸ್ನೇಹಿತರಾದ ಕೃಷ್ಣನ್‌ರವರಿಗೆ ಗೊತ್ತು ಅವರು ಹೊರದೇಶಗಳಿಗೆ
ಹೋಗಿ ಬಂದಿದ್ದಾರೆ, ಯಾವ ದೇಶದ ಬ್ಯಾಂಕುಗಳ ವಹಿವಾಟಿನಲ್ಲೂ ಇಷ್ಟೊಂದು ವ್ಯತ್ಯಾಸ
ಕಂಡು ಬರುವುದಿಲ್ಲ. ಕೇವಲ 1–2 ಪರ್ಸೆಂಟ್ ಬಡ್ಡಿಯ ವ್ಯತ್ಯಾಸ ಕಂಡು ಬರಬಹುದು.
ಆದುದರಿಂದ ಇದನ್ನು ತಾವು ಸರಿ ಮಾಡಬೇಕು. ಯಾವುದೋ ಒಂದು ರೀತಿಯಲ್ಲಿ ಬೊಕ್ಕಸಕ್ಕೆ ಹಣ
ವನ್ನು ತುಂಬತಕ್ಕಂಥ ರೀತಿಯಲ್ಲಿ ವ್ಯವಸ್ಥೆ ಮಾಡಬಾರದು. ನಮ್ಮ ದೇಶಕ್ಕೆ ಅನುಗುಣವಾಗುವ
ರೀತಿಯಲ್ಲಿ ಮಾರ್ಪಾಡು ಮಾಡಬೇಕೆಂದು ನನ್ನ ಅಭಿಪ್ರಾಯವನ್ನು ತಮ್ಮ ಮುಂದಿಡುವುದಕ್ಕೆ
ಇಷ್ಟಪಡುತ್ತೇನೆ. ಬಹುಶಃ ಇನ್ನೊಂದು ಮಾತನ್ನು ಹೇಳುವುದಾದರೆ, ಬಳಕೆದಾರರಿಗೆ ಪದಾರ್ಥ
ಗಳನ್ನು ಕೊಳ್ಳುವಂಥ ಶಕ್ತಿಯನ್ನು ಉಂಟು ಮಾಡಬೇಕಾದರೆ ಈಗ ದೊಡ್ಡ ದೊಡ್ಡ ಪಟ್ಟಣ
ಗಳಲ್ಲಿ ಜನತಾ ಬಜಾರ್ ಎಂದು ಮಾಡಿದ್ದಾರೆ. ಅಲ್ಲಿ ಬಳಕೆದಾರರಿಗೆ ಕ್ಯಾಶ್ ಕಾರ್ಡ್
ಮತ್ತು ಕ್ರೆಡಿಟ್ ಕಾರ್ಡ್ ಎಂದು ಮಾಡಿದ್ದಾರೆ. ಇದರಿಂದ ಬಳಕೆದಾರರಿಗೆ ಕೊಂಡುಕೊಳ್ಳುವ
ಶಕ್ತಿ ಬರುತ್ತದೆ ಹಾಗೂ ಇವತ್ತು ಆಹಾರ ಪದಾರ್ಥಗಳನ್ನು ಉತ್ಪಾದನೆ ಮಾಡತಕ್ಕಂಥ
ವನಿಗೂ ಒಳ್ಳೆಯ ಬೆಲೆಯನ್ನು ಕೊಡಿಸಿ ಕೊಡಬಹುದು. ಬಹುಶಃ ಈ ಕಾರ್ಯಕ್ರಮವನ್ನು
ಕೈಗೊಳ್ಳುವುದರಿಂದ ಇಬ್ಬರಿಗೂ ಅನುಕೂಲವಾಗುತ್ತದೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.
ಮತ್ತೆ 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಹೇಳುವುದಾದರೆ, 20 ಅಂಶಗಳ ಕಾರ್ಯಕ್ರಮ
ಮತ್ತು ಶ್ರೀಮತಿ ಇಂದಿರಾಗಾಂಧಿಯವರ ಬೋರ್ಡ್ ಇವೆರಡೇ ಇವರ ಸಾಧನೆ. ಇವತ್ತು
ನೀವು ಏನನ್ನಾದರೂ ಸಾಧನೆ ಮಾಡಬೇಕಾದರೆ ಮೊದಲು ಕರ್ನಾಟಕ ದೇಶದ ಜನತೆಗೆ ಬಂದಿರ
ತಕ್ಕಂಥ ತುರ್ತು ಪರಿಸ್ಥಿತಿಯನ್ನು ತೆಗೆಯಿರಿ, ನಿಮ್ಮಲ್ಲಿ ಗಂಡಸು ತನವಿದ್ದರೆ ಮೊದಲು ಆ
ಕೆಲಸವನ್ನು ಮಾಡಿರಿ ಎಂದು ಹೇಳಿ. ಮಾನ್ಯ ಅಧ್ಯಕ್ಷರವರು ಕನಿಕರವಿಟ್ಟು ಇಷ್ಟು ಹೊತ್ತು
ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಭಾಷಣವನ್ನು
ಮುಗಿಸುತ್ತೇನೆ,

(Mr. Deputy Speaker in the chair)

ಶ್ರೀ ಬಿ. ವಿ. ಕಕಿಲಾಯ. (ಬಂಟವಾಳ)—ಸನ್ಮಾನ್ಯ ಅಧ್ಯಕ್ಷರ, ಈ ಸಲದ ರಾಜ್ಯಪಾಲರ
ಭಾಷಣದಲ್ಲಿ ಹೋದ ವರ್ಷದ ಭಾಷಣವನ್ನು ಪ್ರಸ್ತಾಪ ಮಾಡುತ್ತಾ 1975ರ ಉತ್ತಮಕ್ಕೆ
ಬದಲಾವಣೆಯಾಗುತ್ತದೆ ಎಂಬ ಹಿಂದಿನ ರಾಜ್ಯಪಾಲರ ಆಶಾಭಾವನೆಯನ್ನು ಕಾರ್ಯಗತಗೊಳಿಸುವು
ದಕ್ಕೆ ಈಗ ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದುದು ಮತ್ತು ಇಪ್ಪತ್ತು ಅಂಶಗಳ ಆರ್ಥಿಕ ಕಾರ್ಯ
ಕ್ರಮವನ್ನು ಘೋಷಣೆ ಮಾಡಿದ್ದು ಸಹಾಯವಾಗಿದೆ ಎನ್ನುವ ಬಗ್ಗೆ ಸೂಚಿಸಿದ್ದಾರೆ. ಆ ಬಗ್ಗೆ
ಈಗಾಗಲೇ ಮಾನ್ಯ ಸದಸ್ಯರು ಅನೇಕರು ಮಾತನಾಡಿದ್ದಾರೆ. ಈ ತುರ್ತು ಪರಿಸ್ಥಿತಿ
ಬಗ್ಗೆ ಯೋಚನೆ ಮಾಡುವುದಾದರೆ ಇದು ನಮ್ಮ ದೇಶಕ್ಕೆ ಅನಿವಾರ್ಯವಾಗಿ ಬಂತು.
ನಮ್ಮ ದೇಶದಲ್ಲಿ ಇವೊತ್ತಿನ ಪರಿಸ್ಥಿತಿಯಲ್ಲಿ ನಮ್ಮ ಸ್ವಾತಂತ್ರ್ಯವನ್ನು ರಕ್ಷಣೆ ಮಾಡಬೇಕಾದರೆ
ನಮ್ಮ ಪ್ರಜಾಪ್ರಭುತ್ವ ಪದ್ಧತಿಯನ್ನು ಕಾಪಾಡಿಕೊಂಡು ಬೆಳಸಿಕೊಂಡು ಬರಬೇಕಾದ,
ಹಾಗೂ ಜನತೆಯ, ಕಾರ್ಮಿಕರ, ರೈತರ, ಹಿಂದುಳಿದವರ ಹಾಗೂ ಯಾರು ಶೋಷಣೆಗೆ,
ದಬ್ಬಾಳಿಕೆಗೆ ಒಳಗಾಗಿದ್ದಾರೆ ಅವರ ಹಿತಾಸಕ್ತಿಗಳನ್ನು ನಾವು ಸಂರಕ್ಷಣೆ ಮಾಡಿ ಅವರ ಏಳಿಗೆ
ಯನ್ನು ಪ್ರಥಮ ಕರ್ತವ್ಯವಾಗಿ ಅಂಗೀಕರಿಸಿ ಅನುಷ್ಠಾನ ಮಾಡಬೇಕಾದರೆ ರಾಜಕೀಯ ರಂಗ
ದಲ್ಲಿ ಕೆಲವು ವಿಶಿಷ್ಟ ಕ್ರಮಗಳನ್ನು ಕೈಗೊಳ್ಳುವುದು ಅನಿವಾರ್ಯವಾಗಿ ಬಂತು. ಆದುದರಿಂದ

ಈ ತುರ್ತು ಪರಿಸ್ಥಿತಿಯನ್ನು ಕೇಂದ್ರ ಸರ್ಕಾರದವರು ಘೋಷಣೆ ಮಾಡಬೇಕಾಗಿ ಬಂತು ಎಂದು ನಾನು ತಿಳಿದುಕೊಂಡಿದ್ದೇನೆ. ಯಾವುದೇ ಒಂದು ಕಾರಣ ಇಲ್ಲವೇ ಸುಮ್ಮನೆ ತಮ್ಮ ಅಧಿಕಾರವನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಮಾತ್ರ ಈ ತುರ್ತು ಪರಿಸ್ಥಿತಿಯನ್ನು ಘೋಷಣೆ ಮಾಡಿದ್ದಾರೆ. ಎಂದು ಹೇಳುವುದಾದರೆ ನಾವು ನಮ್ಮ ಚರಿತ್ರೆಯನ್ನೇ ಮರೆತು ಮಾತನಾಡಿದಂತಾಗುತದೆ. ನಾವು ಇಲ್ಲಿಗೆ ಬರುವ ಮೊದಲು 28ನೇ ವರ್ಷದ ಗಣ ರಾಜ್ಯೋತ್ಸವ ವರ್ಧಂತಿಯನ್ನು ಆಚರಿಸಿ ಬಂದಿದ್ದೇವೆ, ಅಂದರೆ ಭಾರತ ಗಣ ರಾಜ್ಯದ ದೃಢೀಕರಣಕ್ಕೆ ಮೂರು ದಶಕಗಳಿಂದ ಎಷ್ಟು ತೀವ್ರವಾದ ಹೋರಾಟ ನಡೆದಿದೆ ಎಂಬುದು ಗೊತ್ತಾಗುತ್ತದೆ. ಸಾಮ್ರಾಜ್ಯವಾದಿಗಳಾದ ಬ್ರಿಟೀಷರು 200 ವರ್ಷಗಳ ಕಾಲ ಆಡಳಿತ ನಡೆಸಿದರು, ನಂತರ ಅವರು ಬಿಟ್ಟು ಹೋದಾಗ, ನಮ್ಮ ಪ್ರಗತಿಗೆ, ನಮ್ಮ ಸ್ವಾತಂತ್ರ್ಯಕ್ಕೆ ಅಪಾಯಕಾರಿಯಾದಂಥ ಅವಶೇಷಗಳನ್ನು ಬಿಟ್ಟು ಹೋದರು. ಬ್ರಿಟೀಷರ ಆಶ್ರಯದಲ್ಲೇ ಬೆಳೆದಂತಹವರು, ಬ್ರಿಟೀಷ್ ಆಧಿಪತ್ಯದ ಸಮರ್ಥಕರಾಗಿ ಆಳಿದವರು., ನಮ್ಮ ದೇಶದ ರಾಜಮಹಾರಾಜರುಗಳವರ ಜೊತೆಯಲ್ಲಿ ಬೆಳೆದು ಬಂದಂಥ ಗುತ್ತೇದಾರಿಗಳು ಟಾಟಾ ಮತ್ತು ಬಿರ್ಲ ಅಲ್ಲದೆ ಇನ್ನೂ 75 ಇಂತಹವರನ್ನು ಗುರುತಿಸ ಬಹುದು. ಇವರೆಲ್ಲರೂ ಕೂಡ 30 ವರ್ಷಗಳಿಂದಲೂ ನಮ್ಮ ಪ್ರಗತಿಗೆ ಹೆಜ್ಜೆ ಹೆಜ್ಜೆಗೂ ತಡೆ ಮಾಡಿದ್ದಾರೆ. ಈ ರೀತಿಯ ತಡೆಗಳನ್ನು ಮಾಡಬೇಕಾದರೆ ಇವರು ರಾಜಕೀಯ ರಂಗದಲ್ಲಿ ಇದ್ದ ದುಷ್ಟ ಶಕ್ತಿಗಳನ್ನೆಲ್ಲ ಬಳಸಿದ್ದಾರೆ ಬೆಳೆಸಿದ್ದಾರೆ ಆದ್ದರಿಂದ ಕಿಂಚಿತ್ ಪ್ರಗತಿ ಸಾಧಿಸಲಿಕ್ಕೂ ಇಷ್ಟು ಕಾಲ ನಮಗೆ ಬೇಕಾಯಿತು, ಏನೇ ಆದರೂ ನಮ್ಮ ದೇಶದ ಪ್ರಗತಿಯ ವೇಗ ಕುಂಠಿತ ಆದರೂ ಮುಂದುವರೆದು ಬಂದಿದ್ದೇವೆ, ಎನ್ನುವುದರಲ್ಲಿ ಸಂಶಯವಿಲ್ಲ ಎಂದು ಆಶಿಸುತ್ತೇನೆ. ಕಳೆದ ಹತ್ತು ವರ್ಷಗಳಲ್ಲಿ ಒಂದು ವಿಶಿಷ್ಟ ಪರಿಸ್ಥಿತಿ ಬಂತು, ಈ ಹತ್ತು ವರ್ಷದ ಅವಧಿ ನೋಡಿದರೆ ಯಾವ ಪ್ರತಿಗಾಮಿ ಶಕ್ತಿಗಳು ನಮ್ಮ ದೇಶದಲ್ಲಿ ಸಾಮ್ರಾಜ್ಯವಾದಿ ಶಕ್ತಿಗಳ ಗುತ್ತೇದಾರಿಗಳ ಮತ್ತು ಪಾಳೇಗಾರರ ಸಹಾಯ ಪಡೆದು ಇಲ್ಲಿಯವರೆಗೂ ತಡೆಯೊಡ್ಡುತ್ತ ಬೆಳೆದು ಬಂದರೂ ಅವರು ಈ ಹತ್ತು ವರ್ಷಗಳಲ್ಲಿ ದೇಶವನ್ನು ತಮ್ಮ ಅಧೀನಕ್ಕೆ ತೆಗೆದುಕೊಳ್ಳುತ್ತೇವೆ ಎನ್ನುವ ಸವಾಲಿಗೆ ಮಾಡಿದ್ದರು ಎನ್ನುವುದನ್ನು ಮರೆಯುವ ಹಾಗಿಲ್ಲ. ತುರ್ತು ಪರಿಸ್ಥಿತಿ ಘೋಷಣೆ ಕೆಲವು ವರ್ಷ ಮುಂಚೆ ಬ್ಯಾಂಕುಗಳನ್ನು ರಾಷ್ಟ್ರೀಕರಣ ಮಾಡಬೇಕಾದರೆ ಅದಕ್ಕೆ ಎಷ್ಟು ದೊಡ್ಡ ಹೋರಾಟ ನಡೆಯಬೇಕಾಗಿ ಬಂತು ಅದು ಗೊತ್ತಿದೆ. ಬ್ಯಾಂಕುಗಳು ರಾಷ್ಟ್ರೀಕರಣ ಆದಾಗ ಕಾನೂನು ಮೂಲಕ, ಸುಪ್ರೀಂ ಕೋರ್ಟ್ ಮೂಲಕ ಏನು ನಡೆಯಿತು ಎಂಬುದನ್ನು ನೋಡಿದ್ದೇವೆ. ಹಾಗೆ ರಾಜಧನ ರದ್ಧತಿ ಮಾಡಬೇಕಾದರೆ ಅದಕ್ಕೆ ಎಷ್ಟು ಅಡ್ಡಿ ಅಡಚಣೆಗಳ ಬಂದವು ಅದನ್ನು ನಾವು ನೋಡಿದ್ದೇವೆ. ಹೀಗೆ ಭೂ ಸುಧಾರಣೆಯ ಕಾರ್ಯಕ್ರಮವನ್ನು ದೇಶದಲ್ಲಿ ಜಾರಿಗೆ ತರಬೇಕಾದರೆ ಅದಕ್ಕೆ ಎಷ್ಟು ಸಲ ಸುಪ್ರೀಂ ಕೋರ್ಟ್ ಮೆಟ್ಟಲು ಹತ್ತಬೇಕಾಗಿ ಬಂತು ಎಷ್ಟು ಹೋರಾಟ ನಡೆಯಿತು ಅದು ತಮಗೂ ಗೊತ್ತಿದೆ.

ಶ್ರೀ ಜಿ.ಎನ್. ಪಾಟೀಲ್.—ತಾವು ಬ್ಯಾಂಕುಗಳು ರಾಷ್ಟ್ರೀಕರಣವಾದ ಮೇಲೆ ಬಡವರಿಗೆ ಏನು ಸಹಾಯ ದೊರೆತಿದ್ದು ಅದನ್ನು ತಿಳಿಸಬೇಕು.

ಶ್ರೀ ಬಿ.ವಿ ಕಕಿಲಾಯ.—ತಾವು ಕೇಳತಕ್ಕ ವಿಚಾರಕ್ಕೆ ಅನಂತರ ಬರುತ್ತೇನೆ. ನಾನು ಯಾವ ವಿಷಯವನ್ನು ಮಾಹಿತಿ ಇಲ್ಲದೇ ಹೇಳುವುದಕ್ಕೆ ಹೋಗುವುದಿಲ್ಲ. ಹೋದಸಾರಿ ಅಂದರೆ 1971 ರಲ್ಲಿ ನಡೆದಂಥ ಮಧ್ಯಾವಧಿ ಸಂಸತ್ ಚುನಾವಣೆ ಹಾಗೂ 1972ರಲ್ಲಿ ನಡೆದಂಥ ರಾಜ್ಯ ಶಾಸನ ಸಭಾ ಚುನಾವಣೆಗಳಲ್ಲಿ ಈ ದುಷ್ಟಶಕ್ತಿಗಳಿಗೆ ಅವರ ಸ್ಥಾನವೇನು, ಅವರ ಬಗ್ಗೆ ನಮ್ಮ ಜನತೆಯ ಅಭಿಪ್ರಾಯ ಏನು ಎಂದು ಸ್ಪಷ್ಟವಾಯಿತು ಜನತೆ ಆ ಸಂದರ್ಭದಲ್ಲಿ ಏನು ತಿಳಿಸಿದ್ದಾರೆ ಎಂದು ನೋಡಿದರೆ, ಜನತೆ ಇಂಥವರ ಕೈಯಲ್ಲಿ ಆಡಳಿತವನ್ನು ಕೊಡುವುದಕ್ಕೆ ತಯಾರಿಲ್ಲ ನಾವು ಯಾವ ದಿಕ್ಕಿನಲ್ಲಿ ದೇಶವನ್ನು ಒಯ್ಯಬೇಕು ಎಂಬ ಅಪೇಕ್ಷೆ ಜನತೆಗೆ ಇದೆ ಎಂಬುದನ್ನು ಆ ಸಂದರ್ಭದಲ್ಲಿ ಸ್ಪಷ್ಟವಾಗಿ ತೋರಿಸಿದ್ದಾರೆ. ಇನ್ನು ಚುನಾವಣೆಗಳ ಮೂಲಕ, ಈ ಪ್ರಜಾಪ್ರಭುತ್ವದ ವ್ಯವಸ್ಥೆಯ ಮೂಲಕವೆ, ಪುರೋಗಮನಕ್ಕೆ ಎಷ್ಟೇ ಅಡಚಣೆ ಇದ್ದರೂ ಕೂಡ ಅದನ್ನು ಮುಂದೆ ಸಾಗಿಸಿಕೊಂಡು ಹೋಗಬೇಕು. ಇದರಲ್ಲಿ ಸ್ಪಷ್ಟವಾದದ್ದು ಏನು ಎಂದರೆ ಈ ವಿರೋಧಿ ಶಕ್ತಿಗಳು ಇನ್ನು ಮುಂದೆ ತಮ್ಮ ಬೇಳೆ ಬೇಯುವುದಿಲ್ಲ ಎಂಬ ವಿಷಯವನ್ನು 1971-72ರಲ್ಲೇ ಮನವರಿಕೆ ಮಾಡಿಕೊಂಡರು. 1971 ಮತ್ತು 1972ರ ನಂತರ ಚುನಾವಣೆಗಳಲ್ಲಿ ಆರಿಸಿಬಂದಂಥ ಸರ್ಕಾರಗಳನ್ನು ಬುಡಮೇಲು

ಮಾಡಬೇಕೆಂಬ ಕೃತ್ಯಗಳನ್ನು ಅನೇಕ ಸಂದರ್ಭಗಳಲ್ಲಿ ಇವರು ಮಾಡಿದ್ದನ್ನು ನೋಡಿದ್ದೇವೆ. ಉದಾಹರಣೆಗೆ ಗುಜರಾತಿನಲ್ಲಿ ಏನು ನಡೆಯಿತು, ಬಿಹಾರ್‌ನಲ್ಲಿ ಏನು ನಡೆಯಿತು ? ಅಲ್ಲದೆ ನಮ್ಮ ದೇಶದಲ್ಲೇ ಅಸ್ಥಿರತೆ ಉಂಟು ಮಾಡಬೇಕೆಂದು ಸನ್ನಾಹ ನಡೆಯಿತು, ಇದು ನಮ್ಮ ದೇಶಕ್ಕೆ ಮಾತ್ರ ಸೀಮಿತವಾದದ್ದು ಎಂದು ತಿಳಿದುಕೊಂಡರೆ ತಪ್ಪಾಗುತ್ತದೆ. ಈ ರೀತಿ ಅಸ್ಥಿರತೆಯನ್ನು ತರತಕ್ಕಂಥಹ ಕೆಲವು ದುಷ್ಟಶಕ್ತಿಗಳನ್ನು ಮಟ್ಟ ಹಾಕುವುದು ಒಂದು ದೊಡ್ಡ ಪ್ರಶ್ನೆ ಅಲ್ಲ. ಆದರೆ ದುರಾದೃಷ್ಟವಶಾತ್ ಈ ದುಷ್ಟ ಶಕ್ತಿಗಳ ಹಿಂದೆ ಅಂತರಾಷ್ಟ್ರೀಯ ಶಕ್ತಿಗಳು ಇವೆ. ಎನ್ನುವುದನ್ನು ಮರೆಯುವ ಹಾಗಿಲ್ಲ. ಉದಾಹರಣೆಗೆ ಚಿಲಿ ದೇಶ ಮತ್ತು ಬಂಗ್ಲಾ ದೇಶ ನೋಡಿದರೆ ನಮಗೆ ಕಂಡುಬರುತ್ತದೆ. ಇಲ್ಲಿಯೂ ಕೂಡ ಇಂಥ ದುಷ್ಟ ಶಕ್ತಿಗಳು ನಮ್ಮ ಕೈಗೆ ಅಧಿಕಾರ ತೆಗೆದುಕೊಳ್ಳುವ ಪಿತೂರಿ ನಡೆಸಿದೆವು 4 (0N P. ಇಂಥಾ ಪರಿಸ್ಥಿತಿಯಲ್ಲಿ ಬಂಗ್ಲಾದೇಶದಲ್ಲಾಗಲೀ ಚಿಲಿ ದೇಶದಲ್ಲಾಗಲೀ ಏನಾಯಿತುಎಂಬುದನ್ನು ನೋಡೋಣ. ಅಲ್ಲಿ ಚುನಾಯಿತಸರ್ಕಾರಗಳನ್ನೂ ಜನತಾ ಬೆಂಬಲ ಪಡೆದಸರ್ಕಾರಗಳನ್ನೂ ಮತ್ತು ಒಬ್ಬ ರಾಷ್ಟ್ರಪಿತನೆನಿಸಿದ ನಾಯಕನನ್ನೂ ಕೂಡ. ಕೆಲವು ಜನ ತಲೆಗಡುಕರು, ಕೆಲವು ಮಿಲಿಟರಿ ಅಧಿಕಾರಿಗಳು ಕೆಲವರು ನಿರಾಶರಾಗಿ ಕ್ರೋಧಗೊಂಡಿದ್ದಂಥ ರಾಜಕಾರಣಿಗಳು ಸೇರಿ ಕೊಲೆ ಮಾಡುವಂಥ ಮತ್ತು ಇಡೀ ಅತನ ಸಂಸಾರವನ್ನೇ ನಿರ್ಮೂಲನ ಮಾಡಿತಮ್ಮ ಅಧಿಕಾರವನ್ನು ಸ್ಥಾಪನೆ ಮಾಡತಕ್ಕ ಮಟ್ಟಕ್ಕೆ ಹೋಗಿದ್ದಾರೆ ಎಂದರೆ, ನಾವು ಆಲೋಚನೆಮಾಡಬೇಕಾದದ್ದೇ. ಆದರೆ ನಮ್ಮ ದೇಶದ ಸುದೈವವೋ ಏನೋ ಇದಕ್ಕೆಲ್ಲಾ ಅವಕಾಶವಾಗದ ಹಾಗೆ ಸಕಾಲದಲ್ಲಿ ಸೂಕ್ತ ಕ್ರಮ ತೆಗೆದುಕೊಂಡ ನಮ್ಮ ಪ್ರಧಾನಿಯವರನ್ನು ನಮ್ಮ ರಾಷ್ಟ್ರ ಹೃತ್ಪೂರ್ವಕವಾಗಿ ಅಭಿನಂದಿಸಬೇಕಾಗಿದೆ ಅಕಸ್ಮಾತ್ ಪ್ರಧಾನ ಮಂತ್ರಿಯವರು ಇಂಥಾ ಒಂದು ಕ್ರಮವನ್ನು ತೆಗೆದುಕೊಳ್ಳದಿರುತ್ತಿದ್ದರೆ ಈ ವಿಧಾನಸಭೆ ನಡೆಯುತ್ತಿತ್ತೋ ಇಲ್ಲವೋ ಎಂಬ ಅನುಮಾನ ಬರುತ್ತದೆ. ಪ್ರಧಾನ ಮಂತ್ರಿಗಳು ಈ ಕ್ರಮವನ್ನು ಏತಕ್ಕೋಸ್ಕರ ತೆಗೆದುಕೊಂಡರು ಎಂಬುದನ್ನು ನಾವು ಮೊದಲು ವಿಚಾರ ಮಾಡಬೇಕಾಗಿದೆ. ಚುನಾಯಿತ ಪ್ರತಿನಿಧಿಗಳು ವಿಧಾನ ಸಭೆಗೆ ಹೋಗಬಾರದು, ಹಾಗೇನಾದರೂ ಹೋಗುವುದಾದರೆ, ಅವರು ತಮ್ಮ ಕೈಗೆ ಸಿಕ್ಕಿದರೆ ಅವರ ತಲೆ ಬೋಳಿಸಿ, ಬೀದಿಯಲ್ಲಿ ಮೆರವಣಿಗೆ ಮಾಡುತ್ತೇವೆ ಎಂದು ಈ ದುಷ್ಟ ಶಕ್ತಿಗಳು ಹೇಳುತ್ತಿದ್ದರು. ಹೀಗೆ ಹೇಳುತ್ತಿದ್ದವರು, ಇವತ್ತಿನ ದಿವಸ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದರೆ, ನಮ್ಮ ರಾಜ್ಯ ವಿಧಾನಸಭೆ ಇರಲಿ. ರಾಷ್ಟ್ರದ ಯಾವುದೇ ರಾಜ್ಯದ ವಿಧಾನ ಸಭೆಗಳೂ ನಡೆಯುವುದಕ್ಕೆ ಅಸಾಧ್ಯವಾಗುತ್ತಿತ್ತೇನೋ ಕೇರಳ ರಾಜ್ಯದಲ್ಲಿ 1957ರಲ್ಲಿ ತೆಗೆದುಕೊಂಡ ಕ್ರಮದ ಬಗ್ಗೆ ಮಾನ್ಯ ಹಂಗಾಮಿ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದ್ದಾರೆ. 1957ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷರಾಗಿ ಕೇರಳಾ ಸರ್ಕಾರದ ವಿರುದ್ಧ ತೆಗೆದುಕೊಂಡು ಕ್ರಮ ಬಹಳ ವಿಚಿತ್ರವಾದುದೆಂದು ಹೇಳಿದ್ದಾರೆ. 1957ರಲ್ಲಿ ಶ್ರೀಮತಿ ಇಂದಿರಾ ಗಾಂಧಿಯವರು ಕಾಂಗ್ರೆಸ್ ಅಧ್ಯಕ್ಷೆಯಾಗಿದ್ದಾಗ ಮಾಡಿದಂತ ಕಾರ್ಯ ತಪ್ಪು ಆದರೆ, ಇದು ಸರಿಯೆಂದು ಹೇಳಲಿಕ್ಕಾಗುವುದಿಲ್ಲ. ಅವರು ಮಾಡಿದ ತಪ್ಪಿಗೆ ಚರಿತ್ರೆ ತಕ್ಕ ಶಾಸ್ತಿ ಮಾಡುತ್ತದೆ ಎಂದೂ ಹೇಳುತ್ತೇನೆ ಗಾಳಿಯನ್ನು ಬಿತ್ತಿದರೆ ಬಿರುಗಾಳಿಯ ಪಸಲನ್ನು ಕೊಯ್ಯಬೇಕಾಗುತ್ತದೆ ಎಂದು ಒಂದು ಗಾದೆ ಇದೆ. ಅವರು ಗಾಳಿ ಬಿತ್ತಿದರೆ, ನೀವು ಬಿರುಗಾಳಿ ಹೆಚ್ಚಿಸಿದ್ದೀರಿ. ಈ ಬಿರುಗಾಳಿ ಇಡೀ ನಮ್ಮ ರಾಜ್ಯವಲ್ಲ, ದೇಶವೇ ಬಹಳ ಕಷ್ಟದಿಂದ ಪಡೆದಿರುವಂತ, ಪಡೆದಂದಿನಿಂದ ಉಳಿಸಿಕೊಂಡು ಬಂದಂಥ ಸ್ವಾತಂತ್ರ್ಯ ಮತ್ತು ರಾಜ್ಯಾಂಗದಲ್ಲಿ ಅಳವಡಿಸಿಕೊಂಡಂತ ಪ್ರಜಾಪ್ರಭುತ್ವವನ್ನೂ ಮತ್ತು ನಮ್ಮ ದೇಶದ ಜನತೆ ಬಹಳ ಕಷ್ಟಪಟ್ಟು ಸಾಧಿಸಿರುವ ಸಾಧನೆ-ಪ್ರಗತಿಯನ್ನು ನಿರ್ಮೂಲನ ಮಾಡುವಂಥ ಪರಿಸ್ಥಿತಿ ಬರಬಹುದು. ಆದುದರಿಂದ ಅದನ್ನು ಪಡೆಯಲೇಬೇಕು. ಆದುದರಿಂದ ಈ ವಿಚಾರಗಳನ್ನೆಲ್ಲಾ ಮೊದಲೇ ತಿಳಿದುಕೊಂಡು ಮಾನ್ಯ ಶ್ರೀಮತಿ ಇಂದಿರಾಗಾಂಧಿಯವರು ಪ್ರತಿಗಾಮಿ ಶಕ್ತಿಗಳ ವಿರುದ್ಧ ಕ್ರಮಗಳನ್ನು ತೆಗೆದುಕೊಂಡಿದ್ದರೆ, ಅವರನ್ನು ಹೃತ್ಪೂರ್ವಕವಾಗಿ ಎಲ್ಲರೂ ಅಭಿನಂದಿಸಬೇಕೆಂದು ಹೇಳುತ್ತೇನೆ. ತುರ್ತು ಪರಿಸ್ಥಿತಿ ಘೋಷಣೆ ದೇಶದಲ್ಲಿ ಆವರಿಸಿದ್ದ ಪ್ರತಿಗಾಮಿ ಶಕ್ತಿಗಳಿಗೆ ಒಂದು ಸವಾಲಾಗಿದೆ. ಬಲಾತ್ಕಾರವಾಗಿ ಪೋಲಿಸ್ ಮತ್ತು ಮಿಲಿಟರಿ ಅಧಿಕಾರಿಗಳನ್ನು ತಮ್ಮ ಉದ್ದೇಶಕ್ಕೋಸ್ಕರ ಬಳಸಿ, ಅವರನ್ನು ಬಂದೂಕವನ್ನು ತಿರುಗಿಸಿ ಹಿಡಿಯಿರಿ ಎಂದು ಹೇಳಿ, ಭಾರತದಲ್ಲಿ ಸರ್ವಾಧಿಕಾರವನ್ನು ಸ್ಥಾಪಿಸುವ ಉದ್ದೇಶ ಇಟ್ಟುಕೊಂಡು ಬಹಿರಂಗ ಘೋಷಣೆಗಳನ್ನು ಕೂಗುತ್ತಾ ಚಳವಳಿ ನಡೆಯುತ್ತಿರುವಾಗ, ಅವುಗಳನ್ನು ನದೆಬಡಿಯಲು ಇಂಥಾ

ಕ್ರಮಗಳನ್ನು ತೆಗೆದುಕೊಳ್ಳದಿದ್ದರೆ, ಇವತ್ತಿನ ದಿವಸ ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ಉಳಿಯುತ್ತಿತ್ತೊ ಏನೋ ಹೇಳಲಿಕ್ಕೆ ಬರುವುದಿಲ್ಲ. ಈ ಒಂದು ಭೀತಿ ನನಗೆ ಇತ್ತು, ತಾವೆಲ್ಲರೂ ಕೂಡ ಈ ಒಂದು ಭಯವನ್ನು ಹೊಂದಿದ್ದಿರಿ ಎಂದು ನಾನು ನಂಬಿದ್ದೇನೆ.

ಪ್ರಜಾಪ್ರಭುತ್ವದಲ್ಲಿ ಕೆಲವು ಸಂದರ್ಭಗಳಲ್ಲಿ, ಅದಕ್ಕೆ ಮಾರಕವಾದಂತ ಮಾರ್ಗಗಳನ್ನು ಹಿಡಿದು ಕೆಲವರು ಹೊರಟಾಗ, ಹಾಗೆ ಹೊರಟವರನ್ನು ಬಂಧಿಸಿ ಜೈಲಿಗೆ ಹಾಕಬೇಕಾಗುತ್ತದೆ. ಆದರೆ, ವಿಚಾರಣೆ ಇಲ್ಲದೆ ಬಂದನಕ್ಕೆ ಒಳಪಡಿಸುವುದನ್ನು ನಾನು ಪೂರ್ತಾ ಒಪ್ಪುವುದಿಲ್ಲ. ನಾನೂ ಕೂಡ, ಹಂಗಾಮಿ ವಿರೋಧಪಕ್ಷದ ಹಂಗಾಮಿ ನಾಯಕರ ಸರ್ಕಾರ ಇದ್ದ ಸಮಯದಲ್ಲಿ ವಿಚಾರಣೆ ಇಲ್ಲದೆ ಸುಮಾರು ಒಂದು ವರ್ಷಕಾಲ ಜೈಲು ವಾಸವನ್ನು ಅನುಭವಿಸಿದ್ದೇನೆ. ಆಗ ಸ್ವಾಗತಿಸಿದ್ದಂಥ ಜನ ಈಗ ವಿರೋಧ ಮಾಡುತ್ತಿದ್ದಾರೆ ಅಷ್ಟೆ. ಆದರೆ) ನಾವು ಇಲ್ಲಿ ತಾತ್ವಿಕವಾಗಿ ವಿಚಾರ ಮಾಡಬೇಕಾಗುತ್ತದೆ. ಯಾವ ಉದ್ದೇಶಕ್ಕಾಗಿ ಈ ರೀತಿ ಮಾಡಲಾಗಿದೆ ? ಯಾರನ್ನಾದರೂ ಜೈಲಿಗೆ ಹಾಕಬೇಕಾದರೆ, ಅವರು ಮಾಡಿರುವ ತಪ್ಪಾದರೂ ಏನು ? ಇದು ಬಹಳ ಪ್ರಾಮುಖ್ಯವಾದ ಪ್ರಶ್ನೆ. ಕಾರ್ಮಿಕ ಹಿತಾಶಕ್ತಿಗಳ ರಕ್ಷಣೆಗೆ ಪ್ರಯತ್ನ ಮಾಡಿದಾಗ, ಅಥವಾ ದೇಶದಲ್ಲಿ ಸಕ್ರಿಯ ಕಾರ್ಯ ನಡೆಯುತ್ತಿರುವಾಗ, ದೇಶ ಅಭಿವೃದ್ಧಿ ಮಾರ್ಗದಲ್ಲಿ ನಡೆಯುತ್ತಿರುವಾಗ— ಇವನ್ನೆಲ್ಲಾ ನಡೆಬಡೆಯುವುದಕ್ಕೆ ತುರ್ತುಪರಿಸ್ಥಿತಿ ಘೋಷಣೆ ಮಾಡಿದ್ದರೆ, ನಿಜವಾಗಿಯೂ ನಾವು ತೀವ್ರವಾಗಿ ಇದನ್ನು ಖಂಡಿಸಲೇಬೇಕಾಗುತ್ತದೆ. ಇದರಲ್ಲಿ ಯಾವ ಅನುಮಾನವೂ ಇಲ್ಲ. ಆದರೆ ದೇಶದಲ್ಲಿದ್ದ ಪರಿಸ್ಥಿತಿ ಇದಕ್ಕೆ ತದ್ವಿರುದ್ಧವಾಗಿದ್ದಿತು ಕಾಳಸಂತೆಕೋರರು ತಮ್ಮಲ್ಲಿದ್ದ ಕಾಳಧನದಿಂದ ಇಡೀ ದೇಶವನ್ನೇ ಕೊಂಡುಕೊಳ್ಳುವಷ್ಟು ಪ್ರಾಬಲ್ಯ ಹೊಂದಿದ್ದರು, ಅವರಲ್ಲಿ ಹಿಮಾಲಯ ಪರ್ವತದ ಎರಡರಷ್ಟು ಹಣ ಶೇಖರಣೆಯಾಗಿತ್ತು. ವಾಂಚೂ ಸಮಿತಿಯ ವರದಿಯ ಪ್ರಕಾರ, ನಮ್ಮ ದೇಶದಲ್ಲಿನ ಕಾಳಧನದ ಉತ್ಪನ್ನ ವರ್ಷಕ್ಕೆ 1,400 ಕೋಟಿ ರೂಪಾಯಿಗಳಷ್ಟಾಗುತ್ತದೆ. ಭಾರತ ಸರ್ಕಾರವು ಒಂದು ವರ್ಷದ ಆಯವ್ಯಯ ಪತ್ರದಲ್ಲಿ ತೋರಿಸುವ ಹಣದಷ್ಟು ಮೌಲ್ಯದ ಹಣ ಕಾಳಧನದಿಂದ ವರ್ಷವೊಂದಕ್ಕೆ ಈ ದೇಶದಲ್ಲಿ ಉತ್ಪನ್ನವಾಗುತ್ತಿದೆ ಎಂದರೆ, ಅಂತಹ ಕಾಳಸಂತೆಕೋರರನ್ನು ಯಾರು, ಹೇಗೆ ನಡೆಬಡೆಯುವುದು ? ಅವರನ್ನು ನಡೆಬಡೆಯುವುದು ಅಷ್ಟೊಂದು ಸುಲಭಸಾಧ್ಯವಲ್ಲ. ಇಂಥಾ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಅವರ ಮೇಲೆ ಮೀಸಾವನ್ನು ಉಪಯೋಗ ಮಾಡುವುದು ಅವಶ್ಯವಾಗಿದ್ದಿತು. ಅಂಥಾ ಒಂದು ಕಠಿಣ ಕಾರ್ಯಕ್ರಮವನ್ನು ತೆಗೆದುಕೊಳ್ಳಲೇಬೇಕಾಗಿತ್ತು. ಹಾಗೇನಾದರೂ ಈ ಕ್ರಮವನ್ನು ತೆಗೆದುಕೊಳ್ಳದೇ ಹೋಗಿದ್ದ ಪಕ್ಷದಲ್ಲಿ ಈ ಭಾರತದ ಭವಿಷ್ಯ ಏನಾಗುತ್ತಿತ್ತು ಎಂಬುದನ್ನು ತಾವೇ ಸಾವಧಾನವಾಗಿ ಯೋಚನೆ ಮಾಡಿ. ಇಂಥಾ ಸಂದರ್ಭ ಒದಗಿ ಬಂದಿರುವಾಗ, ತುರ್ತುಪರಿಸ್ಥಿತಿಯನ್ನು ಘೋಷಿಸಿದ್ದು ತಪ್ಪೇ ! ನಮ್ಮ ದೇಶದ ಜನತೆಯ ಹಿತಾಶಕ್ತಿಕ್ಕೋಸ್ಕರ ಕೆಲಸ ಮಾಡುವಂಥ ಶಕ್ತಿಗಳ ವಿರುದ್ಧ ಇದನ್ನು ಉಪಯೋಗ ಮಾಡಿದರೆ, ಅದು ತಪ್ಪು. ಅಖಿಲ ಭಾರತ ಮಟ್ಟದ ಇಂಜಿನಿಯರಿಂಗ್ ಸಮ್ಮೇಳನ ಬೆಂಗಳೂರಿನಲ್ಲಿ ನಡೆದಾಗ ಸಾರ್ವಜನಿಕರ ಸಭೆಗಳು ನಡೆಯಬಾರದೆಂದು ಅಡಚಣೆ ತಂದದ್ದು ತಪ್ಪು. ಹಾಗೇನಾದರೂ ತುರ್ತುಪರಿಸ್ಥಿತಿ ಘೋಷಣೆಯಲ್ಲಿ ಈ ಅಂಶವೂ ಅಡಕವಾಗಿದೆ ಎಂದು ಸಮ್ಮೇಳನ ನಡೆಸುವುದಕ್ಕೆ ಸರ್ಕಾರದವರು ಅವಕಾಶ ಕೊಡದಿದ್ದರೆ; ಅಗ ಅವರು ಮಾಡಿದ್ದು ತಪ್ಪು ಎಂದು ನಾನುಒಪ್ಪಿಕೊಳ್ಳುತ್ತೇನೆ ಅದು ಕಾನೂನಿನದುರುಪಯೋಗವಾಗುತ್ತದೆ. ಹಾಗುಬೋನಸ್ ಬಗ್ಗೆ ಹೊರಡಿಸಿದ ಸುಗ್ರೀವಾಜ್ಞೆಗೆ ವಿರೋಧ ವ್ಯಕ್ತಪಡಿಸಿ ದೇಶಾದ್ಯಾಂತ ರಾಜ್ಯಾದ್ಯಾಂತ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ಕೂಡ ಲಕ್ಷಾಂತರ ಮಂದಿ ಕಾರ್ಮಿಕರು ಅನ್ಯಸತ್ಯಾಗ್ರಹ ರೂಪದಲ್ಲಿ ಮತಪ್ರದರ್ಶನ ಮಾಡಿದರು.

ಸಂಪುಹೂಡದೆ ಅನ್ನಸತ್ಯಾಗ್ರಹ ಏತಕ್ಕೆ ಮಾಡಿದರು? ಇವತ್ತಿನ ತುರ್ತುಪರಿಸ್ಥಿತಿಯಲ್ಲಿ ನಾವು ಸರ್ಕಾರಕ್ಕೆ ಪ್ರತಿಭಟನೆ ವ್ಯಕ್ತ ಮಾಡುವಾಗ ದೇಶದ ಸಮಗ್ರತೆಗೆ ಮತ್ತು ಸ್ಥಿರತೆಗೆ ಭಂಗ ಬಾರದಂಥ ಕ್ರಮವನ್ನು ನಮ್ಮ ದೇಶದ ಕಾರ್ಮಿಕ ವರ್ಗ ಅಂಗೀಕಾರ ಮಾಡಿತು. ಅನೇಕ ಕಡೆಗಳಲ್ಲಿ ಅನ್ನಸತ್ಯಾಗ್ರಹ ನಡೆದಿದೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 8—10 ಕಡೆ ನಡೆದು ಸುಮಾರು 400 ಮಂದಿ ಕಾರ್ಮಿಕರು ಭಾಗವಹಿಸಿದ್ದರು ಅಲ್ಲಿ ಬಂಧನ ಆಗಲಿಲ್ಲ. ಬೆಂಗಳೂರಿನಲ್ಲಿ ಇದನ್ನು ಮಾಡಿದಾಗ ಇಲ್ಲಿನ ಅಧಿಕಾರಿಗಳಿಗೆ ಇದು ಸರಿಹೋಗದೆ, ಗೆಳೆಯ ಕೃಷ್ಣನ್ ಸಹಿತ ಕೆಲವು ಮುಖಂಡರುಗಳನ್ನು ಬಂಧನ ಮಾಡಿದರು. ಇಂಥಾದ್ದು ಆಗುತ್ತದೆ, ಆಗುವುದಿಲ್ಲ ಎಂದು

ಶಕ್ತಿಗಳ ಮಧ್ಯೆ, ಅಂದರೆ ಪ್ರಗತಿಗಾಮಿ ಮತ್ತು ಪ್ರತಿಗಾಮಿಗಳ ನಡುವೆ ತೀವ್ರತರವಾದ ಹೋರಾಟ ನಡೆಯುವಾಗ ಸ್ವಲ್ಪಮಟ್ಟಿಗೆ ನಮಗೂ ನೋವಾಗುತ್ತದೆ. ಇಂಥ ವಿಚಾರಗಳನ್ನು ಪರಿಶೀಲನೆಮಾಡಿ ಅಧಿಕಾರಿಗಳ ಗಮನಕ್ಕೆ ತರೋಣ, ಸರ್ಕಾರದ ಗಮನಕ್ಕೆ ತರೋಣ, ಶಾಸನ ಸಭೆಯಲ್ಲಿ ಮತ್ತು ಪಾರ್ಲಿಮೆಂಟ್‌ನಲ್ಲಿ ಹೇಳೋಣ. ಆದರೆ, ಈ ಶಾಸನಗಳೇ ಬೇಡ ಎಂದು ಹೇಳಿದರೆ, ನಾವು ಯಾವ ಒಂದು ಉದ್ದೇಶಕ್ಕಾಗಿ ಹೋರಾಟವನ್ನು ನಡೆಸುತ್ತೇವೆ, ಆ ಉದ್ದೇಶವನ್ನು ಈಡೇರಿಸಲಿಕ್ಕೆ ಸಾಧ್ಯವಾಗುವುದಿಲ್ಲ ಬರೀ ಘೋಷಣೆಯಲ್ಲಿಯೇ ಕರ್ತವ್ಯ ಮುಗಿದು ಹೋಗಬಹುದು.

ಇನ್ನೊಂದು ವಿಚಾರ ಏನು ಎಂದರೆ ಈ ತುರ್ತುಸರಿಸ್ಥಿತಿಯಲ್ಲಿ ನಮ್ಮ ಪ್ರಧಾನ ಮಂತ್ರಿಯವರು 20 ಅಂಶಗಳ ಕಾರ್ಯಕ್ರಮವನ್ನು ಘೋಷಣೆ ಮಾಡಿದರು. ನಾನು ಇವನ್ನು ಯಾವ ರೀತಿ ಅರ್ಥ ಮಾಡುತ್ತೇನೆಂದರೆ. ಈ ಪ್ರತಿಗಾಮಿಗಳಿಗಾಗಿ ತುರ್ತುಪರಿಸ್ಥಿತಿ ಘೋಷಣೆ ಅನಿವಾರ್ಯವಾಯಿತು. ತುರ್ತುಶಾಸನದಿಂದ ಅಂಥ ಶಕ್ತಿಗಳನ್ನು ತಡೆಹಿಡಿಯುವುದಕ್ಕೆ ಮಾತ್ರ ಸಾಧ್ಯ. ಅದು ಮತ್ತೆ ಚಿಗುರಿ ಇಡೀ ದೇಶವನ್ನೇ ಆವರಿಸಿದಂತೆ ಅದರ ಬೇರನ್ನು ಕಿತ್ತು ಹಾಕಬೇಕು ಎಂದು ಈ 20 ಅಂಶಗಳ ಕಾರ್ಯಕ್ರಮವನ್ನು ಘೋಷಣೆ ಮಾಡಿದ್ದಾರೆಂದು ತಿಳಿದುಕೊಂಡಿದ್ದೇನೆ. ಈ ಕಾರ್ಯಕ್ರಮದ ಘೋಷಣೆ, ಇದರ ಕೃತಿ ಮತ್ತು ಅನುಷ್ಠಾನದ ನಡುವೆ ಅಂತರ ಇರಬಹುದು. ಇವತ್ತಿನ ಸರ್ಕಾರದ ಸ್ವಭಾವ, ಗುಣ ಮತ್ತು ಚರಿತ್ರೆ ಎಲ್ಲವನ್ನು ನೋಡಿದರೆ ಘೋಷಣೆ ಮಾಡಿದ ಹಾಗೆ ಕರ್ತವ್ಯ ಮಾಡುತ್ತಾರೆಂದು ನಾನು ನಿರೀಕ್ಷಿಸುವುದಿಲ್ಲ. ಸಮತಾವಾದ ಘೋಷಣೆ ಮಾಡಿದರು, ಬಂಡವಾಳ ಪದ್ಧತಿ ಬೆಳೆಯುತ್ತಿದೆ. ತುರ್ತುಘೋಷಣೆಯನಂತರ ಇನ್ನೂ ಅದೇ ಪಥದಲ್ಲಿ ನಡೆಯುತ್ತಿದೆ. ಹತ್ತು ವರ್ಷಗಳಲ್ಲಿ ಟಾಟಾ ಮತ್ತು ಬಿರ್ಲಾ, ಎರಡು ಪ್ರಸಿದ್ಧವಾದ ಗುತ್ತೇದಾರ ಗುಂಪಿನವರ ಬಂಡವಾಳ ಹತ್ತು ವರ್ಷಗಳ ಹಿಂದೆ 965—2 ಕೋಟಿ ರೂ.ಗಳು ಇತ್ತು. ಇವತ್ತು 1200 ಕೋಟಿ ರೂ.ಗಳು ಆಗಿದೆ. ಖಾಸಗಿ ವಿದೇಶಿ ಬಂಡವಾಳಗಾರರ ವ್ಯವಹಾರಗಳು ಒಂದು ವರ್ಷಕ್ಕೆ 1200 ಕೋಟಿ ಇದ್ದದ್ದು ಈಗ 1750 ಕೋಟಿಗೆ ಏರಿದೆ. ಇದು ಸಮತವಾದ ಅಲ್ಲ. ಅದಕ್ಕೆ ಘೋಷಣೆಗೂ ಕೃತಿಗೂ ನಡುವೆ ಇರುವ ಪರಸ್ಪರ ವೈಷಮ್ಯ ಮತ್ತು ವೈಪರೀತ್ಯ ಎಂದು ಕರೆಯುತ್ತೇನೆ. ಈಗ ಅದೇ ರೀತಿ ಬ್ಲಾಕ್ ಮಾರ್ಕೆಟ್ ವ್ಯವಹಾರ ಕಳೆದ ಹತ್ತು ವರ್ಷಗಳಲ್ಲಿ ಬೃಹದಾಕಾರವಾಗಿ ಬೆಳೆದಿದೆ ಎನ್ನುವುದನ್ನು ನಾವು ಒಪ್ಪಿಕೊಳ್ಳುತ್ತೇನೆ, ಹಾಗಿರುವಾಗ ಘೋಷಣೆಗೂ ಅನುಷ್ಠಾನಕ್ಕೂ ಭಾರಿ ಅಂತರ ಮಾತ್ರದಲ್ಲ ತೀರಾ ವೈಪರೀತ್ಯ ಕಾಣುತ್ತದೆ. ಮಾತು ಒಂದು, ಕೃತಿ ಒಂದು. ಧೋರಣೆಯ ವಿರೋಧವಾದ ದಿಕ್ಕಿನಲ್ಲಿ ವ್ಯವಹಾರ ನಡೆದಿದೆ ಎಂದರೆ ಬಹುಶಃ ಇದನ್ನು ಅಲ್ಲಗಳೆಯುವಂತಿಲ್ಲ. ಇಂಥ ವೈಶಕ್ಯಗಳನ್ನು ಪೂರ್ತಿಯಾಗಿ ತೊಡೆದುಹಾಕಬೇಕು. ಘೋಷಣೆಗೆ ಅನುಗುಣವಾಗಿ ವ್ಯವಹಾರ ಮಾಡಬೇಕು. ವೇಗವಾಗಿ ಹೋಗಬೇಕು ಎಂದು ಕೆಲವರು ಹೇಳಬಹುದು, ನಿಧಾನವಾಗಿ ಹೋಗಬಹುದು ಎಂದು ಬೇರೆ ಕೆಲವರು ಹೇಳಬಹುದು, ಅದನ್ನು ಅರ್ಥಮಾಡಿಕೊಳ್ಳುವುದಕ್ಕೆ ನಮಗೆ ಸಾಧ್ಯವಿದೆ. ಜನರಲ್ಲಿ ಸ್ವಲ್ಪ ಕೂಗು ಎಬ್ಬಿಸಿ ಅದಕ್ಕೆ ಇನ್ನಷ್ಟು ಬೆಂಬಲಕೊಟ್ಟು ಸ್ವಲ್ಪ ಬೇಗ ಮಾಡಿಸೋಣ ಆದರೆ ಹೇಳಿದ ಮಾತಿಗೆ ತದ್ವಿರುದ್ಧವಾಗಿಯೇ ಕಾರ್ಯ ಮಾಡಿದರೆ ಆಗ ತೀವ್ರವಾದ ಪ್ರತಿಭಟನೆ ಬೆಳೆದೇ ಬೆಳೆಯುತ್ತದೆಂದು ತಮ್ಮ ಗಮನಕ್ಕೆ ತರುತ್ತನೆ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ, ನಮ್ಮ ರಾಜ್ಯದಲ್ಲಿ ಕಂಟ್ರಾಕ್ಟ್ ಕ್ಯಾರೇಜಸ್‌ಗಳನ್ನು ಮೊನ್ನೆ ತಾನೇ ರಾಷ್ಟ್ರೀಕರಣ ಮಾಡಿದ್ದಾರೆ. ಈ ವಿಚಾರವಾಗಿ ಹಿಂದೆ ಈ ಮಾನ್ಯ ಸಭೆಯಲ್ಲಿ ಅನೇಕ ಮಾನ್ಯ ಸ್ನೇಹಿತರು ಕಂಟ್ರಾಕ್ಟ್ ಕ್ಯಾರೇಜ್‌ಗಳಿಂದ, ಕೆ.ಎಸ್.ಆರ್.ಟಿ.ಸಿ.ಗೆ ಅಗತಕ್ಕ ಅನಾವುತವನ್ನು ಹೇಳಿದ್ದಾರೆ. ತುರ್ತುಪರಿಸ್ಥಿತಿ ಬಂದ ಮೇಲೂ ಕಂಟ್ರಾಕ್ಟ್ ಕ್ಯಾರೇಜ್‌ಗಳಿಂದ ಅಗತಕ್ಕ ಅನಾವುತಗಳನ್ನು ಸರ್ಕಾರದ ಗಮನಕ್ಕೆ ತಂದಿದ್ದೇವೆ. ಇವತ್ತು ರಾಷ್ಟ್ರೀಕರಣ ಮಾಡಿದ್ದಾರೆ ಬಹಳ ಸಂತೋಷ ನಾನು ಅದನ್ನು ಸ್ವಾಗತ ಮಾಡುತ್ತೇನೆ. ಮಾನ್ಯ ಮಂಜುನಾಥರವರು ಹೇಳಿದರು, ರಾಷ್ಟ್ರೀಕರಣ ಮಾಡಿದ್ದು ಒಳ್ಳೆಯದು ಆದರೆ ಅದರಲ್ಲಿ ಬಹಳ ಬಡವರು ಇದ್ದಾರೆ ಎಂದು. ಒಂದು ಲಕ್ಷ, ಎರಡು ಲಕ್ಷ ಬಂಡವಾಳ ಹಾಕಿ ಬಸ್ಸುಗಳನ್ನು ಕೊಂಡು, ಅದಕ್ಕೆ ಪರ್ಮಿಟ್ ಗಿಟ್ಟಿಸಿ ಬಸ್ಸುಗಳನ್ನು ನಡೆಸಬೇಕಾದರೆ ಅವರೆಂಥ ಬಡವರು ? ಇವರನ್ನು ಬಡವರು ಎಂದು ಕರೆದರೆ ನಮ್ಮಂತವರು; ಮಂಜುನಾಥನಂತವರು ಯಾವ ದೇಶಕ್ಕೆ ಹೋಗಬೇಕು. ಇದರ ಬಗ್ಗೆ ನಾನಂತೂ ಕನಿಕರ ವ್ಯಕ್ತಪಡಿಸುವುದಿಲ್ಲ. ಇವರು ಹೇಗೆ

8

ಬೆಳೆದರು, ಇವರನ್ನು ಬೆಳೆಸಿದವರು ಯಾರು? ಇವರಿಗೆ ಪರ್ಮಿಷನ್ ಕೊಟ್ಟವರು ಯಾರು? ಎಷ್ಟು ಪರ್ಮಿಷನ್ ಕೊಟ್ಟಿದ್ದಾರೆ? ಹಿಂದೆ ಕೊಟ್ಟಿದ್ದನ್ನು ಬಿಟ್ಟುಬಿಡಿ, ತುರ್ತುಪರಿಸ್ಥಿತಿ ಘೋಷಣೆಯಾದ ಮೇಲೆ ಕಳೆದ 6 ತಿಂಗಳು ಒಂದು ವರ್ಷದಿಂದ ಎಷ್ಟು ಪರ್ಮಿಷನ್ ಕೊಟ್ಟಿದ್ದೀರಿ? ಇವು 20 ಅಂಶಗಳ ಕಾರ್ಯಕ್ರಮದಲ್ಲಿ ಬರುತ್ತದೆಯೇ? ಅದನ್ನು ದಯವಿಟ್ಟು ಸ್ವಲ್ಪ ಹೇಳಿ. ಇವರನ್ನು ಬೆಳೆಸಿದವರು ಮಂತ್ರಿಮಂಡಲದಲ್ಲಿ ಇರಲಿ, ಸರ್ಕಾರದ ಉನ್ನತ ಅಧಿಕಾರದಲ್ಲಿ ಇರಲಿ ಅವರನ್ನು ಕಂಡುಹಿಡಿದು ಕಿತ್ತು ಹಾಕಿರಿ. ಮೊನ್ನೆ ತಾನೆ ಐ.ಎ.ಎಸ್. ಅಧಿಕಾರಿ ಒಬ್ಬರ ಮೇಲೆ ಕ್ರಮ ತೆಗೆದುಕೊಂಡು ಸುಮಾರು 24 ಲಕ್ಷ ರೂ.ಗಳ ಆಸ್ತಿ ಪತ್ತೆ ಮಾಡಿದ ವಿಚಾರ ಬಹಳ ಒಳ್ಳೆಯ ಕೆಲಸ. ಇದಕ್ಕೆ ನನ್ನ ಸಂಪೂರ್ಣ ಬೆಂಬಲ ಕೊಡುತ್ತೇನೆ. ಕಂಟ್ರ್ಯಾಕ್ಟ್ ಕ್ಯಾರೇಜಸ್ ಮಾತ್ರ ಅಲ್ಲ, ಸರ್ಕಾರಿ ಕ್ಷೇತ್ರದಲ್ಲಿರತಕ್ಕ ಸಾರ್ವಜನಿಕ ಸಂಸ್ಥೆಗಳನ್ನೂ, ಇತರ ಉದ್ಯಮಗಳನ್ನು ಹಾಗೂ ಕೈಗಾರಿಕೆಗಳನ್ನೂ ಮುಳಗಿಸುವಂತೆ ಪೈಪೋಟಿ ನಡೆಸಲಿಕ್ಕೆ ಪ್ರೋತ್ಸಾಹ ಕೊಡಬೇಡಿ ಇವರ ಪೈಪೋಟಿಯನ್ನು ಮೀರಿಸಿ, ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ತಮ್ಮ ಕಾಲಮೇಲೆ ನಿಲ್ಲುವ ಶಕ್ತಿಗಳಿಸುವಂತ ದಾರಿ ಬಿಟ್ಟು, ಅವುಗಳನ್ನು ಬೇರೆಯವರಿಗೆ ಮಾರಾಟ ಮಾಡುವಂತೆ ಯೋಜನೆಗಳನ್ನು ಕೇಂದ್ರದಲ್ಲಿ ಕೈಗೊಂಡಿದ್ದಾರೆ. ಅದು ತಪ್ಪು.

ನಮ್ಮ ದೇಶದ ಆರ್ಥಿಕಾಭಿವೃದ್ಧಿ ಉತ್ತಮಗೊಳ್ಳಬೇಕಾದರೆ ಸಾರ್ವಜನಿಕ ಕ್ಷೇತ್ರದಲ್ಲಿ ಕೈಗಾರಿಕೆಗಳು ಬೆಳೆದು ಮುತುವರ್ಜಿಯಿಂದ ಕೆಲಸ ಮಾಡಬೇಕು ಎಂದು ಪಂಡಿತ ಜವಹರ್‌ಲಾಲ್ ನೆಹರೂರವರು ಘೋಷಣೆ ಮಾಡಿದ್ದರು. ಅದರಂತೆ ಅವರು ಕಾರ್ಯಗತ ಗೊಳಿಸಿದ್ದಾರೆ. ಈಗ ಪಂಡಿತ ಜವಹಾರ್‌ಲಾಲ್ ನೆಹರೂರವರ ಕಾಲಕಳೆದ ಮೇಲೆ ಸಾರ್ವಜನಿಕ ಕ್ಷೇತ್ರ ಬೆಳೆಸಿದ ಕಾರ್ಮಿಕರಿಗೆ ಬೋನಸ್ ಕೊಡುವುದನ್ನು ನಿರಾಕರಿಸುತ್ತಿದ್ದೀರಿ. ತಾವು ಇಡೀ ರಾಜ್ಯಪಾಲರ ಭಾಷಣವನ್ನು ಪೂರ್ತಿಯಾಗಿ ನೋಡಿದರೆ ಗೊತ್ತಾಗುತ್ತದೆ. ನಮ್ಮ ದೇಶದಲ್ಲಿ ಉತ್ಪಾದನೆ ಜಾಸ್ತಿಯಾಗಿರುವುದಕ್ಕೆ ಕಾರಣ ಸಾರ್ವಜನಿಕ ಕ್ಷೇತ್ರದಲ್ಲಿ ಇರತಕ್ಕಂಥ ಕೈಗಾರಿಕೆಗಳು ಬೃಹತ್ ಪ್ರಮಾಣದಲ್ಲಿ ಬೆಳೆದು ದೇಶದ ಆರ್ಥಿಕಾಭಿವೃದ್ಧಿಯನ್ನು ಸಾಧಿಸಿದ್ದು. ಹೀಗಿರುವಲ್ಲಿ ತಾವು ಆ ಕಾರ್ಮಿಕರ ಬಗ್ಗೆ ಒಂದು ಮಾತೂ ಕೂಡ ರಾಜ್ಯಪಾಲರು ಹೇಳಿಲ್ಲ. ರಾಜ್ಯಪಾಲರು ಹೇಳಿಲ್ಲ ಅಂದರೆ ತಮ್ಮ ಸರ್ಕಾರ ಅವರ ಬಗ್ಗೆ ಒಂದು ಸೌಜನ್ಯವಾದ ಮಾತನ್ನು ಕೂಡ ಹೇಳಿಸಲಿಲ್ಲ ಅಂತ ನಾನು ವಿಷಾದದಿಂದ ಹೇಳಬೇಕಾಗಿದೆ. ಮಾನ್ಯ ರಾಜ್ಯಪಾಲರ ಭಾಷಣದಲ್ಲಿ ಈರೀತಿ ಇದೆ:—

> ''ಹೆಚ್ಚು ಉತ್ಪಾದನೆಯನ್ನು ಮತ್ತು ನ್ಯಾಯವಾದ ವಿತರಣೆಯನ್ನು ಸುನಿಶ್ಚಿತಗೊಳಿಸುವ ನಿಟ್ಟಿನಲ್ಲಿ ಜನತೆಯ ಶಕ್ತಿ ಸಾಮರ್ಥ್ಯಗಳು ಈಗ ಕೇಂದ್ರೀಕೃತವಾಗಿದೆ ಮತ್ತು ಆತ್ಮನಾಶಕ, ನಿರರ್ಥಕ ಚಟುವಟಿಕೆಗಳಲ್ಲಿ ವ್ಯಯವಾಗುತ್ತಿಲ್ಲ'' ಎಂದು.

ಈ ಬಗ್ಗೆ ಹೇಳುವುದಾದರೆ ಜನತೆಯ ಶಕ್ತಿ ಸಾಮರ್ಥ್ಯಗಳಿಂದ ಉತ್ಪಾದನೆಯನ್ನು ಹೆಚ್ಚಿಸಿಕೊಳ್ಳುವುದರಲ್ಲಿ ಮತ್ತು ವಿತರಣೆ ಸರಿಯಾದ ರೀತಿಯಲ್ಲಿ ಆಗುವಂತೆ ಪ್ರಯತ್ನ ಮಾಡುವುದರಲ್ಲಿ ನಮ್ಮ ದೇಹಶಕ್ತಿಯನ್ನು ಉಪಯೋಗಿಸಿಕೊಳ್ಳಬೇಕು. ಮೊದಲು ಯಾರು ಕೈಗಾರಿಕೆಗಳನ್ನು ಇಟ್ಟುಕೊಂಡಿದ್ದರು ಮತ್ತು ಭೂಮಿಯನ್ನು ಯಾರು ಸಂಪಾದನೆ ಮಾಡಿದ್ದರು ಹಾಗೂ ತಮ್ಮ ಮುಷ್ಟಿಯಲ್ಲಿ ಇಟ್ಟುಕೊಂಡಿದ್ದರು. ಅವರು ಉತ್ಪಾದನಾ ಶಕ್ತಿಯನ್ನು ಮೊಟಕು ಮಾಡುತ್ತಿದ್ದಾರೆ. ಅಷ್ಟೇ ಅಲ್ಲ ಕಾರ್ಮಿಕರಿಗೆ ಬರಬೇಕಾದ ಪಾಲನ್ನೂ ಕೂಡ ಕಬಳಿಸಿ ಕೊನೆಗೆ ಸರ್ಕಾರವನ್ನೂ ಕೂಡ ಬುಡಮೇಲೆ ಮಾಡತಕ್ಕಂಥಾ, ಪ್ರಜಾಪ್ರಭುತ್ವವನ್ನು ನಾಶ ಮಾಡತಕ್ಕಂಥಾ ಪ್ರಯತ್ನ ಮಾಡುತ್ತಾರೆ. ಈ ಪರಮಸತ್ಯವನ್ನು ಮರೆಮಾಚಿ ಜನತೆಯನ್ನೂ ದೂರಬಾರದು ಆದರೆ ಈಗ್ರೂತ್ತು ಏನಾಗಿದೆ ಎಂದರೆ ಕಾರ್ಮಿಕ ವರ್ಗ ಮತ್ತು ರೈತರು ಸೇರಿ ದೇಶದ ಉತ್ಪಾದನೆ ಜಾಸ್ತಿ ಮಾಡಿದ್ದಾರೆ. ಹೋದವರ್ಷ ರಾಜ್ಯಪಾಲರ ಭಾಷಣದಲ್ಲಿ ಒಂದು ಮಾತ್ತು ಹೇಳಿದ್ದೀರಿ, ನಮ್ಮ ಕೈಗಾರಿಕಾ ರಂಗದಲ್ಲಿ ಈ ವರ್ಷ ಮುಷ್ಕರಗಳು ಬಹಳಷ್ಟು ಕಡಿಮೆಯಾಗಿದೆ ಎಂದು. ಆರೀತಿ ಹೇಳಿದ್ದು ಬಹಳ ಸಂತೋಷ. ಕಾರ್ಮಿಕರು ತಮ್ಮ ಜವಾಬ್ದಾರಿಯನ್ನು ತಿಳಿದುಕೊಂಡು ಕೆಲಸ ಮಾಡುತ್ತಾರೆ, ಅವರು ಅನಿವಾರ್ಯವಾದರೆ ಮಾತ್ರ ಮುಷ್ಕರ ಹೂಡುತ್ತಾರೆ. ಆದರೆ ಈ ಸಲದ ರಾಜ್ಯಪಾಲರ ಭಾಷಣದಲ್ಲಿ ಕಾರ್ಮಿಕರ ಬಗ್ಗೆ ಒಂದು ಸೌಜನ್ಯದ ಮಾತನ್ನೂ ಹೇಳಲಿಲ್ಲ ಎಂದು ಈ ಸಂದರ್ಭದಲ್ಲಿ ನಾನು ಹೇಳಬೇಕಾಗಿದೆ. ತಮ್ಮಲ್ಲಿ ಒಂದು

ಪ್ರಾರ್ಥನೆ ಏನೆಂದರೆ ಯಾರು ನಮ್ಮ ದೇಶದ ಉತ್ಪಾದನೆಗೆ ಸಂಪತ್ ಸಂಪಾದನೆಗೆ ಪ್ರಯತ್ನಪಡುತ್ತಾರೆ ಅದಕ್ಕೋಸ್ಕರ ಯಾರು ದುಡಿಯುತ್ತಾರೆ ಅವರ ಬಗ್ಗೆ ಕೊಡತಕ್ಕಂಥಾ ಬೋನಸ್‌ನ್ನು ಕಿತ್ತುಕೊಳ್ಳುವ ಕಾರ್ಯಕ್ರಮ ಮಾಡಬೇಡಿ ; ಎಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಎಷ್ಟೋ ಕೈಗಾರಿಕೆಗಳಲ್ಲಿ ಕನಿಷ್ಠ ವೇತನ ಇಲ್ಲ. ಅದನ್ನು ಕಿತ್ತುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ನಿಮಗೆ ಒಂದು ಉದಾಹರಣೆ ಹೇಳುವುದಾದರೆ. ಕೃಷಿ ಕಾರ್ಮಿಕರಿಗೆ ವ್ಯವಸಾಯ ಕೂಲಿಗಾರರಿಗೆ ಕನಿಷ್ಠ ವೇತನ ಶೇಕಡ 30 ರಷ್ಟನ್ನು ಹೆಚ್ಚು ಮಾಡಿದ್ದೇವೆಂದು ಹೇಳಿ ಕೊಳ್ಳುತ್ತಿದ್ದೀರಿ. ತಾವು ನಿಗದಿ ಮಾಡಿರುವ ಕನಿಷ್ಠ ವೇತನಕ್ಕೆ ಯಾವ ಕಾರ್ಮಿಕ ಯಾವ ಜಿಲ್ಲೆಯಲ್ಲಿ ದುಡಿಯುತ್ತಿದ್ದಾನೋ ಗೊತ್ತಿಲ್ಲ. ಯಾವನಿಗೆ ಈ ಕನಿಷ್ಠ ವೇತನ ಲಭಿಸುತ್ತಾ ಇದೆಯೋ ಗೊತ್ತಿಲ್ಲ. ನಮ್ಮ ಜಿಲ್ಲೆ ಮಟ್ಟಿಗೆ ಹೇಳುವುದಾದರೆ ತಾವು ನಿಗದಿ ಮಾಡಿರುವ ಪ್ರಕಾರ ಆತನಿಗೆ ಧಾನ್ಯದ ರೂಪದಲ್ಲಾಗಲಿ, ಹಣದ ರೂಪದಲ್ಲಾಗಲಿ ಇದು ಲಭಿಸುತ್ತಾ ಇದೆಯೇ ? ಹಾಗಿದ್ದರೂ ಕೂಡ ಅವರು ಬಡತನದಲ್ಲಿದ್ದಾರೆ. ನಾನು ತಿಳಿದುಕೊಂಡಿರುವ ಪ್ರಕಾರ ಈ ಕನಿಷ್ಠ ವೇತನದ ಬಗ್ಗೆ ತಾವು ಏನು ತೀರ್ಮಾನ ತೆಗೆದುಕೊಂಡಿದ್ದೀರಿ ಅದು ನಮ್ಮ ರಾಜ್ಯದಲ್ಲಿ ಯಾವುದೇ ಪರಿಣಾಮಕಾರಿ ಆಗದಂತೆ ನಿರರ್ಥಕವಾಗಿ ನಿಗದಿ ಮಾಡಿದ್ದು ಎಂದು ಹೇಳಬೇಕಾಗಿದೆ. ಈ ಬಗ್ಗೆ ಇನ್ನೊಂದು ಮಾತು ಹೇಳಬೇಕಾಗಿದೆ. ಈ ಕನಿಷ್ಠ ವೇತನವನ್ನು ಎಲ್ಲಾ ಗ್ರಾಮದಲ್ಲೂ ರೆವಿನ್ಯೂ ಇನ್‌ಸ್ಪೆಕ್ಟರ್ ಮೂಲಕ ಜಾರಿಗೆ ತರುತ್ತೇವೆ ಎಂದು ಹೇಳಿದ್ದೀರಿ. ಇದು ನನಗಂತೂ ಭಯವಾಗುತ್ತದೆ. ಏತಕ್ಕೆಂದರೆ ರೆವಿನ್ಯೂ ಇನ್‌ಸ್ಪೆಕ್ಟರ್ ಯಾವರೀತಿಯಾಗಿ ಪಹಣಿ ಪತ್ರಗಳನ್ನು ಪರಿಶೀಲಿಸುತ್ತಾರೆ, ಯಾವರೀತಿಯಾಗಿ ಆರ್. ಟಿ. ಸಿ. ಬರೆಯುತ್ತಾರೆ, ಯಾವರೀತಿಯಾಗಿ ಹೊಲಗಳಲ್ಲಿ ಬರತಕ್ಕಂಥ ಸಮಸ್ಯೆಗಳಲ್ಲಿ ಅವರು ವ್ಯವಹಾರಿಸುತ್ತಾರೆ ಎನ್ನುವುದು ನಮಗೆ ಗೊತ್ತು. ಆ ರೆವಿನ್ಯೂ ಇನ್‌ಸ್ಪೆಕ್ಟರಿಗೆ ಈ ಒಂದು ಕನಿಷ್ಠ ವೇತನದ ಅಧಿಕಾರವನ್ನು ನೇಮಿಸಿದರೆ ನಮಗೆ ಅವರಿಂದ ಯಾವ ರೀತಿಯಾಗಿಯೂ ಉಪಯೋಗಕ್ಕೆ ಬರುವುದಿಲ್ಲ. ಅದಕ್ಕೆ ಸಂಬಂಧಪಟ್ಟ ಇಲಾಖೆಯವರು ಅಂದರೆ ಕಾರ್ಮಿಕ ಇಲಾಖೆಯವರಿಗೆ ಈ ಅಧಿಕಾರ ಕೊಟ್ಟರೆ ತಮ್ಮದೇ ಆದಂಥ ಸಿಬ್ಬಂದಿಯನ್ನು ಇಟ್ಟು ಒಂದೊಂದು ತಾಲ್ಲೂಕಿಗೆ 2—3 ಮಂದಿಯನ್ನು ಇಟ್ಟು ಆ ಕೆಲಸಗಳನ್ನು ನಿರ್ವಹಿಸುತ್ತಾರೆ. ಆದುದರಿಂದ ಆ ಕೆಲಸಗಳನ್ನು ಕಾರ್ಮಿಕ ಇಲಾಖೆಗೇನೇ ಕೊಡುವ ವ್ಯವಸ್ಥೆ ಮಾಡಬೇಕೆಂದು ನಾನು ಹೇಳುತ್ತೇನೆ. ಈಗಾಗಲೇ ನೆರೆ ರಾಜ್ಯದಲ್ಲಿ ಅಂದರೆ ಕೇರಳದಲ್ಲಿ ಕೃಷಿ ಕಾರ್ಮಿಕರಿಗೆ ರೈತರಿಗೆ ಇದಕ್ಕಿಂತ ಹೆಚ್ಚಿನ ವೇತನ ನಿಗದಿ ಮಾಡಿದ್ದಾರೆ. ಮತ್ತು ಅಲ್ಲಿ ಅನೇಕ ಸವಲತ್ತುಗಳನ್ನು ಕೊಟ್ಟಿದ್ದಾರೆ. ಅಲ್ಲದೆ ಅವರನ್ನು ಸರಿಯಾಗಿ ನೋಡಿಕೊಳ್ಳುವುದಕ್ಕೆ ಬೇರೇ ಇಲಾಖೆಯೇ ಇದೆ. ನಾನು ಅದನ್ನು ಕಾಪಿ ಮಾಡಿ ಎಂದು ಹೇಳುವುದಿಲ್ಲ. ಈ ಬಗ್ಗೆ ತಾವೇ ಯೋಚನೆ ಮಾಡಿ. ಈ ಬಗ್ಗೆ ನನ್ನ ಸಲಹೆಯಾದರೂ ಇಷ್ಟೆ ನಮ್ಮ ರಾಜ್ಯದಲ್ಲಿ ಈ ಕನಿಷ್ಠ ವೇತನವನ್ನು ನಿಗದಿ ಮಾಡುವ ಅಧಿಕಾರವನ್ನು ಕಾರ್ಮಿಕ ಇಲಾಖೆಗೆ ವಹಿಸಿಕೊಡಬೇಕೆಂದ ನಾನು ಇಷ್ಟ ಪಡುತ್ತೇನೆ.

ಇನ್ನು ಈ ರಾಜ್ಯಪಾಲರ ಭಾಷಣದ ಬಗ್ಗೆ 2-3 ವಿಚಾರಗಳನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದರಲ್ಲಿ ಹಳ್ಳಿಯ ರೈತರ ಬಗ್ಗೆ ಕಾರ್ಮಿಕರ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ಅಲ್ಲಲ್ಲಿ ಜನತಾ ಗೃಹ ನಿರ್ಮಾಣ ಯೋಜನೆಯ ಕಾರ್ಯಕ್ರಮವನ್ನು ಕೈಕೊಂಡಿದೆ ಎಂದು ಹೇಳಿದ್ದೀರಿ. ಕರ್ನಾಟಕ ರಾಜ್ಯದಲ್ಲಿ 7.1 ಲಕ್ಷ ಕುಟುಂಬಗಳಿಗೆ ಕಟ್ಟಡ ನಿವೇಶನಗಳಿಲ್ಲವೆಂದು ಕಂಡುಬಂದಿದೆ. ಇವರಲ್ಲಿ 5.1 ಲಕ್ಷ ಕುಟುಂಬಳಿಗ ಪ್ರಸ್ತುತ ವರ್ಷದಲ್ಲಿ ನಿವೇಶನಗಳನ್ನು ಕೊಡಲಾಗಿದೆ ಮತ್ತು ಇನ್ನುಳಿದ 2 ಲಕ್ಷ ಕುಟುಂಬಗಳಿಗೆ ಮುಂದಿನ ವರ್ಷ ಇದೇ ರೀತಿ ಪ್ರಯೋಜನ ದೊರೆಯುವುದು ಎನ್ನುವ ಮಾತನ್ನು ಹೇಳಿದ್ದೀರಿ. ಈ ಬಗ್ಗೆ ನಾನು ಹೇಳುವುದು ಒಂದು ವರ್ಷಕ್ಕೆ ಸರಾಸರಿ 10 ಸಾವಿರ ಮನೆಗಳನ್ನು ಕಟ್ಟುತ್ತೇವೆಂದು ಹೇಳಿದರೂ ಕೂಡ ಎಲ್ಲರಿಗೂ ದೊರಕುತ್ತದೆ ಎಂದು ಹೇಳುವುದಕ್ಕಾಗುವುದಿಲ್ಲ. ಆದುದರಿಂದ ಇದನ್ನು ಇನ್ನೂ ಜಾಸ್ತಿ ಮಾಡಬೇಕು ಎಂದು ಹೇಳುತ್ತೇನೆ. ಈ ಕೆಲಸವನ್ನು ತಾವು ತೀವ್ರಗತಿಯಲ್ಲಿ ಮಾಡೋಣ. ಈವೊತ್ತು ಕೃಷಿ ಕಾರ್ಮಿಕನಿಗೆ ಇದಕ್ಕಿಂತಲ್ಲೂ ಇನ್ನೊಂದು ಮುಖ್ಯವಾದ ಸಮಸ್ಯೆ ಬಂದಿದೆ. ಈವೊತ್ತು ಅವರು ಬೀದಿ ಬೀದಿಯಲ್ಲಾಗಲಿ, ಅಥವಾ ಮರದ ಕೆಳಗಾಗಲಿ ಮಲಗಿ ಜೀವನ ಮಾಡುತ್ತಾ ಇಲ್ಲ. ಅವರು ಗುಡಿಸಲುಗಳಲ್ಲಿ ಬೇರೆ ಯಾವ ಭೂಮಿಯಲ್ಲಿ ಸಣ್ಣ ಮನೆ ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ. ಗುಡಿಸಲು ಎನ್ನುವುದಕ್ಕೆ ಬೇಕಾದರೆ ಏನೊಂದು ಡೆಫನೆಷನ್ ಮಾಡಬೇಕೋ ಅದನ್ನು ಮಾಡೋಣ. ಈವೊತ್ತು ಇಡೀ ರಾಜ್ಯಾದ್ಯಂತ ಬಡ ಕೃಷಿ ಕಾರ್ಮಿಕರು ಗುಡಿಸಿಲಿನಲ್ಲಿ ವಾಸ

ಮಾಡುತ್ತಿದ್ದಾರೆ. ಅವರಿಗೆ ನೀವು ನಿವೇಶನ ಕೊಡುವಾಗ ಮನೆ ಕಟ್ಟಿಸಿಕೊಡುವಾಗ ಅವರಿಗೆ ಬೇರೆ ವ್ಯವಸ್ಥೆ ಮಾಡಿಕೊಡುವುದಾಗಿ ಹೇಳಿದರೆ ಆಗದು ಅವರಿಗೆ ಬೇರೆ ವ್ಯವಸ್ಥೆ ಮಾಡುವುದು ನೀವೇ ಒಂದು ದೊಡ್ಡ ಹೊರೆ ಆದುದರಿಂದ ನಾನು ಹೇಳುವುದು ಆ ಗುಡಿಸಿಲಿನಲ್ಲಿ ಯಾರು ವಾಸವಾಗಿರುತ್ತಾರೋ ಅದನ್ನೇ ಅವರಿಗೆ ಕೊಡಿಸಿಕೊಡಿ. ನೀವು ಅವರಿಗೆ ಬೇರೆ ವ್ಯವಸ್ಥೆ ಮಾಡುವ ತನಕ ಅಲ್ಲಿಯವರೆಗೆ ಅವರು ಅಲೆಮಾರಿಗಳಾಗಬಾರದು. ಭೂಸುದಾರಣಾ ಶಾಸನ ರಾಜ್ಯದಲ್ಲಿ ಜಾರಿಗೆ ಬಂದಾಗಲೇ ಈ ವಿಚಾರದಲ್ಲಿ ಸಲಹೆ ಬಂಧಿದೆ. ಈವೊತ್ತೂ ಸಹ ಕೃಷಿ ಕಾರ್ಮಿಕರ ಕಡೆ ತಮ್ಮ ಗಮನ ಹರಿಸಿದೆ ಎಂದು ಹೇಳಿದುದನ್ನು ಕೇಳಿದೆ. ಅದನ್ನು ನಾನು ಸ್ವಾಗತ ಮಾಡುತ್ತೇನೆ. ಯಾವ ಕೃಷಿ ಕಾರ್ಮಿಕನು ಎಲ್ಲೆಲ್ಲಿ ಗುಡಿಸಲಿನಲ್ಲಿ ವಾಸವಾಗಿರುತ್ತಾನೋ ಅವನನು ಅಲ್ಲಿಂದ ಹೊರಗೆ ಹಾಕದೆ ಇದ್ದ ಹಾಗೆ ಒಂದು ಭದ್ರತೆ ಕೊಟ್ಟು ಯಾವ ರೀತಿಯಾಗಿ ಗೇಣಿದಾರನಿಗೆ ಜಮೀನು ಆಗುತ್ತದೋ ಅದೇ ರೀತಿಯಾಗಿ ಮನೆಯೂ ಸುತ್ತಮುತ್ತ ಸ್ವಲ್ಪ ಜಾಗವನ್ನು ಕೂಡ ಅವನಿಗೆ ಕೊಡಿಸಿ ಅವನಿಗೆ ಅನುಕೂಲವಾಗುವ ಹಾಗೆ, ಅವನು ಅಲ್ಲೇ ಇರುವ ಹಾಗೆ ಮಾಡಿಕೊಡಿ. ಆ ನಿವೇಶನದ ಹಕ್ಕನ್ನು ಅವನಿಗೇನೇ ಸಿಕ್ಕುವ ಹಾಗೆ ಮಾಡಿಕೊಡಿ.

4-30 P. M.

ಆ ಜನರಿಗೆ ಮನೆ ಮಾಲೀಕತನದ ಹಕ್ಕನ್ನು ಕೊಡುವ ಬಗ್ಗೆ ಭೂಸುಧಾರಣೆಯಲ್ಲಿ ಸೂಕ್ತ ತಿದ್ದುಪಡಿ ಮಾಡಬೇಕು. ಇಲ್ಲವೇ ಕಾರ್ಮಿಕ ಇಲಾಖೆಯವರಾದರು ಸಹ ಇವರಿಗೆ ಅನುಕೂಲ ಮಾಡಿಕೊಡಲು ಪ್ರತ್ಯೇಕವಾದ ಒಂದು ಕಾನೂನನ್ನು ಜಾರಿಗೆ ತರಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ನಮ್ಮ ರಾಜ್ಯದ ಅನೇಕ ಕಡೆಗಳಲ್ಲಿ ಚಿಕ್ಕ ಚಿಕ್ಕ ಮುನಿಸಿಪಾಲಿಟಿಗಳಿವೆ. ಆ ಮುನಿಸಿಪಾಲಿಟಿಗಳ ಒಳಗಡೆಯೂ ಸಹ ಕೆಲವು ಬಡ ಕಾರ್ಮಿಕರು ವಾಸ ಮಾಡುತ್ತಿದ್ದಾರೆ. ಆ ರೀತಿ ವಾಸ ಮಾಡುತ್ತಿರುವವರ ಪೈಕಿ ಅನೇಕರಿಗೆ ಸ್ವಂತ ನಿವೇಶನ ಇಲ್ಲ; ಬಾಡಿಗೆ ಕೊಡಲು ಅವರಿಗೆ ಶಕ್ತಿ ಇಲ್ಲವಾದ ಕಾರಣ ಅವರಿಗೂ ಸಹ ಸ್ವಂತ ಮನೆ ಕಟ್ಟಿಸಿಕೊಳ್ಳಲು ನಿವೇಶನ ಕೊಟ್ಟು ಆರ್ಥಿಕ ಸಹಾಯ ಮಾಡಬೇಕು. ಇಂದು ಬಾಡಿಗೆಗೆ ಮನೆಗಳು ಸಿಗುವುದೇ ಕಷ್ಟವಾಗಿದೆ; ಸಿಕ್ಕಿದರೂ ಸಹ ಮನೆಮಾಲಿಕರು ಬಾಡಿಗೆ ವಿಪರೀತ ಜಾಸ್ತಿ ಕೇಳುತ್ತಾರೆ; ಆದ ಕಾರಣ ಬಡವರಿಗೆ ಉಚಿತ ನಿವೇಶನ ಕೊಡುವುದರ ಜೊತೆಗೆ ಅವರು ಸ್ವಂತವಾಗಿ ಮನೆ ಕಟ್ಟಿಸಿಕೊಳ್ಳಲು ಹೌಸಿಂಗ್ ಕೋಆಪರೇಟಿವ್ ಫೆಡರೇಷನ್ ಮೂಲಕ ಸಾಲವಾಗಿ ಹಣವನ್ನು ಕೊಡಿಸುವ ವ್ಯವಸೆ ಮಾಡಬೇಕು. ನಮ್ಮ ಜಿಲ್ಲೆಯ ಒಂದು ಅನುಭವವನ್ನೇ ಹೇಳಬೇಕೆಂದರೆ, ನಮ್ಮ ಭಾಗದಲ್ಲಿ ಲಕ್ಷಾಂತರ ಮಂದಿ ಬೀಡಿ ಕಾರ್ಮಿಕರಿದ್ದಾರೆ. ಅವರಿಗೆ ಕನಿಷ್ಠ ವೇತನವನ್ನು ನಿಗದಿ ಮಾಡಿದ್ದೀರಿ; ಜೊತೆಗೆ ಅವರಿಗೆ ಬೋನಸ್ ಮತ್ತು ಹೆರಿಗೆ ಭತ್ಯ ಸಿಗುವ ವ್ಯವಸ್ಥೆಯನ್ನು ಸಹ ಮಾಡಿದ್ದೀರಿ; ಇಂತಹ ಲೋ-ಇನ್‌ಕಮ್ ಮತ್ತು ಮಿಡಲ್ ಇನ್‌ಕಮ್ ಗ್ರೂಪಿನ ಜನರಿಗೆ ಮನೆಗಳನ್ನು ಕಟ್ಟಿಸಿಕೊಳ್ಳಲು ಸಹಾಯ ಮಾಡಬೇಕು. ಅವರು 500 ಅಥವಾ ಒಂದು ಸಾವಿರ ರೂಪಾಯಿಗಳನ್ನು ಸಹಕಾರೀ ಸಂಘದಲ್ಲಿ ಡಿಪಾಜಿಟ್ ಮಾಡಿದರೆ, ಮನೆ ಕಟ್ಟಿಸಿಕೊಳ್ಳಲು ಸಾಲದ ರೂಪದಲ್ಲಿ ಆರ್ಥಿಕ ಸಹಾಯವನ್ನು ಒದಗಿಸಿಕೊಡಬೇಕು. ಇದರಿಂದ ಅವರು ಸ್ವಂತ ಮನೆ ಹೊಂದಲು ಅವಕಾಶ ವಾಗುತ್ತದೆ. ಹೌಸಿಂಗ್ ಕೋಆಪರೇಟಿವ್ ಫೆಡರೇಷನ್‌ನಲ್ಲಿ ಹಣವಿಲ್ಲದೆ ಅದರ ಕೆಲಸಗಳು ಸ್ಥಗಿತ ಗೊಂಡಿದೆ ಎಂದು ನಾನು ಕೇಳಿದ್ದೇನೆ. ತುರ್ತುಪರಿಸ್ಥಿತಿಯಿರುವಾಗ ಯಾವುದೇ ಕೆಲಸ ಸ್ಥಗಿತವಾಗಬಾರದೆಂದು ಸರ್ಕಾರದವರು ಹೇಳುತ್ತಿರುವಾಗ, ಈ ಹೌಸಿಂಗ್ ಕೋಆಪರೇಟಿವ್ ಫೆಡರೇಷನ್‌ಗೆ ಹಣವನ್ನು ಕೊಡುವುದರ ಮೂಲಕ ಸರ್ಕಾರದವರು ಅದಕ್ಕೆ ಜೀವದಾನ, ರಕ್ತದಾನ ಕೊಡುವುದರ ಮೂಲಕ ಬಡವರ ಮನೆ ಕಟ್ಟಿಸಿಕೊಳ್ಳಲು ಅದರಿಂದ ಸಹಾಯವಾಗುವಂತೆ ಮಾಡಬೇಕೆಂದು ಈ ಸಮಯದಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ಸರ್ಕಾರದವರು ಜೀತ ಪದ್ಧತಿಯನ್ನು ರದ್ದು ಮಾಡಿದ್ದಾರೆ. ಅದಕ್ಕಾಗಿ ಸರ್ಕಾರದವರನ್ನು ನಾನು ತುಂಬಾ ಶ್ಲಾಘನೆ ಮಾಡುತ್ತೇನೆ. ಹಳ್ಳಿಗಳಲ್ಲಿರುವಂತಹ ಜೀತ ಪದ್ಧತಿಯನ್ನು ರದ್ದು ಮಾಡುವುದರ ಜೊತೆಯಲ್ಲೇ ಸರ್ಕಾರದ ಮೂಗಿನ ಕೆಳಗೆ ಇರುವಂತಹ ಜೀತ ಪದ್ಧತಿಯನ್ನು ತೊಡೆದು ಹಾಕುವುದಕ್ಕೆ ಗಮನ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಚೆನ್ನಬಸಪ್ಪನವರು ಇಲ್ಲಿಯೇ ಇದ್ದಾರೆ. ಅವರಲ್ಲಿ ನಾನು ಕಳಕಳಿಯಿಂದ ಮನವಿ ಮಾಡಿಕೊಳ್ಳುವುದೇನೆಂದರೆ,

ದೊಡ್ಡದೊಡ್ಡ ಕಂಟ್ರಾಕ್ಟದಾರರು ತಾವು ವಹಿಸಿಕೊಂಡ ಕೆಲಸವನ್ನು ಮಾಡಿಸಲು ಕೆಲವು ಜನರನ್ನು ಕರೆದುಕೊಂಡು ಬರುತ್ತಾರೆ. ಮಳೆಗಾಲದಲ್ಲಿ ಅವರು ಜೀವನ ಮಾಡಲು ಸ್ವಲ್ಪ ಹಣದ ಸಾಲವನ್ನು ಇವರು ಕೊಟ್ಟಿರುತ್ತಾರೆ. ನಂತರ ಅವರನ್ನು ಕೆಲಸ ಮಾಡಲು ಕರೆದುಕೊಂಡು ಬರುತ್ತಾರೆ. ಮಂಗಳೂರಿನ ದೊಡ್ಡ ಬಂದರು ಮತ್ತು ಇತರೇ ಕಡೆಗಳಲ್ಲಿ ಕೆಲಸ ಮಾಡಿಸಲು ಕಂಟ್ರಾಕ್ಟದಾರರು ಈ ಜನರನ್ನು ಕರೆದುಕೊಂಡು ಬರುತ್ತಾರೆ. ಅವರಿಗೆ ಎಷ್ಟು ಸಂಬಳ ಕೊಡುತ್ತಾರೆ, ಅವರಿಗೆ ಏನೇನು ಸೌಲಭ್ಯಗಳನ್ನು ಕೊಡುತ್ತಿದ್ದಾರೆಂಬುದು ಯಾರಿಗೂ ತಿಳಿಯುವುದಿಲ್ಲ ; ಅವರನ್ನು ಕಂಟ್ರಾಕ್ಟದಾರರು ಜೀತದಾಳುಗಳಿಗಿಂತ ಕೀಳಾಗಿ ಕಾಣುತ್ತಾರೆ. ಇದರಿಂದ ಅವರು ಬಹಳ ಕಷ್ಟದಲ್ಲಿ ಜೀವನ ಮಾಡುತ್ತಿದ್ದಾರೆ. ಇಂತಹ ಜನರಿಗೆ ಸರ್ಕಾರದವರು ರಕ್ಷಣೆ ಕೊಡಬೇಕು. ಕಂಟ್ರಾಕ್ಟದಾರರು ಈ ಜನರ ಜೀವವನ್ನು ಹಿಂಡುತ್ತಿದ್ದಾರೆ. ಈಗ ತುರ್ತು ಪರಿಸ್ಥಿತಿ ಜಾರಿಯಲ್ಲಿರುವ ಕಾರಣ, ಈ ಜನರ ಪರಿಸ್ಥಿತಿಯನ್ನು ಉತ್ತಮಪಡಿಸುವ ಬಗ್ಗೆ ಸರ್ಕಾರ ಸೂಕ್ತ ಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ.

SHRI H. M. CHANNABASAPPA:- I want to know in specific terms what are all the manners or ways by which that kind of exploitation is taking place-is it in respect of wages or in respect of compulsion or force?

ಶ್ರೀ ಬಿ. ವಿ. ಕಕ್ಕಿಲ್ಲಾಯ : ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಮುಖ್ಯವಾಗಿ ಅವರು ಒಳ್ಳೆಯ ಜೀವನ ಮಾಡುವಂತೆ ಏರ್ಪಾಡು ಮಾಡಬೇಕು. ಈಗ 20 ಅಂಶಗಳ ಕಾರ್ಯ ಕ್ರಮವನ್ನು ಏನ್ನು ಘೋಷಣೆ ಮಾಡಲಾಗಿದೆ, ಅದನ್ನು ಜಾರಿಗೆ ಕೊಡುವಾಗ ಕಾನೂನು ಏನಾದರು ಅಡ್ಡ ಬಂದರೆ ಅದನ್ನು ಬದಲಾವಣೆ ಮಾಡಬೇಕು, ನಮ್ಮ ಘಟನೆ ಅಡ್ಡ ಬಂದರೆ ಅದನ್ನು ಬದಲಾವಣೆ ಮಾಡಬೇಕು, ಯಾವುದೇ ಪಕ್ಷದವರಾಗಲೀ, ಇದರ ವಿರುದ್ಧವಾಗಿ ವರ್ತನೆ ಮಾಡಿದರೆ ಅಂತಹವರ ಬಗ್ಗೆ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತಗೆದುಕೊಳ್ಳಬೇಕು. ಹೆಚ್ಚು ಜನರು ತಮ್ಮ ಹಿಂದೆ ಇದ್ದಾರೆ. ಆದಕಾರಣ ಈ 20 ಅಂಶಗಳ ಕಾರ್ಯಕ್ರಮವನ್ನು ಜಾರಿಗೆ ತರಲು ಸೂಕ್ತ ಕ್ರಮ ಕೈಕೊಳ್ಳಬೇಕು. ದೆಹಲಿಯಲ್ಲಿ ಈ 20 ಅಂಶಗಳ ಕಾರ್ಯಕ್ರಮದ ಬಗ್ಗೆ ಒಂದು ಎಗ್ಸಿಬಿಷನ್ ನಡೆಯುತ್ತಿದೆ. ಅಲ್ಲಿ ನಮ್ಮ ರಾಜ್ಯದ ಜಿಲ್ಲೆಗೆ ಒಬ್ಬರಂತೆ ಮಂತ್ರಿಗಳೊಬ್ಬರ ಚಿತ್ರವೂ ಸಹ ಇದೆ. ಅಲ್ಲಿ ಜಿಗಿಜಿಗಿ ಬೆಳಗುವಂತಹ ವಿದ್ಯುತ್ ದೀಪಗಳನ್ನು ಹಾಕಿದ್ದಾರೆ. ನಾನು ಹೇಳುವುದೇನೆಂದರೆ ಜನರಿಗೆ ಇಂತಹ ಪ್ರದರ್ಶನವಾಗಲೀ, ಭಾಷಣಗಳಾಗಲೀ ಬೇಕಾಗಿಲ್ಲ, ಜನರಿಗೆ ಬೇಕಾಗಿರುವುದು ಅದರ ಒಂದು ಪ್ರತಿಫಲ, ನಮ್ಮ ರಾಜ್ಯದಲ್ಲಿಯೂ ಸಹ ಈ 20 ಅಂಶಗಳ ಕಾರ್ಯಕ್ರಮದ ಬಗ್ಗೆ ಪ್ರಚಾರ ಮಾಡಲು ಒಂದೊಂದು ಜಿಲ್ಲೆಗೆ ಒಬ್ಬೊಬ್ಬ ಮಂತ್ರಿಗಳು ಹೋಗಿದ್ದರು. ಎರಡು ದಿವಸಗಳಲ್ಲಿ 30 ಕಡೆಗಳಲ್ಲಿ 15-15 ನಿಮಿಷಗಳ ಕಾಲ ಭಾಷಣ ಜರಿದರು. ಇದರಿಂದ ಜನರಿಗೆ ಯಾವ ಅನುಕೂಲವೂ ಆಗುವುದಿಲ್ಲ, ಸ್ಥಳದ ಮುಖಂಡರೊಡನೆ ಮಾತುಕತೆ ನಡೆಸಿ ಅಲ್ಲಿಯ ಜನರಿಗೆ ಬೇಕಾಗುವಂತಹ ಅನುಕೂಲಗಳನ್ನು ಕಲ್ಪಿಸಿಕೊಡಬೇಕು. ಅದಕ್ಕಾಗಿ ತಾಲ್ಲೂಕ್ ಮಟ್ಟದಲ್ಲಿ, ಗ್ರಾಮ ಮಟ್ಟದಲ್ಲಿ, ಜಿಲ್ಲಾ ಮಟದಲ್ಲಿ ಖಾಸಗೀ ಜನರು ಇರುವಂತಹ ಸಲಹಾ ಸಮಿತಿಗಳನ್ನು ರಚನೆ ಮಾಡಬೇಕು. ಆಗ ಈ ಕಾರ್ಯಕ್ರಮಗಳನ್ನು ಜಾರಿಗೆ ತರಲು ಅವಕಾಶ ವಾಗುತ್ತದೆ, ಈ ರೀತಿ ಮಾಡುತ್ತಾರೆಂದು ನಂಬಿ, ನನಗೆ ಮಾತನಾಡಲುಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ,

† ಶ್ರೀ ಎಸ್. ಎಂ. ಶೀರಾಳಿಚಂದ್ರಶೇಖರ್ ; (ಹೊಸನಗರ) ಸನ್ಮಾನ್ಯ ಸಭಾಧ್ಯಕ್ಷರೇ ಮಾನ್ಯ ರಾಜ್ಯಪಾಲರು ಮಾಡಿರತಕ್ಕಂಥ ಭಾಷಣವನ್ನು ನಾನುಸಂಪೂರ್ಣವಾಗಿ ಸ್ವಾಗತಿಸಿ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೇ ಈಗ ನಮ್ಮಲ್ಲಿಗೆ ರಾಜ್ಯಪಾಲರಾಗಿ ಬಂದಿರುತಕ್ಕಂಥ ಸನ್ಮಾನ್ಯರು ಕೇಂದ್ರದಲ್ಲಿ ಬಹಳ ಪ್ರಭಾವಯುತರಾದಂಥ ವ್ಯಕ್ತಿಗಳಾಗಿರುವುದರಿಂದ, ನಮ್ಮ ರಾಜ್ಯದಲ್ಲಿರತಕ್ಕಂಥ ಹಲವಾರು ಸಮಸ್ಯೆಗಳು ಅವರ ಮೂಲಕ ತೀವರ್ಮಾನವಾಗುತ್ತವೆಂಬ ಭಾವನೆಯನ್ನು ನಾನು ಹೊಂದಿದ್ದೇನೆ, ನೆನ್ನೆಯಿಂದಲೂ ಮಾತನಾಡಿದಂತಹ ಮಾನ್ಯ ಶ್ರೀ ಕೃಷ್ಣಪ್ಪನವರು, ಮಾನ್ಯ ಮಂಜುನಾಥ ಅವರು ಹೇಳಿದಂತಹ ಮಾತುಗಳನ್ನು ಕೇಳಿದ ಮೇಲೆ ನನಗೆ ಒಂದು ಕಥೆ ಜ್ಞಾಪಕಕ್ಕೆ ಬರುತ್ತದೆ ಆ ಕಥೆ ಈ ರೀತಿ ಇದೆ :-

" ಒಂದು ಸಲ ತಾಯಿ ಮತ್ತು ಮಗು ಬಸ್ಸಿನಲ್ಲಿ ಪ್ರಯಾಣ ಮಾಡುತ್ತಿದ್ದರು, ಬಸ್ಸಿನಲ್ಲಿ ಆ ಮಗು ಪದೇಪದೇ ನಾನು ಉಚ್ಚೆಹುಯ್ಯುತ್ತೇನೆ ಎಂದು ತಾಯಿಗೆ ಹೇಳುವುದಕ್ಕೆ ಪ್ರಾರಂಭ ಮಾಡಿದಾಗ, ಆ ತಾಯಿ ಮಗುವಿಗೆ ಆ ರೀತಿ ಹೇಳಬೇಡ, ಉಚ್ಚೆಹುಯ್ಯುವ ಸಮಯ ಬಂದಾಗಲೆಲ್ಲಾ ನಾನು ಹಾಡುತ್ತೇನೆ ಎಂದು ಹೇಳು, ಇಲ್ಲದಿದ್ದರೆ ಬೇರೆಯವರು ಅಸಹ್ಯಪಟ್ಟುಕೊಳ್ಳುತ್ತಾರೆಂದು ಹೇಳಿಕೊಟ್ಟರು. ಮಗು ಅದೇ ರೀತಿ ಹೇಳುವುದಕ್ಕೆ ಅಭ್ಯಾಸ ಮಾಡಿಕೊಂಡಿತು. ಒಂದು ದಿನ ಅವರ ಮನೆಗೆ ಆ ಮಗುವಿನ ಅಜ್ಜ ಬರುತ್ತಾರೆ, ಅವರು ಬಂದ ದಿನ ರಾತ್ರಿ ಆ ಮಗು ಆ ಅಜ್ಜನ ಬಳಿಯೇ ಮಲಗುತ್ತದೆ, ಸ್ವಲ್ಪ ಸಮಯದ ನಂತರ ಆ ಮಗು ಆ ಅಜ್ಜನ ಬಳಿ ನಾನು ಹಾಡುತ್ತೇನೆ ಎಂದು ಹೇಳಿದಾಗ ಆ ಅಜ್ಜನು ಹಾಡುವುದಿದ್ದರೆ ನನ್ನ ಕಿವಿಯಲ್ಲಿಯೇ ಹಾಡು ಎಂದು ಹೇಳಿದಾಗ, ಆ ಮಗು ಅದೇರೀತಿ ಮಾಡುತ್ತದೆ. ಆ ಸಮಯದಲ್ಲಿ ಆ ಮಗು ಹೇಳಿದ ಹಾಡೇ ಬೇರೆಯಾಗಿತ್ತು, ಆದರೆ ಅದರ ಅಜ್ಜ ತಿಳಿದುಕೊಂಡ ಹಾಡೇ ಬೇರೆಯಾಗಿತ್ತು; " ಅದೇರೀತಿಯಾಗಿ ನಮ್ಮ ಮಿತ್ರರಿಗೆ ಇಂದಿನ ಪರಿಸ್ಥಿತಿಯನ್ನು ತಿಳಿದುಕೊಳ್ಳತಕ್ಕಂಥ ವ್ಯವಧಾನವಾಗಲೀ, ತಾಳ್ಮೆಯಾಗಲೀ ಇಲ್ಲವಾಗಿದೆ. ಈ ಒಂದು ತುರ್ತು ಪರಿಸ್ಥಿತಿ ಬರಲಿಕ್ಕೆ ಕಾರಣರಾದವರು ಯಾರು? ನಮ್ಮ ಈ ಮಿತ್ರರೇ ಅಲ್ಲವೇ,

ತುರ್ತುಪರಿಸ್ಥಿತಿ ಬರಲಿಕ್ಕೆ ಕಾರಣ ಏನು? ಯಾರು ಯಾರು ಯಾವ ಕೆಲಸ ಮಾಡಬೇಕೋ ಅದನ್ನು ಮಾಡಿದ್ದರೆ ಪ್ರಜಾಪ್ರಭುತ್ವದಲ್ಲಿ ಏನು ಸಾಧನೆ ಮಾಡಬೇಕಾಗಿತ್ತೋ ಅದನ್ನು ಮಾಡಬಹುದಾಗಿತ್ತು, ಆದರೆ ಕೆಲವು ಜನರ ಪ್ರವೃತ್ತಿ ಏನು ಮಾಡಬೇಕೆಂದು ಹೊರಟಿದ್ದರೋ ಅದನ್ನು ನೋಡಿ ಅವರ ಮೇಲೆ ಈ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಲೇ ಬೇಕಾದ ಪ್ರಮೇಯ ಬಂದಿದ್ದರಿಂದ ಮಾಡಬೇಕಾಯಿತು. ಮಾನ್ಯ ಶ್ರೀ ಮಂಜುನಾಥ ರವರು ಏನು ಒಂದು ವಕಾಲತ್ತು ವಹಿಸಿಕೊಂಡು ಮಾತನಾಡಿದ್ದಾರೆ ಅದನ್ನು ನೋಡಿ ನಮ್ಮ ನಾಯಕಿ ಇಂದಿರಾ ಗಾಂಧಿಯವರು ಪಕ್ಷವನ್ನು ಬೇರೆ ಮಾಡಿದರು. ಪ್ರಜಾಪ್ರಭುತ್ವದ ನಿಜರೂಪ ಬೆಳೆಯಬೇಕಾದರೆ ಅದರ ಕಾರ್ಯಕ್ರಮ ಏನು ಹಾಕಿಕೊಂಡಿದ್ದಾರೆ ಅದನ್ನು ಕಾರ್ಯಗತ ಮಾಡುವುದಕ್ಕೆ ಅವಕಾಶ ಒದಗಿಸಬೇಕಾದ್ದು ನಮ್ಮೆಲ್ಲರ ಕರ್ತವ್ಯ, ಅದನ್ನು ಪ್ರಜಾಪ್ರಭುತ್ವದ ಹೆಸರಿನಲ್ಲಿ ತೋಳು ಮಡಚಿ ಬೀದಿಯಲ್ಲಿ ಜಗಳ ಮಾಡುವುದು ಪ್ರಜಾಪ್ರಭುತ್ವವೇ? ಜನತೆಗೋಸ್ಕರ ನಮ್ಮ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡು ಕೆಲಸಕಾರ್ಯಗಳನ್ನು ಮಾಡುತ್ತಾ ಇದೆ ಮತ್ತು ಮಾಡಿದೆ ಇದನ್ನು ನೋಡುವ ವ್ಯವಧಾನವು ನಮ್ಮ ಮಿತ್ರರಿಗೆ ಇಲ್ಲದೆ ಹೋದರೆ ಅದಕ್ಕೆ ನಾವು ಏನು ಮಾಡಬೇಕು ಕೇಳುತ್ತೇನೆ. 1971-72ರ ಚುನಾವಣೆಯಲ್ಲಿ ನಮ್ಮ ಪಕ್ಷಕ್ಕೆ ತೋರಿಸಿದಂತ ಬೆಂಬಲವನ್ನು ನಮ್ಮ ಮಿತ್ರರು ನೋಡಿ ತಿಳಿದುಕೊಳ್ಳಬೇಕು. ಈ ಪಕ್ಷದ ಸರ್ಕಾರವನ್ನು ಮತ್ತು ಈ ಪಕ್ಷದಿಂದ ಆರಿಸಿ ಬಂದಂತ ಶಾಸಕರನ್ನು ಬಲವಂತವಾಗಿ ರಾಜಿನಾಮೆ ಕೊಡಿ ಎಂದು ಹೇಳುವ ಮಟ್ಟಕ್ಕೆ ಹೋದರೆ ಮತ್ತು ಆ ಮಟ್ಟಕ್ಕೆ ಹೋದಮೇಲೆ ನಮ್ಮ ನಾಯಕಿ ಈ ತುರ್ತುಪರಿಸ್ಥಿತಿಯನ್ನು ಘೋಷಣೆ ಮಾಡಬೇಕಾಯಿತು.

MR. DEPUTY SPEAKER.— The hon. M mber is no yielding......

ಶ್ರೀ ಜಿ. ಎನ್. ಪಾಟೀಲ್.— ಪ್ರಜಾಪ್ರಭುತ್ವದಲ್ಲಿ ಈ ತುರ್ತು ಶಾಸನವನ್ನು ಪ್ರಜೆಗಳನ್ನು ಪ್ರಜೆಗಳನ್ನು ಕೇಳಿ ಮಾಡಿದ್ದೀರೋ ಅಥವಾ ತಮಗೆ ಮನಸ್ಸು ಬಂದಹಾಗೆ ಮಾಡಿದ್ದಾರೋ ಎಂದು ಮಾನ್ಯ ಸ್ನೇಹಿತರು ಇದಕ್ಕೆ ಉತ್ತರ ಕೊಡಬೇಕು ?

M-. Deputy Speaker.— The hon. Member is entilted to have his own vie .

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.— ಪ್ರಜೆಗಳ ಅಭಿಪ್ರಾಯಗಳನ್ನು 71-72ರಲ್ಲಿ ಕೊಡ್ತಿದ್ದಾರೆ ಅದನ್ನು ಅರ್ಥಮಾಡಿಕೊಳ್ಳಬೇಕು. ಜೊತೆಗೆ ಅವರ ಮತವನ್ನು ಕೊಟ್ಟಿದ್ದಾರೆ ಇದನ್ನು ನೋಡಿ ಜನತೆ ಯಾರ ಕಡೆ ಇದ್ದಾರೆಂದು ಅರ್ಥ ಮಾಡಿಕೊಂಡಮೇಲೆ ಅದನ್ನು ತಾವು ಒಪ್ಪಿಕೊಂಡಮೇಲೆ ಚುನಾಯಿತನಾದ ಶಾಸಕನನ್ನು ಮತ್ತು ಪಾರ್ಲಿಮೆಂಟ್ ಸದಸ್ಯರನ್ನು ಬಲವಂತವಾಗಿ ಅವರ ಮನೆಗೆ ನೂರು ಇನ್ನೂರು ಜನರು ಒಮ್ಮೆಗೆ ನುಗ್ಗಿ ಒತ್ತಾಯ ಮಾಡಿ ರಾಜಿನಾಮೆ ಕೊಡು ಎಂದು ಕೇಳುವುದು ಪ್ರಜಾಪ್ರಭುತ್ವ ಎನ್ನಿಸಿಕೊಳ್ಳುತ್ತದೆಯೇ? ಇದನ್ನು ನಾನು ತಮ್ಮನ್ನು ಕೇಳುತ್ತೇನೆ. ಉದಾಹರಣೆಗೆ ನನ್ನ ಮನೆಗೆ ರೀತಿ ಏನಾದರೂ ಜನರು ನುಗ್ಗಿದರೆ ಅದನ್ನು

ನೋಡಿದ ಮೇಲೆ ನಮ್ಮ ಮನೆಯವರು ಏನು ಹೇಳುತ್ತಾರೆಂದರೆ ನಿಮ್ಮ ರಾಜಕೀಯ ನಮಗೆ ಬೇಡ ಸುಮ್ಮನೆ ರಾಜಿನಾಮೆ ಕೊಡಿ ನೀವು ಒಬ್ಬರು ಚೆನ್ನಾಗಿದ್ದರೆ ಸಾಕು ನಿಮ್ಮ ರಾಜಕೀಯ ನಮಗೆ ಬೇಡವೆಂದು ನಮ್ಮ ಮನೆಯವರು ಹೇಳೀ ಹೇಳುತ್ತಾರೆ.

ಶ್ರೀ ಬಿ. ಎನ್. ಪಾಟೀಲ್.— ನೀವು ನಿಮ್ಮ ಜೀವ ಸಹಿತ ಉಳಿಯುವುದಕ್ಕೆ ಈ ತುರ್ತುಪರಿಸ್ಥಿತಿ ಘೋಷಣೆ ಮಾಡಿದ್ದೀರಿ ಈ ಅಂಶದ ಕಾರ್ಯಕ್ರಮದ ನೆಪ ಹೂಡಿದ್ದೀರಿ ?

ಶ್ರೀ ಎಸ್. ಎಂ. ಶಿರನಾಳಿ ಚಂದ್ರ ಶೇಖರ್.— ಈಗ ಏನು ನಮ್ಮ ನಾಯಕಿ ಇಂದಿರಾ ಗಾಂಧಿ ಯವರು 20 ಅಂಶದ ಕಾರ್ಯಕ್ರಮ ಘೋಷಣೆ ಮಾಡಿದ್ದಾರೆ ಆ ರೀತಿ ಯಾರ ಕಾಲದಲ್ಲಿ ಮಾಡಿದ್ದರು. ಶ್ರೀರಾಮರ ಕಾಲದಲ್ಲ ಮಾಡಿದ್ದರಾ? ಅಥವಾ ಅಶೋಕನ ಕಾಲದಲ್ಲ ಮಾಡಿದ್ದರಾ? ನಾನು ಕೇಳುತ್ತೇನೆ.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಮಾನ್ಯ ಸ್ನೇಹಿತರಾದ ಚಂದ್ರಶೇಖರ್‌ರವರು ಆದಿಶಕ್ತಿಗಿಂತ ಮೊದಲೇ ಹುಟ್ಟಿದ್ದವರು ಎಂದು ಕಾಣಿಸುತ್ತದೆ?

ಶ್ರೀ ಎಸ್ ಎಂ. ಶಿರನಾಳಿ ಚಂದ್ರಶೇಖರ್.— ಯಾವ ಕಾಲದಲ್ಲಿ ಇಂಥ ಒಂದು ಕಾರ್ಯಕ್ರಮ ಹಾಕಿದ್ದರು ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ. ನಮ್ಮ ಕೋಣಂದೂರ ಲಿಂಗಪ್ಪನವರು ತಪ್ಪು ತಿಳಿದುಕೊಂಡಿದ್ದಾರೆ. ನಮ್ಮ ಕಾರ್ಯಕ್ರಮ ಮತ್ತು ಕಲಸಕಾರ್ಯಗಳು 80 ಮೈಲಿ ವೇಗದಲ್ಲಿ ಓಡುತ್ತಿವೆ ನಮ್ಮ ಸ್ನೇಹಿತರು ಕೆಲವರು ಇದನ್ನು ನೋಡಿ ಒಳ ಒಳಗೆ ಕಾಂಗ್ರೆಸ್‌ನ್ನು ಸೇರೋಣ ಎನ್ನುವ ಮನಸ್ಸು ಬಂದಿದೆ.

ಶ್ರೀ ಕೋಣಂದೂರು ಲಿಂಗಪ್ಪ.— ಈಗ ನಮ್ಮ ಸ್ನೇಹಿತರು ಹೇಳಿದ್ದಕ್ಕೆ ಅವರ ಬಗ್ಗೆ ಒಂದು ಹೇಳುವುದಕ್ಕೆ ಇಷ್ಟ ಪಡುತ್ತೇನೆ. ಈ ಜನ್ಮದಲ್ಲಿಯೇ ಅಲ್ಲ ಮತ್ತೆ ನನಗೆ ಪುನರ್‌ಜನ್ಮವಾದರೂ ಕೂಡಾ ಕಾಂಗ್ರೆಸ್‌ಗೆ ಸೇರುವ ಬುದ್ಧಿ ಯನ್ನು ನನಗೆ ಬರದೆ ಇರಲಿ ಎಂದು ಹೇಳುತ್ತೇನೆ.

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.—ನಮ್ಮ ಮಾನ್ಯ ಸ್ನೇಹಿತರಾದ ಕೃಷ್ಣಪ್ಪನವರು ಮಾತನಾಡುವಾಗ ಹೇಳಿದರು ವಿರೋಧಪಕ್ಷದ ನಾಯಕರನ್ನು ಜೈಲಿನಲ್ಲಿ ಇಟ್ಟು ಅವರ ಅಭಿಪ್ರಾಯ ಗಳನ್ನು ತಿಳಿಸುವ ಪ್ರಯತ್ನಕ್ಕೆ ಕುಂಟಿತಗೊಳಿಸಿ ಪ್ರಜಾಪ್ರಭುತ್ವದ ತತ್ವವನ್ನೇ ಮೊಟಕುಗೊಳಿಸಿ ದ್ದಾರೆಂದು ಹೇಳಿದರು. ಇದು ಪ್ರಜಾಪ್ರಭುತ್ವದ ಧೋರಣೆಯೇ ? ಎಂದು ಕೇಳಿದರು. ಜೂನ್ 26ನೇ ತಾರೀಖು ತುರ್ತುಪರಿಸ್ಥಿತಿ ಘೋಷಣೆ ಮಾಡಿರತಕ್ಕಂಥಾದ್ದು ಜೂನ್ 29ನೇ ತಾರೀಖು ಮಹಾ ಮಹಾ ನಾಯಕರು ಜೈಲಿಗೆ ಹೋಗಿರಬಹುದು. ಮಾನ್ಯ ಕೃಷ್ಣಪ್ಪನವರು ಇದಕ್ಕೆ ಉತ್ತರ ಕೊಡಬೇಕು. ಜೂನ್ 26ನೇ ತಾರೀಖು ತುರ್ತುಪರಿಸ್ಥಿತಿ ಘೋಷಣೆ ಆಗದೆ ಹೋಗಿದ್ದರೆ ದೇಶಕ್ಕೆ ಮತ್ತು ಜನತೆಗೆ ಯಾರು ಶಾಂತಿ ಪ್ರವೃತ್ತಿಯ ಜನ ಏನಿದ್ದಾರೆ ಅವರುಗಳಿಗೆ ಏನಾಗುತ್ತಿತ್ತೋ ಎಂದು ನಾನು ಕೇಳಲಿಕ್ಕೆ ಬಯಸುತ್ತೇನೆ.

ಶ್ರೀ ಎಚ್. ಟಿ. ಕೃಷ್ಣಪ್ಪ.— ಜೂನ್ 26ನೇ ತಾರೀಖು ಏನು ತುರ್ತುಪರಿಸ್ಥಿತಿ ಘೋಷಣೆ ಆಯಿತು ಕಾರಣ ವೇನು ಎಂದು ನಿಮಗೆ ಎಷ್ಟು ಗೊತ್ತಿದೆಯೋ ನನಗೂ ಅಷ್ಟೇ ಗೊತ್ತಿದೆ. ಕರ್ನಾಟಕದ ರಾಜ್ಯದ ಮೇಲೆ ಜೂನ್ 26ರಲ್ಲಿ ಏನಾಯಿತು! ಎಂಬುದು ನಮಗೆ ಗೊತ್ತಿದೆ. ಆದರೇ 76ನೇ ಇಸವಿ ಜೂನ್ ತಿಂಗಳಲ್ಲಿ ಅಂಥ ಪರಿಸ್ಥಿತಿ ಮುಂದುವರಿದಿದೆಯೋ ? ಇದರಲ್ಲಿ ನಮ್ಮ ಮಾನ್ಯ ಶ್ರೀ ದೇವೇಗೌಡರ ಪಾತ್ರ ಏನು ಇದೇ ಇವತ್ತಿನ ದಿವಸ ಈ ಸಭೆಯಲ್ಲಿ ನಿಂತು ಅವರ ಅಭಿಪ್ರಾಯಗ ಳನ್ನು ತಿಳಿಸುವುದಕ್ಕೆ ಅವಕಾಶವಿಲ್ಲದಂತೆ ಮಾಡುವ ಪ್ರಮೇಯವೇನಿತ್ತು? ಇದಕ್ಕೆ ತಾವು ಸ್ಪಷ್ಟೀ ಕರಣ ಕೊಡಿ! ಗೊತ್ತಿಲ್ಲದೆ ಇರುವ ವಿಷಯವನ್ನು ಹೇಳುವುದಕ್ಕೆ ಹೋಗುತ್ತೀರಿ!

ಶ್ರೀ ಎಸ್. ಎಂ. ಶಿರನಾಳಿ ಚಂದ್ರಶೇಖರ್.— ಊರು ಊರಿನಲ್ಲಿ ನಡೆಸತಕ್ಕಂಥ ಚಳುವಳಿ ಯಾವ ನಾಯಕರು ಇಲ್ಲದೆ ನಡೆಯುತ್ತದೆಯೇ ! ಇದಕ್ಕೆ ಯಾರು ಹೊಣೆ ಇದಕ್ಕೆ ಉತ್ತರ ಹೇಳಿ ಎಂದು ಕೇಳಲಿಕ್ಕೆ ಬಯಸುತ್ತೇನೆ? ಇದಕ್ಕೆ ಯಾರು ಕಾರಣರು ಯಾರು ಚಳುವಳಿಗೆ ಪ್ರಚೋದನೆ ನಡೆಸುತ್ತಿದ್ದಾರೆ ಅಂಥವರನ್ನು ಸಂಸ್ಥಾನಾದ್ಯಾಂಥ ಜೈಲಿಗೆ ಹಾಕಿದರೆ ಉತ್ತರ ಸಿಕ್ಕುತ್ತದೆ. ನಮ್ಮ ಮಾನ್ಯ ಕೃಷ್ಣಪ್ಪನವರು ಮಾತನಾಡುತ್ತಾ ಹೇಳಿದರು ಇವತ್ತು ದೇಶಕ್ಕೆ ಸ್ವಾತಂತ್ರ್ಯ ತಂದಂಥ ಮಹಾ ಮಹಾ ನಾಯಕರ ಒಳಗೆ ಹಾಕಿದ್ದಾರೆಂದು. ಪ್ರಜಾಪ್ರಭುತ್ವ ಹೆಸರಿನಲ್ಲಿ ಸರ್ಕಾರ

ನಡೆಸುತ್ತಾ ಇರುವುದು ಇವರಿಗೆ ಶೋಭವೇ ಎನ್ನುವ ಮಾತನ್ನು ವಿರೋಧಪಕ್ಷದವರು ಆಡಿದರು. ಪ್ರಜಾಪ್ರಭುತ್ವವನ್ನು ಹತ್ತಿಕ್ಕಲಿಕ್ಕೆ ಯಾರು ಪ್ರಯತ್ನಮಾಡಿದರು? ಅದು ಯಾರಿಂದ ಆಯಿತು ಎಂಬುದನ್ನು ಅವರೇ ಹೇಳಬೇಕು. ದೊಡ್ಡ ದೊಡ್ಡ ಕಳ್ಳವ್ಯಾಪಾರಿಗಳನ್ನು ಜೈಲಿನೊಳಗೆ ಹಾಕಿದಾಗ ಅಂತಹವರನ್ನು ಜಾಮೀನು ಮೇಲೆ ಬಿಡಿಸಲಿಕ್ಕೆ ಯಾರು ಪ್ರಯತ್ನಮಾಡಿದರೆಂಬುದನ್ನು ಯೋಚಿಸಬೇಕು.

ದೇಶದ ಜನತೆಗೆ ಆಶ್ವಾಸನೆ ಕೊಟ್ಟು ದೇಶದ ಜನತೆಯನ್ನು ಮೋಸಮಾಡಿಕೊಂಡು ಬಂದಂಥ ನಮ್ಮ ಮಿತ್ರರು 69ರ ನಂತರ ಎಷ್ಟರಮಟ್ಟಿಗೆ ಕೆಲಸಮಾಡಿಕೊಂಡಿದ್ದಾರೆ ಇಲ್ಲದ ಸಲ್ಲದ ಮಾರ್ಗಗಳನ್ನು ಹಿಡಿದಿದ್ದಾರೆ. ಬಂಗ್ಲಾದೇಶದಲ್ಲಿ ಆದಂಥ ಒಂದು ಕಾರ್ಯವನ್ನು ನಾವು ನೆನಸಿಕೊಂಡರೆ, ಅದು ಇಡೀ ಭಾರತ ದೇಶಕ್ಕೇ ಎಲ್ಲಿ ಅನ್ವಯಿಸಿಕೊಳ್ಳುವುದೋ ಎಂಬ ಸಂಶಯ ಕೂಡ ಆಗ ಇತ್ತು. ಇವತ್ತು ನಾವು ಈಗಿನ ಒಂದು ತುರ್ತು ಪರಿಸ್ಥಿತಿಯನ್ನು ಜಾರಿಗೆ ತರದೇ ಇದ್ದಿದ್ದರೆ ಇಲ್ಲಿಯೂ ಬಾಂಗ್ಲಾ ದೇಶದ ಕಥೆಯೇ ಆಗುತ್ತಿತ್ತೋ ಏನೋ ಎನ್ನುವ ಒಂದು ಯೋಚನೆ ನನಗೆ ಬರುತ್ತದೆ. ಯಾರ ಬಗ್ಗೆ ಪ್ರಜಾಪ್ರಭುತ್ವದಲ್ಲಿ ಚಿಂತನೆ ಮಾಡಬೇಕಾಗಿತ್ತೋ, ಯಾವ ಹಿತಚಿಂತನೆಗಾಗಿ ನಮ್ಮ ಸರ್ಕಾರ ಆಡಳಿತ ನಡೆಸಬೇಕಾಗಿತ್ತೋ, ಯಾರಿಗೆ ನ್ಯಾಯ ಸಿಗದಿತ್ತೋ ಅಂತಹವರಿಗೆ ಈಗಿನ ಒಂದು ತುರ್ತು ಪರಿಸ್ಥಿತಿಯಲ್ಲಿ ಅದರಲ್ಲಿಯೂ ಈ ಒಂದು ಪ್ರಜಾಪ್ರಭುತ್ವದಲ್ಲಿ ನ್ಯಾಯ ದೊರಕಿಸಿಕೊಡುವುದು ಸರ್ಕಾರದ ಆದ್ಯ ಕರ್ತವ್ಯವೆಂದು ಮನಗಂಡು ಈ ಸಂದರ್ಭದಲ್ಲಿ ಅನೇಕ ರೀತಿಯಲ್ಲಿ ಜನೋಪಯುಕ್ತ ಕಾರ್ಯಗಳನ್ನು ಸರ್ಕಾರ ಕೈಗೊಂಡಿದೆ. ನಮ್ಮ ಈ ಸರ್ಕಾರ ಬಂದಮೇಲೆ 60ಕೋಟಿ ರೂಪಾಯಿಗಳಷ್ಟು ಸಾಲವನ್ನು ತೀರಿಸಿದ್ದಾರೆ. ಯಾವ ಕಾಲದಲ್ಲಿಯೂ 25ವರ್ಷಗಳ ಸ್ವಾತಂತ್ರ್ಯ ಇತಿಹಾಸದಲ್ಲಿ ಇಷ್ಟು ಹೆಚ್ಚು ಮೊಬಲಗಿನಷ್ಟು ಸಾಲವನ್ನು ಯಾವ ಸರ್ಕಾರವೂ ನಮ್ಮ ದೇಶದಲ್ಲಿ ತೀರಿಸಿರಲಿಲ್ಲ. ಎಂದೂ ಆಗದೇ ಇರುವ ಕೆಲಸಗಳನ್ನು ಈ ಸರ್ಕಾರ ಬಂದಮೇಲೆ ಮಾಡಿಕೊಂಡು ಬಂದಿದ್ದಾರೆ. ಇದು ಒಂದು ಮಹತ್ಸಾಧನೆ ಅಲ್ಲವೇ ? ನೆಲ-ಜಲದ ಬಗ್ಗೆಯೂ ಅನೇಕ ಕಾರ್ಯಕ್ರಮಗಳನ್ನು ಈಗಾಗಲೇ ಕೈಗೊಂಡಿದ್ದಾರೆ. ಆ ವಿಚಾರ ವಿರೋಧಪಕ್ಷದ ಮಾನ್ಯ ಸದಸ್ಯರೆಲ್ಲರಿಗೂ ಗೊತ್ತಿದೆ. ಅಂದಮೇಲೆ ಅದರ ಬಗ್ಗೆ ಒಂದು ಒಳ್ಳೆಯ ಮಾತನ್ನು ಆಡುವ ಬುದ್ಧಿ ಆ ಕಡೆಯ ನಮ್ಮ ಸ್ನೇಹಿತರಿಗೆ ಬರಬಾರದೇ ಎಂದು ನಾನು ಅವರನ್ನು ಕೇಳುತ್ತೇನೆ.

ಇನ್ನೊಂದು ವಿಷಯ, ಪ್ರಧಾನಿಯವರು ಘೋಷಿಸಿರುವ 20 ಅಂಶಗಳ ಕಾರ್ಯಕ್ರಮಗಳಲ್ಲಿ ಬಹುಮುಖ್ಯವಾಗಿ ಮಾನಸಿಕ ಸ್ವಾತಂತ್ರ್ಯ ಹಾಗೂ ಆರ್ಥಿಕ ಸ್ವಾತಂತ್ರ್ಯ ಜನತೆಗೆ ಕೊಡಿಸುವಂಥ ಕಾರ್ಯಕ್ರಮವೂ ಸಹ ಅಡಗಿದೆ. ನನಗೆ ತಿಳಿದುಬಂದಿರುವ ಪ್ರಕಾರ ಅನೇಕ ಕಡೆಗಳಲ್ಲಿ ಹೆಚ್ಚಿಗೆ ಜನರು ಸಾಲದಲ್ಲಿಯೇ ಹುಟ್ಟಿ, ಸಾಲದಲ್ಲಿಯೇ ಬದುಕಿ, ಸಾಲದಲ್ಲಿಯೇ ತೀರುವಂತಹ ಕುಟುಂಬಗಳು ಅನೇಕವಿವೆ. ಇಂತಹ ಅನೇಕ ಕುಟುಂಬಗಳು ಋಣಪರಿಹಾರದಿಂದ ವಿಮೋಚನೆಯಾಗುತ್ತಿರುವುದು ಒಂದು ಒಳ್ಳೆಯ ಸಾಧನೆಯಲ್ಲವೇ ? 20 ಅಂಶಗಳ ಕಾರ್ಯಕ್ರಮಗಳ ಬಗ್ಗೆ ಈಗ ಮಾತನಾಡುತ್ತಾ ಇರುವ ನಮ್ಮ ವಿರೋಧಪಕ್ಷದ ಮಿತ್ರರು ಅವರ ಸರ್ಕಾರವಿದ್ದ ಕಾಲದಲ್ಲಿ ಅಂತಹ ಕಾರ್ಯಕ್ರಮಗಳನ್ನು ಕುರಿತು ಯಾವ ಕ್ರಮವನ್ನೂ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನೆಂದು ಈಗ ನಾನು ಪ್ರಶ್ನೆಮಾಡುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಆಗಲೂ ಈಗಿನ ಪ್ರಧಾನಿಯವರೇ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರು ಆಗ ಏಕೆ ಈ ರೀತಿ ಮಾಡಲಿಲ್ಲ ?

ಶ್ರೀ ಎಸ್. ಎಂ. ಶೀರನ್ಹಳಿ ಚಂದ್ರಶೇಖರ್.— ಇವತ್ತು 20 ಅಂಶಗಳ ಕಾರ್ಯಕ್ರಮಗಳಲ್ಲಿ ಅನೇಕ ಮುಖ್ಯಾಂಶಗಳು ಅಡಕವಾಗಿವೆ. ಅವುಗಳಲ್ಲಿ ಜೀತ ನಿರ್ಮೂಲ ಮತ್ತು ಋಣ ಪರಿಹಾರ ಕಾರ್ಯಕ್ರಮಗಳು ಬಹಳ ಮುಖ್ಯವಾದುವುಗಳಾಗಿವೆ. ಅವುಗಳ ಬಗ್ಗೆ ನಮ್ಮ ಸರ್ಕಾರದವರು ಹೆಚ್ಚಿನ ಆಸಕ್ತಿಯನ್ನು ವಹಿಸಿ ಜರೂರಾದಂಥ ಕ್ರಮಗಳನ್ನು ಈಗಾಗಲೇ ಕೈಗೊಂಡಿರುವುದರಿಂದ ಅನೇಕ ಕುಟುಂಬಗಳು ಋಣ ಪರಿಹಾರದಿಂದ ವಿಮೋಚನೆಯಾಗಿವೆ. ಇಂತಹ ಉದಾಹರಣೆಗಳು ಹಿಂದೆ ಯಾವ ಸರ್ಕಾರದಲ್ಲಿಯಾದರೂ ಇತ್ತೇ ಎಂದು ನಾನು ಪ್ರಶ್ನೆಮಾಡುತ್ತೇನೆ.

*** Matter expunged as ordered by the chair.

ಸಾಮಾನ್ಯವಾಗಿ ಹೇಳುವುದಾದರೆ, ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯ ಮನುಷ್ಯನಾದ ವನಿಗೆ ತನ್ನ ಸ್ವಂತ ವಿಚಾರ ಮಾಡುವ ಶಕ್ತಿ ಇಲ್ಲದೇ ಇರುವ ಸಂದರ್ಭಗಳಲ್ಲಿ ಅವನ ಸಂಸಾರ ದಲ್ಲಿ ಮಕ್ಕಳು, ಮೊಮ್ಮಕ್ಕಳು ಎಲ್ಲರೂ ಕೂಡ ಸಾಲದಿಂದ ವಿಮುಕ್ತರಾಗುವ ಕ್ರಮವನ್ನು ಸರ್ಕಾರ ತಗೆದುಕೊಂಡರೆ, ಈ ದೇಶದಲ್ಲಿ ಸಾವಿರಾರು ವರ್ಷಗಳಿಂದ ಮಾಡದೇ ಇರತಕ್ಕ ಕೆಲಸವನ್ನು ನಮ್ಮ ಸರ್ಕಾರ ಮಾಡಿದೆ. ಅನೇಕ ಜನರು ಬಡತನದಲ್ಲಿ ಹುಟ್ಟಿ, ಹೆಚ್ಚಿಗೆ ಸಾಲ ಗಾರರಾಗಿ, ಸಾಲಕೊಟ್ಟವರಿಂದ ನರಳುತ್ತಿರುವ ಜನರಿಗೆ ಅವರು, ಸಾಲದಿಂದ ವಿಮುಕ್ತರಾಗು ವಂತಹ ಕಾರ್ಯಗಳನ್ನು ಈ ಸರ್ಕಾರ ತೆಗೆದುಕೊಂಡರೆ, ಅದು ಒಂದು ಪುಣ್ಯ ಕೆಲಸವಲ್ಲವೇ ಎಂಬುದಾಗಿ ನಾನು ಪ್ರಶ್ನೆಮಾಡುತ್ತೇನೆ. ಇಂತಹ ಒಂದು ಕ್ರಾಂತಿಕಾರಕವಾದ ಕೆಲಸವನ್ನು ಹಿಂದೆ ಯಾರಾದರೂ ಯಾವಾಗ ಮಾಡಿದ್ದರು, ಯಾವ ಕಾಲದಲ್ಲಿ ಮಾಡಿದ್ದರೆಂದು ನಾನು ಕೇಳುತ್ತೇನೆ. ಈಗ ಈ ಪ್ರಜಾಪ್ರಭುತ್ವ ಸರ್ಕಾರ ಆ ಕೆಲಸವನ್ನು ಮಾಡಿ ಮುಗಿಸಿದೆ. ಪ್ರಜಾ ಪ್ರಭುತ್ವದಲ್ಲಿ ಕೆಲವೊಂದು ವರ್ಗಕ್ಕೆ ಮಾತ್ರ ವಿಶೇಷವಾದಂಥ ಸವಲತ್ತುಗಳು ಇರಬೇಕು. ಆದರೆ ಕೆಲವು ವರ್ಗಗಳು ಸ್ವಂತ ವಿಚಾರಮಾಡುವುದಕ್ಕೆ ಅವಕಾಶವಿಲ್ಲದೆ ಕುರಿ, ಕೋಳಿ, ನಾಯಿಗಳಂತೆ ಬದುಕಬೇಕೆಂದು ಹೇಳುವುದು ಪ್ರಜಾಪ್ರಭುತ್ವದ ನೀತಿಯಿಯುಮವಲ್ಲ. ಇವತ್ತು ಯಾವ ಸಮಾಜಕ್ಕೆ ನ್ಯಾಯ ಸಿಗಲಿಲ್ಲವೋ ಆ ಸಮಾಜಕ್ಕೆ ಸರಿಯಾದಂಥ ನ್ಯಾಯ ದೊರಕಬೇಕೆಂಬ ದೃಷ್ಟಿಯಿಂದ ಶೋಷಣೆಯನ್ನು ಮಾಡುತ್ತಿದ್ದಾರೆ. ಅನೇಕ ಕಡೆಗಳಲ್ಲಿ ಋಣಪರಿಹಾರ ಕಾರ್ಯಕ್ರಮಗಳನ್ನು ಈ ಸರ್ಕಾರ ಈಗ ತಗೆದುಕೊಳ್ಳುತ್ತಾ ಇರುವುದರಿಂದ ಎಷ್ಟೋ ಕುಟುಂಬಗಳು ಈಗಾಗಲೇ ರುಣದಿಂದ ವಿಮೋಚನೆ ಆಗಿವೆ. ಬೆಳಕೇ ಕಾಣದ ಕುಟುಂಬಗಳು ಸಹ ಎಷ್ಟೋ ಈಗ ಋಣದಿಂದ ವಿಮುಕ್ತವಾಗಿದೆ. ಇವತ್ತು ಬೆಳಿಗ್ಗೆ ಪಕ್ಷದ ಸಭೆಯಲ್ಲಿ ಮಾತನಾಡುತ್ತಾ ಸಹಕಾರ ಮಂತ್ರಿಗಳು ಒಂದು ಮಾತನ್ನು ಹೇಳಿದರು.

ಶ್ರೀ ಕೋಣಂದೂರು ಲಿಂಗಪ್ಪ.— ನಿಮ್ಮ ಪಕ್ಷದ ವಿಷಯ ಇಲ್ಲಿ ಮಾತನಾಡುವುದು ಬೇಕಿಲ್ಲ. ಅವರು ಅವರ ಪಕ್ಷದಲ್ಲಿ ಏನು ಬೇಕಾದರೂ ಮಾತನಾಡಿಕೊಳ್ಳಲಿ. ಅದನ್ನು ಇಲ್ಲಿ ಪ್ರಸ್ತಾಪ ಮಾಡುವುದು ಬೇಕಿಲ್ಲ. ಪಕ್ಷದ ವಿಚಾರ ಮಾತ್ರ ಇಲ್ಲಿ ಬೇಡ. ಎಷ್ಟೋ ಹೊಡೆದಾಟಗಳು ಅಲ್ಲಿ ಆಗಿವೆ. ಅದನ್ನೂ ಸಹ ಇಲ್ಲಿ ಮಾನ್ಯ ಸದಸ್ಯರು ಏಕೆ ಹೇಳಲಿಲ್ಲ ?

ಶ್ರೀ ಎಸ್. ಎಂ. ಶಿರಾಳ್ಳಿ ಚಂದ್ರಶೇಖರ್.— ಸುಮಾರು ಒಂದು ಕೋಟಿ ಜನ ಈ ಕರ್ನಾಟಕ ದಲ್ಲಿ ಋಣಮುಕ್ತರಾಗುತ್ತಾರೆಂಬ ಮಾತನ್ನು ಅವರು ಹೇಳಿದ್ದನ್ನು ಕೇಳಿ ನನ್ನ ಕಿವಿಗೆ ಬಹಳ ಸಂತೋಷವಾಯಿತು.

ಶ್ರೀ ಬಿ. ಪುಟ್ಟಸ್ವಾಮಯ್ಯ.— ಬಾಕಿ ಇಂದ್ರಿಯಗಳಿಗೆ ಆನಂದವಾಗಲಿಲ್ಲವೋ ? ಬರೀ ಕಿವಿಗೇ ಆನಂದವಾಯಿತೇ ?

ಶ್ರೀ ಎಸ್. ಎಂ. ಶಿರಾಳ್ಳಿ ಚಂದ್ರಶೇಖರ್.— ಆದ್ದರಿಂದಲೇ ನಮ್ಮ ಸರ್ಕಾರದವರು ಈಗ ಕೆಲವಾರು ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದಾರೆ. ಅದಕ್ಕಾಗಿ ಒಂದು ವ್ಯವಸ್ಥೆಯನ್ನು ಮಾಡಿ ದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಮೂಲಭೂತವಾದ ಸಮಸ್ಯೆ ಅಂದರೆ ಋಣ ಪರಿಹಾರ. ನನಗೆ ತಿಳಿದಿರುವ ಹಾಗೆ ಇವತ್ತು ಹಳ್ಳಿಗಳಿಗೆ ಹೋಗಿ ಯಾರಾದರೂ ಬಡವರು ಕೇವಲ 10 ರೂಪಾಯಿಗಳನ್ನು ಕೇಳಿದರೆ ಕೊಡುವುದಕ್ಕೆ ಯಾರೂ ತಯಾರಿಲ್ಲ. ಆದ್ದರಿಂದ ಇದರ ಬಗ್ಗೆ ಶೋಷಣೆಯ ಕ್ರಮಗಳನ್ನು ನಮ್ಮ ಸರ್ಕಾರದವರು ಮಾಡುತ್ತಿದ್ದಾರೆ. ಯಾವನಾದರೂ ತನ್ನ ಸಂಸಾರದಲ್ಲಿ, ತನ್ನ ಮನೆಯಲ್ಲಿ ಯಾರಿಗಾದರೂ ಕಾಯಿಲೆ ಇದ್ದರೆ ಅದಕ್ಕೆ ಏನಾದರೂ ವೈದ್ಯರ ಚಿಕಿತ್ಸೆ ಮಾಡಿಸಿಕೊಳ್ಳಬೇಕೆಂದರೆ, ಕೇವಲ 10 ರೂಪಾಯಿಗಳನ್ನು ಯಾರನ್ನಾದರೂ ಕೇಳಿದರೆ ಅದನ್ನೂ ಸಹ ಕೊಡುವುದಕ್ಕೆ ಯಾರೂ ತಯಾರಿಲ್ಲ. ಇಂತಹ ಒಂದು ಹಂತದಲ್ಲಿ ಸರ್ಕಾರ ಸೂಕ್ತ ವಾದ ಕಟ್ಟಳೆಯನ್ನು ಮಾಡದೇ ಹೋದರೆ ನಿಜವಾಗಿಯೂ ಜನಗಳಿಗೆ ಬಹಳ ತೊಂದರೆಯಾಗುತ್ತ ದೆನ್ನುವ ಅಭಿಪ್ರಾಯ ನಮಗೆ ಬಂದಿದೆ.

5-10 P.M.

ಬೇರೆ ಪ್ರಾರಮ್ಭನ ಹಬ್ಬಕ್ಕೋ, ಅಥವಾ ಮದುವೆಯ ಖರ್ಚಿಗಾಗಿ ಸಾಲ ತೆಗೆದುಕೊಳ್ಳ ತಕ್ಕಂಥದ್ದು ಬೇರೆ. ಮದುವೆಯನ್ನು ಬೇಕಾದರೆ ಯಾವುದೋ ಒಂದು ದೇವಸ್ಥಾನಕ್ಕೆ ಹೋಗಿ ತಾಳಿ ಕಟ್ಟಿಕೊಂಡು ಬಂದರೆ ಆಗುತ್ತದೆ. ಆದರೆ ಅತ್ಯಂತ ಅವಶ್ಯಕವಾಗಿ ಖರ್ಚು ಮಾಡುವಾಗ, ಸಾಲಸೋಲಗಳಿಗೆ ಒಂದು ಸರಿಯಾದಂಥ ವ್ಯವಸ್ಥೆ ಮಾಡಬೇಕಾಗುತ್ತದೆ. ಇವತ್ತು ನಾವು ಸಹಕಾರಿ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಕೊಡಲಿಕ್ಕೆ ಕಾನೂನು ಮಾಡಿದ್ದೇವೆ. ಆದರೆ ಈ ಕಾನೂನು ಮಾಡಿದ್ದರೂ ಕೂಡ ಸಾರ್ವಜನಿಕರಿಗೆ ತಿಳಿಯುವಂತ ಸರಿಯಾದಂಥ ಪ್ರಚಾರ ಕಾರ್ಯ ವಾಗಿಲ್ಲವೆಂದು ನಾನು ತಿಳಿಯುತ್ತೇನೆ. ಸಹಕಾರ ಸಂಸ್ಥೆಗಳಿಂದ ಏನು ಉಪಯೋಗವಾಗುತ್ತ ದೆಂದು ನಮ್ಮ ದೇಶದ ಎಷ್ಟೋ ಜನ ತಿಳಿದುಕೊಂಡಿಲ್ಲ. ನಮ್ಮ ದೇಶದಲ್ಲಿ ಇವತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳು ಇವೆ, ಇದ್ದರೂ ಕೂಡ ಆ ಬ್ಯಾಂಕಿನಲ್ಲಿ ವ್ಯವಹಾರ ಮಾಡತಕ್ಕಂಥವರು ಶ್ರೀ ಸಾಮಾನ್ಯ ಮನುಷ್ಯರಲ್ಲ ಕೇವಲ ಕೆಲವೇ ಶ್ರೀಮಂತ ವರ್ಗದವರು. ಅದು ಎಲ್ಲರಿಗಾಗಿ ಇರತಕ್ಕಂಥದೆಂದು ಇನ್ನೂ ಶ್ರೀ ಸಾಮಾನ್ಯರಿಗೆ ತಿಳುವಳಿಕೆ ಬಂದಿಲ್ಲ. ಆದುದರಿಂದ ಈ ಹಿನ್ನೆಲೆ ಯಲ್ಲಿ ನಾವು ಇದರ ಬಗ್ಗೆ ಸಾಕಷ್ಟು ಪ್ರಚಾರ ಮಾಡಬೇಕಾಗುತ್ತದೇನೋ. ಅಧ್ಯಕ್ಷರೇ, ಸಹಕಾರ ಮಂತ್ರಿಗಳು ಪದೇ ಪದೇ ಹೇಳುತ್ತಿದ್ದರು ಇನ್ನು ಒಂದು ತಿಂಗಳೊಳಗಾಗಿ ಎಲ್ಲಾ ಗ್ರಾಮಾಂತರಗಳಲ್ಲೂ ಬದಲಿ ವ್ಯವಸ್ಥೆ ಮಾಡುತ್ತೇವೆಂದು ಹೇಳಿದ್ದರು. ಅದನ್ನು ನಾನು ಸ್ವಾಗತಿಸುತ್ತೇನೆ. ಇವತ್ತು ಪಿ. ಎಲ್. ಡಿ. ಜಿಲ್ಲಾ ಬ್ಯಾಂಕುಗಳು, ಇನ್ನು ಕೆಲವು ಬ್ಯಾಂಕ್‌ಗಳನ್ನು ರಾಕ್ಷಸೀ ಪ್ರವೃತ್ತಿಯನ್ನು ಇಟ್ಟುಕೊಂಡಿರತಕ್ಕಂಥವರು ಕೈಯಲ್ಲಿಟ್ಟುಕೊಂಡಿದ್ದಾರೆ. ಆದುದರಿಂದ ಅಂಥವರ ಕೈಯಿಂದ ಕೂಡಲೇ ಅದನ್ನು ತಪ್ಪಿಸುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಸಹಕಾರಿ ಸಚಿವರು ಅನೇಕ ಸಾರಿ ಹೇಳಿಕೆಗಳನ್ನು ಕೊಟ್ಟಿದ್ದಾರೆ, ಈ ಬ್ಯಾಂಕುಗಳಿಂದ ಸಾಲಸೌಲಭ್ಯಗಳನ್ನು ಈ ದೇಶದಲ್ಲಿ ಕೆಲವೇ ಕೆಲವು ಕುಟುಂಬಗಳು ಪಡೆದುಕೊಂಡು ಬಿಟ್ಟಿದ್ದಾರೆಂದು, ಹಾಗೂ ಸಾಮಾನ್ಯ ವರ್ಗದ ಜನತೆಗೆ ಸರಿಯಾಗಿ ಹಂಚಿಕೆಯಾಗಿಲ್ಲ ಎನ್ನುವ ಮಾತನ್ನು ಅನೇಕ ಸಾರಿ ಹೇಳಿದ್ದಾರೆ. ಆದರೂ ಕೂಡ ಅವರು ಕಠೋರವಾದ ನೀತಿಯನ್ನು ಅನುಸರಿಸಿ ಅಂಥವರ ಆಸ್ತಿಪಾಸ್ತಿಗಳನ್ನು ಮುಟ್ಟುಗೋಲು ಹಾಕುವುದಕ್ಕೆ ಏತಕ್ಕೆ ಸಿದ್ಧರಾಗಿಲ್ಲ ಎನ್ನುವುದು ನನಗಿನ್ನೂ ಅರ್ಥವಾಗಿಲ್ಲ. ಇವತ್ತು ನಾವು ಯಾವ ನೀತಿಯನ್ನಿಟ್ಟುಕೊಂಡು ಇಂಥ ಪಿ. ಎಲ್. ಡಿ ಬ್ಯಾಂಕ್‌ಗಳನ್ನು, ಜಿಲ್ಲಾ ಬ್ಯಾಂಕ್‌ಗಳನ್ನು ಕಟ್ಟಿದೆವೋ ಆ ನೀತಿಯು ಸಫಲವಾಗುತ್ತಿಲ್ಲ. ಎನ್ನುವ ಮಾತನ್ನು ಎಲ್ಲಾ ಬುದ್ಧಿಜೀವಿಗಳೂ ಒಪ್ಪುತ್ತಾರೆಂದು ತಿಳಿದುಕೊಂಡಿದ್ದೇನೆ. ಏತಕ್ಕೆ ಇಂಥ ಬ್ಯಾಂಕ್‌ಗಳನ್ನು ಇನ್ನೂ ಸೂಪರ್ ಸೀಡ್ ಮಾಡಿ ಸರ್ಕಾರ ತನ್ನ ವಶಕ್ಕೆ ತೆಗೆದುಕೊಳ್ಳಬಾರದೆಂದು ಕೇಳುತ್ತೇನೆ.

ಇನ್ನು ಭೂ ಸುಧಾರಣಾ ಕಾನೂನಿನ ಪ್ರಕಾರ ಪ್ರತಿಯೊಂದು ತಾಲ್ಲೂಕಿನಲ್ಲೂ ನ್ಯಾಯ ಮಂಡಲಗಳನ್ನು ರಚನೆ ಮಾಡಿದ್ದಾರೆ. ನಾನು ಕೇಳುತ್ತೇನೆ, ಉಡುಪಿ ತಾಲ್ಲೂಕಿನಲ್ಲಿ ಒಂದು ಜನತಾ ನ್ಯಾಯ ಮಂಡಲಿಯಿದ್ದು ಅದು ಯಾವಾಗ ಜನತೆಗೆ ನ್ಯಾಯವನ್ನು ದೊರಕಿಸಿ ಕೊಡಲಿಕ್ಕೆ ಸಾಧ್ಯವಿದೆ? ಅಲ್ಲಿ ಸುಮಾರು 40 ಸಾವಿರ ಪಿಟಿಷನ್‌ಗಳಿವೆ. ಅಷ್ಟು ಪಿಟಿಷನ್‌ಗಳನ್ನು ವಿಲೇವಾರಿ ಮಾಡಬೇಕಾದರೆ ಎಷ್ಟೋ ವರ್ಷ ಹಿಡಿಸುತ್ತದೆ. ಆ ದೃಷ್ಟಿಯಿಂದ ನಮ್ಮ ಘನ ಸರ್ಕಾರ ದವರು ಆದಷ್ಟು ಬೇಗ 2-3 ನ್ಯಾಯ ಮಂಡಲಗಳನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಹಾಗೆ ಮಾಡದೇ ಹೋದರೆ ಯಾರಿಗೂ ನ್ಯಾಯ ದೊರಕದಂತಾಗುವುದಿಲ್ಲ. ಇತ್ತ ಕಡೆ ರೈತರಿಗೂ ನ್ಯಾಯ ದೊರಕದಂತಾಗುವುದಿಲ್ಲ, ಭೂ ಮಾಲೀಕರಿಗೂ ನ್ಯಾಯ ದೊರಕದಂತಾಗುವು ದಿಲ್ಲ. ಈ ಸಮಸ್ಯೆ, ಜ್ವಲಂತವಾದಂಥ ಸಮಸ್ಯೆ, ಹಾಗೆ ಉಳಿಯಬಾರದು ಅದು ಆದಷ್ಟು ಬೇಗ ತೀರ್ಮಾನವಾಗಬೇಕು ಎನ್ನುವುದೇ ನನ್ನ ವಾದ. ಪ್ರತಿಯೊಂದು ಜನತಾ ನ್ಯಾಯ ಮಂಡಲಿಯಲ್ಲಿ ತೀರ್ಮಾನ ಕೊಟ್ಟರೂ ಕೂಡ ಹೈಕೋರ್ಟಿಗೆ ಹೋಗಿ ಸ್ಟೇ ಕೊಡತಕ್ಕಂಥ ವ್ಯವಸ್ಥೆ ನಡೆಯುತ್ತಿದೆ ಇದು ಸರಿಯೇ ಇರಲಿ, ತಪ್ಪೇ ಇರಲಿ ಅವರು ಹೈಕೋರ್ಟಿಗೆ ಹೋಗು ತ್ತಾರೆ, ಸ್ಟೇ ತರುತ್ತಾರೆ. ಹೀಗಾಗಿ ರೈತರಿಗೆ ಏನು ನ್ಯಾಯ ದೊರಕಬೇಕಾಗಿತ್ತೋ ಆ ನ್ಯಾಯ ದೊರಕುತ್ತಿಲ್ಲ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲಿಕ್ಕೆ ಬಯಸುತ್ತೇನೆ. ಇಷ್ಟೇ

ಅಲ್ಲ ನಮ್ಮ ಸರ್ಕಾರದಿಂದ ಹಲವಾರು ಆದೇಶಗಳು ಮಂಡಲಿಗೆ ಬರುತ್ತಲೇ ಇರುತ್ತವೆ. ಇದರಿಂದ ಎಷ್ಟು ತೊಂದರೆಯಾಗುತ್ತದೆಂದರೆ ಅಸಿಸ್ಟೆಂಟ್ ಕಮೀಷನರ್‌ರವರೇ ನ್ಯಾಯ ಮಂಡಲಿಯ ಛೇರ್ಮನ್ ಆಗಿರುತ್ತಾರೆ. ಅವರು ಸರ್ಕಾರೀ ನೌಕರರು ಅವರಿಗೆ ಮೇಲಾಧಿಕಾರಿಗಳಿಂದ ಆದೇಶ ಬಂದ ಕೂಡಲೇ ಅವರು ಒಂದು ಹೆಜ್ಜೆ ಕೂಡ ಮುಂದಕ್ಕೆ ಹೋಗುವುದಿಲ್ಲ ಅವರಿಗೆ ಧೈರ್ಯವೂ ಇರುವುದಿಲ್ಲ, ಇದನ್ನು ನಾನು ನ್ಯಾಯ ಮಂಡಲಿಯ ಸದಸ್ಯನಾಗಿರುವುದರಿಂದ ನನ್ನ ಸ್ವಂತ ಅನುಭವದಿಂದ ಹೇಳುತ್ತಿದ್ದೇನೆ. ಆದುದರಿಂದ ಏನೇನು ಕಾನೂನಿನಲ್ಲಿ ಸೇರಿಸಬೇಕೋ ಅದನ್ನೆಲ್ಲಾ ಒಟ್ಟಿಗೆ ಸೇರಿಸಿ ಕಳುಹಿಸಿದರೆ ಸೂಕ್ತವಾಗುತ್ತದೆಂದು ನನಗೆ ಕಾಣುತ್ತದೆ. ಪದೇ ಪದೇ ಆದೇಶಗಳನ್ನು ಕಳುಹಿಸುತ್ತಿದ್ದರೆ ಅದರಿಂದ ಬಹಳ ಅನಾನುಕೂಲವಾಗುತ್ತದೆ. ಇವತ್ತು ನಮ್ಮ ಸರ್ಕಾರ ಸಾಧನೆ ಮಾಡಿರುವುದನ್ನು ಪಟ್ಟಿ ಮಾಡಿ ಹೇಳುವುದಾದರೆ ಇಷ್ಟು ಕೆಲಸಕಾರ್ಯಗಳು ಮತ್ತೆ ಯಾವ ಕಾಲದಲ್ಲೂ ಕೂಡ ಆಗಿಲ್ಲವೆಂದು ಹೇಳಬಹುದು. ಒಂದು ಕಾಳಿ ನದಿ ಯೋಜನೆಯೇ ಆಗಲೀ ಅಥವಾ ಮಿನಿಮಂ ನೀಡ್ಸ್ ಪ್ರೋಗ್ರಾಮೇ ಆಗಲಿ, ವಿದ್ಯುಚ್ಛಕ್ತಿಯನ್ನು ಸರಬರಾಜು ಮಾಡುವ ವಿಚಾರದಲ್ಲಿಯೇ ಆಗಲೀ, ಕುದುರೆಮುಖ ಯೋಜನೆಯ ವಿಚಾರದಲ್ಲಿ ಆಗಲೀ ಇಂಥ ಯೋಜನೆಗಳಿಗೆ ಸಂಸವಾದವಾಗಿರತಕ್ಕಂಥ ಯಾವ ಕೆಲಸವೂ ಕೂಡ ಹಿಂದೆ ಆಗಿಲ್ಲವೆಂದು ಈ ಸದನದಲ್ಲಿ ಹೇಳುವುದಕ್ಕೆ ಬಯಸುತ್ತೇನೆ

ಇನ್ನು ಅರಣ್ಯ ಇಲಾಖೆಯ ಬಗ್ಗೆ ಒಂದು ಮಾತನ್ನು 4 ವರ್ಷಗಳಿಂದಲೂ ಹೇಳುತ್ತಲೇ ಬಂದಿದ್ದೇನೆ. ನಾನು ಪುನಃ ಅದೇ ಮಾತನ್ನು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.— ಅರಣ್ಯ ರೋಧನ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.— ಅದು ಅರಣ್ಯ ರೋಧನವಾದರೂ ಚಿಂತೆ ಇಲ್ಲ. ಇದು ಮಾನವೀಯತೆಯ ಪ್ರಶ್ನೆ. ಸುಮಾರು 20 ಸಾವಿರ ಕುಟುಂಬಗಳು ನನ್ನ ಕ್ಷೇತ್ರದಲ್ಲಿದ್ದಾರೆ. ಅರಣ್ಯದ ಜಮೀನು ತಮ್ಮ ಸ್ವಂತ ಸ್ವತ್ತು ಎಂದು ತಿಳಿದುಕೊಂಡು ಕಳೆದ 15 ವರ್ಷಗಳಿಂದಲೂ ಇದ್ದುಕೊಂಡು ಬಂದಿದ್ದರು. ಆದರೆ ಇವತ್ತು ಅರಣ್ಯ ಜಮೀನನ್ನು ಒಂದು ಇಂಚೂ ಕೊಡುವುದಿಲ್ಲ ಎನ್ನತಕ್ಕಂಥ ಕಾನೂನು ಮಾಡಿಬಿಟ್ಟಿದ್ದೇವೆ. ಈಗ ಅಂಥ ಕುಟುಂಬಗಳ ಗತಿ ಏನು ? ಅವರು ಏನು ಟಾಟಾ, ಬಿರ್ಲಾಗಳು ಅಲ್ಲ. ಅವರೆಲ್ಲರೂ ಗರೀಬರು ಅವರು ಶರಾವತಿ ಯೋಜನೆಗಾಗಿ ದೇಶಕ್ಕಾಗಿ ತಮ್ಮ ಜಮೀನುಗಳನ್ನು ತ್ಯಾಗ ಮಾಡಿದ್ದಾರೆ. ಅವರ ಜಮೀನುಗಳೆಲ್ಲಾ ನೀರಿನಲ್ಲಿ ಮುಳುಗಡೆಯಾಗಿವೆ. ಅಂಥ ಜನಕ್ಕೆ ನಾವು ಇಷ್ಟಾದರೂ ಪರಿಹಾರ ಕೊಟ್ಟಿಲ್ಲ. ನಾವು ಇಷ್ಟು ಜನ ಶಾಸಕರು ಇದ್ದಾಗ್ಯೂ ಸರ್ಕಾರಕ್ಕೆ ಅರ್ಥವಾಗುವಂತೆ ಹೇಳುವುದಕ್ಕೆ ಆಗುತ್ತಿಲ್ಲವೆಂದರೆ ಅದು ನಮ್ಮ ದೌರ್ಭಾಗ್ಯವೋ ಏನೋ ಅರ್ಥವಾಗುತ್ತಿಲ್ಲ. ದೊಡ್ಡ ಹಿಡುವಳಿದಾರರು ಸಾಗುವಳಿ ಮಾಡಿಕೊಂಡು ಯಾರು ಬಂದಿದ್ದಾರೋ ಅಂಥವರಿಗೆ ಕೊಡಬೇಕೆಂದು ಹೇಳುತ್ತಿಲ್ಲ. ಅಂಥದರಲ್ಲಿ ಕಾರ್ ಜಿಲ್ಲೆಯೂ ಒಂದು ಎಂದು ಮಾನ್ಯ ಗುಂಡೂರಾಯರು ಹೇಳುತ್ತಾರೆ. ಅಂಥವರಿಗೆ ಪರಿಹಾರ ಕೊಡಬೇಕೆಂದು ಹೇಳುತ್ತಿಲ್ಲ. ಯಾರು ಯಾರು ಜೀವನೋಪಾಯಕ್ಕೆ ಏನೂ ಇಲ್ಲದೇ, ಇದೊಂದನ್ನೇ ನಂಬಿಕೊಂಡು ಬಂದಿರತಕ್ಕಂಥ ರೈತರು ಇರುತ್ತಾರೋ ಅಂಥವರಿಗೆ ಜಮೀನು ಕೊಡಲಿಕ್ಕೆ ವ್ಯವಸ್ಥೆ ಮಾಡಬೇಕು ಆ ರೀತಿ ಮಾಡಿ ಪುಣ್ಯ ಕಟ್ಟಿಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ನನ್ನ ದೌರ್ಭಾಗ್ಯ ನನ್ನ ತಾಲ್ಲೂಕಿನಲ್ಲಿ ಸುಮಾರು ಅರ್ಧಭಾಗ ಶರಾವತಿಯಲ್ಲಿ ಮುಳುಗಿ ಹೋಯಿತು. ಇನ್ನು ವರಾಹಿ ಯೋಜನೆಯಲ್ಲಿ ಸ್ವಲ್ಪ ಮುಳುಗಡೆಯಾಗುವುದಿದೆ. ಇಷ್ಟು ತ್ಯಾಗ ಮಾಡಿರತಕ್ಕಂಥ ನಮಗೆ ಜನ ಬೆನ್ನು ತಟ್ಟಲಿಲ್ಲವಲ್ಲವೆಂದು ಬೇಜಾರು ಆಗುತ್ತಿದೆ. ಇವತ್ತು ಮುಳುಗಡೆ ಆಗತಕ್ಕಂಥ ಜನತೆಗೆಬೇರೆ ಯಾವುದಾದರೂ ಜೀವನೋಪಾಯಕ್ಕೆ ವ್ಯವಸ್ಥೆ ಮಾಡತಕ್ಕಂಥದ್ದು ಸರ್ಕಾರದವರ ಕರ್ತವ್ಯ.

ಮಾನ್ಯ ಚನ್ನಬಪ್ಪನವರು ಇಲ್ಲಿಯೇ ಇದ್ದಾರೆ. ಸ್ವಾಮಿ, ಗ್ರಾಮಾಂತರ ಪ್ರದೇಶಗಳಲ್ಲಿ ರಸ್ತೆಗಳನ್ನು ತಾವು ಮಾಡಿಸಿದ್ದೀರಿ, ಯಾವ ಕಾಲದಲ್ಲೂ ಕೂಡ ಆಗದೇ ಇರುವಷ್ಟು ಕೆಲಸ ಮಾಡಿಸಿದ್ದೀರಿ ಅದಕ್ಕೆ ನಾವು ತಮಗೆ ಶಹಬಾಸಗಿರಿ ಕೊಡುತ್ತೇವೆ. ಆದರೆ ಮಾಡಿಸಿರತಕ್ಕಂಥ ರಸ್ತೆಗಳನ್ನು ಸರಿಯಾಗಿ ನೋಡಿಕೊಳ್ಳತಕ್ಕಂಥ ವ್ಯವಸ್ಥೆ ಇಲ್ಲವಲ್ಲವೆಂದು ಬಹಳ ದುಃಖದಿಂದ ಹೇಳುತ್ತೇನೆ. ತಾವು ಲಕ್ಷಗಟ್ಟಲೆ, ಕೋಟಿಗಟ್ಟಲೆ ಖರ್ಚು ಮಾಡಿ ರಸ್ತೆಗಳನ್ನು ಮಾಡಿಸಿರುತ್ತೀರಿ. ಆದರೆ

ಮುಂದಿನ ವರ್ಷದಷ್ಟು ಹೊತ್ತಿಗೆ ಅಲ್ಲಿ ರಸ್ತೆಗಳು ಇತ್ತೋ ಇಲ್ಲವೋ ಎನ್ನುವಷ್ಟು ಅನುಮಾನ ಬರುತ್ತದೆ. ಅದಕ್ಕೆ ಕಾರಣ ವಾದರೂ ಇಷ್ಟೆ ಮಲೆನಾಡು ತಾಲ್ಲೂಕಿನಲ್ಲಿ ಸರಿಯಾಗಿ ಆಸ್ಫಾಲ್ಟ್ ಹಾಕಿ ರಸ್ತೆಗಳನ್ನು ಮಾಡಿರುವುದಿಲ್ಲ. ಅಲ್ಲಿ 250 ಇಂಚುಗಳ ಮಳೆ ಆಗತಕ್ಕಂಥ ಪ್ರದೇಶ. ಅಲ್ಲಿ ಲಕ್ಷಗಟ್ಟಲೆ, ಕೋಟಿಗಟ್ಟಲೆ ರೂಪಾಯಿಗಳನ್ನು ಹಾಕಿ ಖರ್ಚುಮಾಡಿ ರಸ್ತೆಗಳನ್ನು ಮಾಡಿದರೂ ಕೂಡ ಬರುವ ವರ್ಷದ ಅಷ್ಟು ಹೊತ್ತಿಗೆ ರಸ್ತೆ ಅಗಿತ್ತೋ ಇಲ್ಲವೋ ಎನ್ನುವ ಅನುಮಾನ ಬರುವ ಹಾಗೆ ಆಗಿರುತ್ತದೆ. ಆದುದರಿಂದ ಫೇಸ್ಡ್ ಪ್ರೋಗ್ರಾಮ್ ಹಾಕಿಕೊಂಡು ಎಲ್ಲೆಲ್ಲಿ ಮಳೆ ಬೀಳುವ ಪ್ರದೇಶವಿದೆಯೋ ಅಂಥ ಕಡೆಗಳಲ್ಲಿ ಆಸ್ಫಾಲ್ಟ್ ಸರಿಯಾಗಿ ಹಾಕಿ ರಸ್ತೆಗಳನ್ನು ಮಾಡುವ ಹಾಗೆ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಸ್ವಾಮಿ, ಈ ಬಡ್ಜೆಟ್ಟಿನಲ್ಲಿ ಸೇರಿರತಕ್ಕ ಸೇತುವೆಗಳನ್ನು ಟೆಂಡರ್ ಕಾಲ್‌ಫರ್ ಮಾಡುವ ಸಮಯದಲ್ಲಿ ಸರ್ಕಾರಿ ಆಜ್ಞೆ ಬಂದಿದೆ ಅದನ್ನು ತೆಗೆದುಕೊಳ್ಳುವುದು ಬೇಡ ಎಲ್ಲವನ್ನೂ ಬ್ರಿಡ್ಜ್ ಕಾರ್ಪೊರೇಷನ್‌ಗೆ ಸೇರಿಸಿದ್ದೇವೆ ಎಂದು. ಈ ಬ್ರಿಡ್ಜ್ ಕಾರ್ಪೊರೇಷನ್ ಅವಸ್ಥೆ ಏನಾಗಿದೆ ಅದು ನನಗೆ ತಿಳಿದಿಲ್ಲ. ಅನೇಕ ಸೇತುವೆಗಳು ಕೆಲಸ ಪ್ರಾರಂಭ ಮಾಡಬೇಕಾದಂಥ ಸಮಯದಲ್ಲಿ ನಿಲ್ಲಿಸಿದ್ದಾರೆ. ನಮಗೆ ಜನರು ಬಂದು ಕೇಳುತ್ತಾರೆ ಬಡ್ಜೆಟ್ಟಿನಲ್ಲಿ ಸೇರಿಸಿರತಕ್ಕಂತ ಕೆಲಸಗಳನ್ನು ನಿಲ್ಲಿಸಿದ್ದಾರೆಯಲ್ಲ ಎಂದು. ಈ ದೃಷ್ಟಿಯಿಂದ ನಾನು ಅರಿಕೆಮಾಡಿಕೊಳ್ಳುವುದೇನೆಂದರೆ ಹೊಸೇ ಪಕ್ಷ ಬಡ್ಜೆಟ್ಟಿನಲ್ಲಿ ಇರತಕ್ಕ ಕೆಲಸವನ್ನಾದರೂ ಕೂಡ ಮಾಡಿಸಬೇಕು ಎಂದು ಅರಿಕೆ ಮಾಡಿಕೊಳ್ಳುತ್ತೇನೆ. ಕೊನೆಯದಾಗಿ ಹೇಳುವುದಾದರೆ ಸರ್ಕಾರದಿಂದ ನೀರಾವರಿ ಯೋಜನೆಯ ಕೆಲಸ ಕಾರ್ಯಗಳು ಅನೇಕ ಆಗಿವೆ ಅದರ ಬಗ್ಗೆ ನಾನು ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಉದಾಹರಣೆಗೆ ನಮ್ಮ ಜಿಲ್ಲೆಯಲ್ಲಿ ಇಪ್ಪತ್ತು ವರ್ಷದಿಂದಲೂ ಆಗದೇ ಇದ್ದಂಥ ಕೆಲವು ನೀರಾವರಿ ಯೋಜನೆಗಳನ್ನು ಈ ಸರ್ಕಾರ ಬಂದಮೇಲೆ ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ನನ್ನ ವೈಯಕ್ತಿಕ ಮೆಚ್ಚುಗೆಯನ್ನು ವ್ಯಕ್ತಪಡಿಸುತ್ತೇನೆ. ಅಲ್ಲದೆ ಮಿನಿಮಮ್ ನೀಡ್ ಪ್ರೋಗ್ರಾಂನಲ್ಲಿ ಅನೇಕ ಯೋಜನೆಗಳನ್ನು ಮಾಡುತ್ತಿದ್ದಾರೆ. ಅದಕ್ಕೆ ನನ್ನ ಮೆಚ್ಚುಗೆಯನ್ನು ವ್ಯಕ್ತಪಡಿಸಿ ನನಗೆ ವಂದನಾನಿರ್ಣಯದ ಮೇಲೆ ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟಂತಹ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಆರ್. ಶ್ರೀನಿವಾಸಲು ನಾಯುಡು. — (ಶಾಂತಿನಗರ) ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ರಾಜ್ಯಪಾಲರು ರಾಜ್ಯದ ವಿಧಾನಮಂಡಲದಲ್ಲಿ ಮಾಡಿದಂಥ ಭಾಷಣದ ಮೇಲೆ ಯಾವ ಒಂದು ವಂದನಾನಿರ್ಣಯವನ್ನು ತಂದಿದ್ದಾರೆ ಇದನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತಾ ಇದೇ ಸಂದರ್ಭದಲ್ಲಿ ಸೂಕ್ತವಾದ ನಾಲ್ಕು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಇದುವರೆಗೂ ನನ್ನ ಹಿಂದೆ ಭಾಷಣ ಮಾಡಿದಂತಹವರು ಅವರದೇ ಆದಂಥ ಭಾಷೆಯಲ್ಲಿ, ಅವರದೇ ಆದಂಥ ಶೈಲಿಯಲ್ಲಿ ಈ ಸದನದ ಮುಂದೆ ಕೆಲವು ವಿಷಯಗಳನ್ನು ಇಟ್ಟರು, ಅದರಲ್ಲೂ ಸಹ ವಿರೋಧ ಪಕ್ಷದವರು ಬಹು ಕಟುವಾಗಿ ಟೀಕೆ ಮಾಡಿದರು. ತಮಗೆ ಗೊತ್ತಿರುವ ಹಾಗೆ ಮುಖ್ಯವಾಗಿ ಈಗಿನ ಪರಿಸ್ಥಿತಿಯಲ್ಲಿ ಎರಡು ಅಂಶಗಳು ಇವೆ. ಒಂದನೆಯ ಅಂಶ ಏನು ಎಂದರೆ ನಮ್ಮ ದೇಶದಲ್ಲಿ ಇರತಕ್ಕ ತುರ್ತುಪರಿಸ್ಥಿತಿ, ಎರಡನೆಯದು ಇಪ್ಪತ್ತು ಅಂಶಗಳ ಕಾರ್ಯಕ್ರಮ. ಈ ಇಪ್ಪತ್ತು ಅಂಶಗಳ ಕಾರ್ಯಕ್ರಮ ಅಂದರೆ ಸುಮಾರು ಕಾಂಗ್ರೆಸ್ ಇಬ್ಭಾಗ ಆದ ಮೇಲೆ ಒಂದು ಟೈಮ್ ಬಾಂಡ್ ಪ್ರೋಗ್ರಾಂ ಎಂದು ಏನು ಕೇಳುತ್ತಾರೆ ಇದನ್ನು ಮಾಡಲಿಕ್ಕೆ ಪ್ರಯತ್ನ ಮಾಡುತ್ತೇವೆ. ಅದು ಹತ್ತು ಪಾಯಿಂಟ್ ಪ್ರೋಗ್ರಾಂ ಆಗಬಹುದು ಅಥವಾ ಇಪ್ಪತ್ತು ಪಾಯಿಂಟ್ ಪ್ರೋಗ್ರಾಂ ಆಗಬಹುದು We are having a time bound programme before us. ಜೊತೆಗೆ ಡಿಸ್ಟ್ರಿಬ್ಯೂಷನ್ ಅಂಡ್ ಪ್ರೊಡಕ್ಷನ್, ಅದು ವ್ಯವಸಾಯದಲ್ಲಿ ಆಗಬಹುದು, ಅಥವಾ ಕೈಗಾರಿಕೆಯಲ್ಲಿ ಆಗಬಹುದು ಇವತ್ತಿನ ದಿವಸ ನೊಂದ ಜನಕ್ಕೆ ಅನುಕೂಲವಾಗುವುದಕ್ಕೆ, ಸುವ್ಯವಸ್ಥಿತ ರೀತಿಯಲ್ಲಿ ಆಹಾರ ಧಾನ್ಯಗಳನ್ನು ಹಂಚುವಿಗೆ ಇಂತಹ ಪರಿಸ್ಥಿತಿಯಲ್ಲಿ ತುರ್ತು ಪರಿಸ್ಥಿತಿಯನ್ನು ತಂದಿದ್ದಾರೆ ಎನ್ನುವುದನ್ನು ಮರೆಯಬಾರದು. ಈಗ ಅನೇಕ ಸದಸ್ಯರು ಅವರವರ ಭಾಷೆಯಲ್ಲಿ ಹೇಳಿದ್ದಾರೆ. ಇನ್ನು ಈ ತುರ್ತು ಪರಿಸ್ಥಿತಿ ಏಕೆ ಬಂತು, ಅಂತರ ರಾಷ್ಟ್ರೀಯ ಪರಿಸ್ಥಿತಿ ಏನಾಗಿತ್ತು ಇದನ್ನು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ನಮ್ಮ ರಾಷ್ಟ್ರದ ನಾಯಕಿಯವರಾದ ಶ್ರೀಮತಿ ಇಂದಿರಾ ಗಾಂಧಿಯವರು ಜನರಲ್ಲಿ ದೊಂಬಿ, ಗೊಂದಲ

ಹಬ್ಬಬಾರದು ಎಂದು ಈ ತುರ್ತು ಪರಿಸ್ಥಿತಿ ಘೋಷಣೆ ತಂದಿದ್ದಾರೆ. ನಮ್ಮ ರಾಜ್ಯಪಾಲರು ಭಾಷಣದಲ್ಲಿ ಹೇಳಿದ ಹಾಗೆ ಜನರು ನಮ್ಮನ್ನು ಏನು ನಿರೀಕ್ಷಿಸುತ್ತಾರೆ ಅದನ್ನು ನಾವು ನೋಡಬೇಕು. ಜನರಿಗೆ ತಮ್ಮಿಂದ ಸ್ಪಷ್ಟವಾದ ದಿಟ್ಟವಾದ, ಅಚಲವಾದ ಮಾರ್ಗದರ್ಶನ ನೀಡಬೇಕು ಎಂದು ಅವರು ಒಂದು ಮಾತನ್ನು ಹೇಳಿದ್ದಾರೆ. ಏಕೆ ಈ ಮಾತನ್ನು ಹೇಳಿದರು ಎಂದರೆ ದೇಶದಲ್ಲಿ ಡಿಸಿಪ್ಲಿನ್, ಡೆಡಿಕೇಷನ್ ಮತ್ತು ಸರ್ವೀಸಸ್ ಈ ಮೂರು ಮಾತುಗಳನ್ನು ಪ್ರತಿಯೊಬ್ಬ ಭಾರತೀಯನು ತಿಳಿದಿರಬೇಕೆಂದು ಹೇಳಿದ್ದಾರೆ. ಸುಮಾರು ಎರಡು ವರ್ಷಗಳ ಹಿಂದೆ ರಾಜಕೀಯದ ಹಿನ್ನೆಲೆಯ ಚರಿತ್ರೆಯನ್ನು ನೋಡಿದರೆ ಒಂದು ವಿಧವಾದಂಥ ಕ್ರಾಂತಿಯನ್ನು ಎಬ್ಬಿಸಬೇಕು ಎಂದು ಮಾಡಿದ್ದರು. ದೇಶದಲ್ಲಿ ಏನೋ ಒಂದು ದೊಡ್ಡ ರಕ್ತಪಾತವಾಗುತ್ತದೆ ಎನ್ನುವ ಭ್ರಾಂತು ಬಂದಿತ್ತು. ಇವೊತ್ತಿನ ದಿವಸ ಪೋಲೀಸಿನವರನ್ನು ನೋಡಿದರೆ ಅವರಲ್ಲೂ ಕೂಡ ಒಂದು ವಿಧವಾದ ಶಾಂತಿಯ ವಾತಾವರಣ ಇದೆ ಎಂದು ಹೇಳುತ್ತೇನೆ. ಇನ್ನು ಜನರಲ್ಲಿ ನ್ಯಾಷನಲ್ ಡಿಸಿಪ್ಲಿನ್, ಕೋಡ್ ಆಫ್ ಕಾಂಡಕ್ಟ್, ಬರುತ್ತದೆ ಎಂದು ನನಗನಿಸುತ್ತದೆ. ಈ ಡಿಸಿಪ್ಲೀನ್ ಕೇವಲ ಕೆಲವು ತಿಂಗಳಿನಲ್ಲೇ ತೆಗೆಯಬಾರದು ಕೊನೆಯ ಪಕ್ಷ ಇದು ಎರಡು ವರ್ಷವಾದರೂ ಇದ್ದರೆ ನಮ್ಮ ಜೀವನದಲ್ಲಿ ನಾವು ಮಾರ್ಗದರ್ಶನ ಮಾಡುವುದಕ್ಕೆ ಸಹಾಯವಾಗುತ್ತದೆ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಹೀಗಿರುವಾಗ ನಾವು ತುರ್ತು ಪರಿಸ್ಥಿತಿಯಲ್ಲಿ ಏನು ಸಾಧನೆ ಮಾಡಿದ್ದೇವೆ ಎನ್ನುವುದನ್ನು ಯೋಚನೆ ಮಾಡಬೇಕು. ಏಕೆಂದರೆ ನಾವು ಕೂಡ ಒಂದು ''ಗಾಜಿನ ಮನೆಯಲ್ಲಿ'' ಇದ್ದೇವೆ ಎನ್ನುವುದನ್ನು ಮರೆಯಬಾರದು ದೇಶದಲ್ಲಿ ಏನು ನಡೆಯುತ್ತಿದೆ ಎನ್ನುವುದನ್ನು ಸಹ ಜನರು ನೋಡುತ್ತಿದ್ದಾರೆ. ಈಗ ನಾವು ಏನು ಒಂದು ಟೈಮ್ ಬೌಂಡ್ ಪ್ರೋಗ್ರಾಂ ಹಾಕಿಕೊಂಡಿದ್ದೇವೆ ಅದನ್ನು ನಾವು ಮರೆಯಬಾರದು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅಲ್ಲದೇ ಬೇಹುಷಾರಾಗಿ, ಬೇಜವಾಬ್ದಾರಿಯಿಂದ ದೇಶದ ಹಿತದೃಷ್ಟಿಯನ್ನು ಮರೆತು ಕೆಲಸ ಮಾಡಬಾರದು ಎಂದು ಹೇಳುತ್ತೇನೆ. ನಾವು ಇವೊತ್ತಿನ ದಿವಸ ಅಕ್ಕ ಪಕ್ಕದ ರಾಜ್ಯಗಳನ್ನು, ಅಕ್ಕ ಪಕ್ಕದ ರಾಷ್ಟ್ರಗಳನ್ನು ನೋಡಿದರೆ ನಾವು ಮಾಡತಕ್ಕ ಕಾರ್ಯಕ್ರಮ ತಮಗೆ ಗೊತ್ತಿರುವ ಹಾಗೆ ಆಹಾರ ಪದಾರ್ಥಗಳ ಬೆಲೆ ಹಿಂದೆ ಯಾವ ಸ್ಥಿತಿಯಲ್ಲಿ ಇತ್ತು ಇವೊತ್ತಿನ ದಿವಸ ಯಾವ ಸ್ಥಿತಿಗೆ ಬಂದಿದೆ ಎನ್ನುವುದನ್ನು ನೋಡಿದರೆ ನಮಗೆ ಚೆನ್ನಾಗಿ ಅರ್ಥವಾಗುತ್ತದೆ. ಹಿಂದೆ ಅಂದರೆ ಜೂನ್, ಜುಲೈ, ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಈ ಆಹಾರ ಪದಾರ್ಥಗಳ ಬೆಲೆಗಳು ಏನು ಇತ್ತು ಇವೊತ್ತು ಏನು ಬೆಲೆ ಈ ಆಹಾರ ಪದಾರ್ಥಗಳ ಬೆಲೆ ಇದೆ ಅದನ್ನು ನೋಡಬೇಕು. ಸರ್ಕಾರದವರು ಲೆವಿ ರೂಪದಿಂದ, open ಮಾರ್ಕೆಟಿನಿಂದ, ಕೊಳ್ಳುವುದು ಸರ್ಕಾರ ಸಪೋರ್ಟ್ ಪ್ರೈಸ್ ಕೊಡುವುದರಿಂದ ಇವೊತ್ತಿನ ದಿವಸ ಆಹಾರ ಪದಾರ್ಥಗಳ ಬೆಲೆ ಏನಾಗಿದೆ ಎಂದರೆ ಅದು ಬೆಲೆಗಳು ಇಳಿಮುಖವಾಗಿರುವುದು ಕಂಡುಬರುತ್ತದೆ. ಹಿಂದೆ ಆಗಸ್ಟ್, ಸೆಪ್ಟೆಂಬರ್ ತಿಂಗಳಲ್ಲಿ ಅಂದರೆ lean Months ಜನರು ಆಹಾರ ಪದಾರ್ಥಗಳ ಬೆಲೆಗಳನ್ನು ನೋಡಿ, ಜನರು ಬೊಬ್ಬೆ ಹಾಕುತ್ತಿದ್ದರು ಇವೊತ್ತಿನ ದಿವಸ ಈ ಆಹಾರ ಪದಾರ್ಥಗಳ ಬೆಲೆಗಳು ಇಳಿಮುಖವಾಗಿರುವುದನ್ನು ನೋಡಿ ಬೆಲೆಗಳು ಕಡಿಮೆಯಾಗಿವೆ ಎಂದು ಒಪ್ಪಿಕೊಳ್ಳಬೇಕು ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಇನ್ನು ಜನತಾ ಗೃಹ ನಿರ್ಮಾಣ ಯೋಜನೆ ಬಗ್ಗೆ ಇಂದಿನ ಬೆಳಿಗ್ಗೆ ತಾನೇ ನಮ್ಮ ಮಾನ್ಯ ಅರ್ಥ ಮಂತ್ರಿಗಳು ಹೇಳುತ್ತಿದ್ದರು, ಅದರಲ್ಲಿ ಸುಮಾರು 52 ಸಾವಿರ ಮನೆಗಳನ್ನು ಕಟ್ಟುತ್ತಿದ್ದೇವೆ ಎಂದು ಹೇಳಿದರು. ಇದು ಎಷ್ಟು ಸಂತೋಷವಾದ ವಿಷಯ ಎನ್ನುವುದನ್ನು ನೋಡಬೇಕು ಏಕೆಂದರೆ ಪ್ರತಿಯೊಂದು ಹಕ್ಕಿ ಪಕ್ಷಿಗೂ ಸಹ ಒಂದು ಗೂಡು ಬೇಕಾಗುತ್ತದೆ. ಇದನ್ನು ಒಂದೇ ವರ್ಷದಲ್ಲಿ ಎಲ್ಲಾ ಮನೆಗಳನ್ನು ಕಟ್ಟಿ ಮುಗಿಸುವುದಕ್ಕೆ ಸಾಧ್ಯವಾಗುವುದಿಲ್ಲ, 7 ಲಕ್ಷ ಜನರಿಗೆ ಮನೆ ಇಲ್ಲದಿದ್ದರೂ ಸುಮಾರು 5 ಲಕ್ಷ ಜನರಿಗೆ ನಿವೇಶನಗಳನ್ನು ಕೊಡತಕ್ಕ ಕೆಲಸಮಾಡಿದ್ದಾರೆಂದರೆ ಹೆಮ್ಮೆಯ ವಿಷಯ ಎಂದು ಹೇಳುತ್ತೇನೆ. ಪರದೇಶಗಳಲ್ಲಿಯೂ ಮನೆಗಳ ಕೊರತೆ ಇನ್ನೂ ಮುಗಿದಿಲ್ಲ. ರಾಜ್ಯಸರಕಾರದ ಜೊತೆಗೆ, ನಮ್ಮ ಕೇಂದ್ರ ಸರಕಾರದವರು ನಮ್ಮ ಸಂಸ್ಥಾನದಲ್ಲಿ ಮನೆಕಟ್ಟಲು ಇನ್ನೂ ಹೆಚ್ಚಿನ ಹಣ ಒದಗಿಸಬೇಕೆಂದು ಪ್ರಾರ್ಥಿಸುತ್ತೇನೆ. ಆದರೆ, ಈ ಸಂದರ್ಭದಲ್ಲಿ ನನಗನಿಸುವುದೇನೆಂದರೆ, ಬರೀ ಒಂದೊಂದೇ ನಿವೇಶನವನ್ನು ಹಂಚುವುದರ ಬದಲಿಗೆ, ಒಂದು ಸಮಗ್ರವಾದ ಯೋಜನೆಯನ್ನು ಹಾಕಿಕೊಂಡು, ಜಂಟಿಯಾಗಿ, ಸಹಕಾರ ತತ್ವದ ಆಧಾರದ ಮೇಲೆ ಒಟ್ಟೊಟ್ಟಿಗೆ ಮನೆಗಳನ್ನು ಕಟ್ಟಿಸಿಕೊಡುವ ಏರ್ಪಾಡು ಆಗಬೇಕು. ಏಕೆಂದರೆ, ಅದು ಯಾವ

ಸರಕಾರವೇ ಇರಲಿ, ಪ್ರತಿಯೊಬ್ಬ ಪ್ರಜೆಗೂ ಊಟ, ವಸತಿ, ಬಟ್ಟೆ, ವಿದ್ಯಾಭ್ಯಾಸ ಮತ್ತು ಆರೋಗ್ಯ ಬಹಳ ಅತ್ಯವಶ್ಯಕವಾಗಿರುತ್ತವೆ. ಈ ಅವಶ್ಯಕತೆಗಳನ್ನು ಪೂರೈಸಿದರೆ, ಅದೇ ರಾಮರಾಜ್ಯ! ನಮ್ಮ ಪೂಜ್ಯ ಮಹಾತ್ಮಾ ಗಾಂಧಿಯವರು ಯಾವ ಕನಸು ಕಂಡಿದ್ದರು ಅಂಥಾ ರಾಮರಾಜ್ಯವನ್ನೇ! ಪ್ರಧಾನ ಮಂತ್ರಿ ಶ್ರೀಮತಿ ಇಂದಿರಾ ಗಾಂಧಿಯವರು ಘೋಷಿಸಿರುವ 20 ಅಂಶಗಳ ಕಾರ್ಯಕ್ರಮಗಳನ್ನು ನಾವು ಎರಡು ವಿಭಾಗ ಮಾಡಿಕೊಳ್ಳಬಹುದು. ಒಂದು ಪಟ್ಟಣಗಳ ಕುರಿತು, ಎಂಥಾ ಸೌಲಭ್ಯಗಳು ಬೇಕು ಎನ್ನುವುದು ಮತ್ತೊಂದು, ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ಜನರಿಗೆ ಯಾವ ರೀತಿ ಸಹಾಯ ಸೌಲಭ್ಯಗಳನ್ನು ಒದಗಿಸಬೇಕು ಎನ್ನುವುದು. ಇವೆಲ್ಲಕ್ಕಿಂತ ಮಿಗಿಲಾಗಿ ನಾವು ವಿದ್ಯಾಭ್ಯಾಸದ ಕಡೆ ಹೆಚ್ಚು ಗಮನ ಕೊಡುವುದು. 'ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು'' ಎಂದ ಒಂದು ನಾಣ್ಣುಡಿ ಇದೆ. ಅವರ ಬಗ್ಗೆಯೂ ಕೂಡ ಒಂದು ಕಾರ್ಯಕ್ರಮವನ್ನು ಹಾಕಿಕೊಂಡಿದ್ದಾರೆ. ಈ 20 ಅಂಶದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳ ಕುರಿತು ಕೆಲವು ಕಾರ್ಯಗಳನ್ನು ಕೊಡಬೇಕೆಂದು ಇದೆ, ಪಟ್ಟಣಗಳ ಕುರಿತು ಇದೆ; ಗ್ರಾಮಾಂತರ ಪ್ರದೇಶಗಳ ಕುರಿತು ಇದೆ; ಎಲ್ಲವೂ ಇದೆ. ಹೀಗೆಯೇ ರಾಮರಾಜ್ಯವಾಗುವುದು. ಒಂದೇ ದಿನದಲ್ಲಿ ರಾಮರಾಜ್ಯದ ಕಲ್ಪನೆಯನ್ನು ನಾವು ನೋಡುವುದಕ್ಕಾಗುವುದಿಲ್ಲ. ಹಂತಹಂತವಾಗಿ ಆಗಬೇಕಾಗುತ್ತದೆ. ಇಂಥಾ ಒಂದು ಕಾರ್ಯಕ್ಕೆ ನಮ್ಮೊಡನೆ ವಿರೋಧ ಪಕ್ಷದವರೂ ಒಂದುಗೂಡಿ, ಕೆಲಸಮಾಡಬೇಕು ಒಂದು ರಥಕ್ಕೆ ಹೇಗೆ ಎರಡು ಚಕ್ರಗಳೂ ಅವಶ್ಯಕವೋ ಹಾಗೆಯೇ ಎರಡು ಪಕ್ಷಗಳು ಸೇರಿ ದೇಶದ ಪ್ರಗತಿಗೆ ಶ್ರಮಿಸಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

20 ಅಂಶದ ಕಾರ್ಯಕ್ರಮ ಇಂದಿರಾಗಾಂಧಿಯವರ ಕಾರ್ಯಕ್ರಮ ಎಂದು ಒಂದು ಸಲ ಹೇಳುತ್ತೀರಿ? ಮತ್ತೆ ಇನ್ನೊಂದು ಸಲ ಇದು ರಾಷ್ಟ್ರೀಯ ಕಾರ್ಯಕ್ರಮ ಎಂದು ಹೇಳುತ್ತೀರಿ? ಎಂದು ಆಡಳಿತ ಪಕ್ಷದವರನ್ನು ವಿರೋಧ ಪಕ್ಷದವರು ಟೀಕೆ ಮಾಡಿದ್ದುಂಟು. ಒಟ್ಟಿನಲ್ಲಿ, ನಾನು ಹೇಳುವದಿಷ್ಟು: ಯೋಜನೆಯ ಹೆಸರು ಏನೇ ಇರಲಿ, ಅದರ ಸದುಪಯೋಗವಾಗುವುದು ಅಲ್ಪಸಂಖ್ಯಾತರು, ಹಿಂದುಳಿದವರು ಯಾರು ಇದ್ದಾರೆ ಅವರಿಗೆ ಆಗುತ್ತದೆ. ಇವನ್ನೆಲ್ಲಾ ವಿರೋಧ ಪಕ್ಷದವರು ಏತಕ್ಕೆ ಮೆಚ್ಚಿ ಮಾತನಾಡುವುದಿಲ್ಲ?

ಇನ್ನು ಋಣಪರಿಹಾರ ವಿಚಾರ. ದೇಶದಲ್ಲಿ ಪ್ರತಿಯೊಬ್ಬ ಜನರೂ ಕಲಸಮಾಡುವುದು ಒಂದು ಹೊಟ್ಟೆಗಾಗಿ, ಗೇಣು ಬಟ್ಟೆಗಾಗಿ, ಮಗ ಮೊಮ್ಮಗನಿಂದ ಹಿಡಿದು ಮೂರು ತಲೆಮಾರಿನವರೆಗೂ ಪಡೆದ ಹಣದ ಋಣ ತೀರಿಸಲು ಯಜಮಾನನ ಮನೆಯಲ್ಲಿ ದುಡಿಯಬೇಕಾಗುತ್ತಿತ್ತು; ಕೊನೆಗಂತೂ ಸಾಲ ತೀರುತ್ತಲೇ ಇರಲಿಲ್ಲ. ಅಂಥಾದನ್ನು ತಪ್ಪಿಸಿ, ಋಣದ ಭಾರದಿಂದ ಈ ನರಳುತ್ತಿದ್ದವರನ್ನು ಋಣಪರಿಹಾರ ಮಾಡಿದ ಈ ಸರ್ಕಾರವನ್ನು ವಿರೋಧ ಪಕ್ಷದವರು ಏತಕ್ಕೆ ಶ್ಲಾಘಿಸುವುದಿಲ್ಲ! ಎಂದು ನಾನು ಈ ಸಂದರ್ಭದಲ್ಲಿ ಕೇಳಬಯಸುತ್ತೇನೆ. ನಮ್ಮ ಸಂಸ್ಥಾನದಲ್ಲಿ ಸುಮಾರು 370 ಕೋಟಿರೂಪಾಯಿ ಇತ್ತು, ಈ ಕ್ರಮದಿಂದ ಅಂದರೆ ಸುಮಾರು 116 ಕೋಟಿ ತೀರಿದಂತೆ ಆಯಿತು. ಬಡವ ಋಣದಿಂದ ವಿಮುಕ್ತನಾದ.

ಇನ್ನು ಜೀತ ಪದ್ಧತಿ. ಜೀತ ಪದ್ಧತಿ ಈ ದೇಶದಲ್ಲಿ ಅವಸಿಸಿತು. ಸುಮಾರು 100-50 ರೂಪಾಯಿ ಕೊಡುತ್ತಾ, ಜೀತದಾಳುಗಳನ್ನು ಇಟ್ಟುಕೊಳ್ಳುತ್ತಿದ್ದರು. ಅವರು ಹಗಳಿರುಳು ದುಡಿಯಬೇಕಾಗಿತ್ತು. ಅಂತಹ ಜೀತದಾಳುಗಳನ್ನು ಬಿಡುಗಡೆ ಮಾಡಿ, ಅವರು ಸ್ವತಂತ್ರವಾಗಿ ಜೀವನ ಮಾಡುವುದಕ್ಕೆ ಅನುವು ಮಾಡಿಕೊಟ್ಟಿದ್ದು ತಪ್ಪೇ? ಒಂದು ಕಡೆ ವಿರೋಧ ಪಕ್ಷದವರು ಹೇಳುತ್ತಾರೆ, ಪ್ರಜಾಪ್ರಭುತ್ವ, ಸಮತಾವಾದ, ಸಮಾಜವಾದ ಇನ್ನೂ ಸರಿಯಾಗಿ ಕೆಲಸ ಮಾಡುತ್ತಿಲ್ಲ ಎಂದು. ಆದರೆ ಇನ್ನೊಂದು ಕಡೆ ಸರ್ಕಾರದ ಇಂಥಾ ಯೋಜನೆಗಳನ್ನು ಸ್ವಾಗತಿಸುವುದೇ ಇಲ್ಲ! ಇದು ಎಂಥಾ ನ್ಯಾಯ,? ಈಗ ಮಾತಿಗಿಂತ ''ಕೃತಿ'' ಬಹಳ ಮುಖ್ಯ ಕಾರ್ಯಕ್ರಮಕ್ಕೆ ಆದ್ಯತೆ ನೀಡಿದೆ.

ನಮ್ಮ ಸರ್ಕಾರದ ಯೋಜನೆಗಳಲ್ಲಿ ಮುಖ್ಯವಾಗಿ ಎರಡು ಇವೆ. ಒಂದು ನೀರಾವರಿ ಇನ್ನೊಂದು ವಿದ್ಯುಚ್ಛಕ್ತಿ. ವಿದ್ಯುಚ್ಛಕ್ತಿ ಕೈಗಾರಿಕೆಗಳನ್ನು ಹೆಚ್ಚಿಸುತ್ತದೆ, ನೀರಾವರಿ ಹೆಚ್ಚು ಬೆಳೆ ಬೆಳೆಯಲಿಕ್ಕೆ ಪೂರಕ ಎನ್ನುವುದನ್ನು ಎಲ್ಲರೂ ಬಲ್ಲವರಾಗಿದ್ದಾರೆ. ನಮ್ಮ ರಾಜ್ಯವು ಆಹಾರ ಪರಿಸ್ಥಿತಿಯಲ್ಲಿ ಯಾವ ರೀತಿ ಸುಧಾರಿಸಿದೆ ಎಂಬುದನ್ನು ತಾವೆಲ್ಲರೂ ಬಲ್ಲಿರಿ. ಕಾಳಿನದಿ ಯೋಜನೆ

ಯನ್ನು ನಮ್ಮ ಸರ್ಕಾರದವರು ಕೈಗೆತ್ತಿಕೊಂಡಿದ್ದಾರೆ; ಮುಗಿಸಲು ಹಂತ, ಹಂತಕ್ಕೂ ಹಣ ಒದಗಿಸುತ್ತಾ ಬಂದಿದ್ದಾರೆ. ಇದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿದ್ದಾರೆ. ಕಾಳಿನದಿ ಯೋಜನೆಯನ್ನು ಕೈಗೊಂಡ ಉದ್ದೇಶ, ದೇಶದ ಉತ್ಪನ್ನವನ್ನು ಹೆಚ್ಚಿಸುವುದೇ ಆಗಿದೆ. ಕಾಳಿನದಿಯ ಯೋಜನೆ ಪೂರೈಸಿವರೆ ದೇಶದಲ್ಲಿ ನಮ್ಮ Tariff Rate ಬಹಳ ಕಮ್ಮಿ ಎಂದು ಹೇಳ ಬಹುದು.

ಶ್ರೀ ಬಿ. ಪುಟ್ಟಸ್ವಾಮಯ್ಯ—ಕಾಳಿ ನದಿ ಯೋಜನೆಯನ್ನು ತಾವು ಪ್ರಾರಂಭಿಸಿದಿರಾ ?

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು:—ಹಿಂದಿನ ಸರ್ಕಾರದವರು ಬರೀ ಶಂಕು ಸ್ಥಾಪನಾ ಶಿಲೆಗಳನ್ನು ಮಾತ್ರ ಹಾಕುತ್ತಿದ್ದರು. ಯಾವೊಂದು ಯೋಜನೆಯನ್ನೂ ಹಿಂದಿನವರು ಪೂರ ಮುಗಿಸಿರಲಿಲ್ಲ. ಬರೀ ಶಂಕುಸ್ಥಾಪನೆಯಿಂದ ಕಾರ್ಯ ಮುಗಿಯಿತೇ? ಆದರೆ, ಇವತ್ತಿನ ಸರ್ಕಾರದಲ್ಲಿ ಹತ್ತಾರು ಯೋಜನೆಗಳು ಇವೆ. ಅವುಗಳಲ್ಲಿ ಹಲವಾರು ಯೋಜನೆಗಳನ್ನು ಕಾರ್ಯಗತ ಮಾಡುತ್ತಿದ್ದಾರೆ. ಹಿಂದಿನ ಸರ್ಕಾರ ಹೋದ ಮೇಲೆ ಎಷ್ಟು ಲಕ್ಷ ಹೆಕ್ಟೇರು ಭೂಮಿಗೆ ಸಾಗುವಳಿ ಉದ್ದೇಶಕ್ಕಾಗಿ ನೀರಾವರಿ ಸೌಕರ್ಯವನ್ನು ಈ ಸರ್ಕಾರ ಒದಗಿಸಿದೆ ಎಂಬುದನ್ನು ಮಾನ್ಯ ಸದಸ್ಯರು ಆಲೋಚನೆ ಮಾಡಬೇಕು ಇವತ್ತಿನ ದಿವಸ ಬೇಸಾಯ ಕ್ಷೇತ್ರದಲ್ಲಿ ಹಸಿರು ಕ್ರಾಂತಿಯನ್ನು ತರುತ್ತಿದ್ದಾರೆ. ಬರೀ ಹಸಿರು ಕ್ರಾಂತಿಯಲ್ಲದೆ, "ಬಿಳಿ ಕ್ರಾಂತಿಯನ್ನೂ" ಸರ್ಕಾರ ತರುತ್ತಿದೆ. ವಿಶ್ವಬ್ಯಾಂಕ್ ನೀಡುವ 51 ಕೋಟಿ ರೂಪಾಯಿಗಳಲ್ಲಿ ಹಾಲು ಉತ್ಪಾದನೆ ಹೆಚ್ಚಿಸುವ ಯೋಜನೆಯೂ ಕೂಡ ಸೇರಿಕೊಂಡಿದೆ. ತನ್ಮೂಲಕ ದೇಶದಲ್ಲಿ ಬಿಳಿ ಕ್ರಾಂತಿಯಾಗಲಿದೆ. "ಹಾಲು ಮಾರಿಕೊಂಡು ಎಲ್ಲಾದರೂ ಜೀವನ ಮಾಡು" ಎಂದು ಒಂದು ಕನ್ನಡದ ಗಾದೆ ಇದೆ. ಹಳ್ಳಿ ಗಾಡಿನ ಬಡ ಬೋರೇಗೌಡನಿಗೆ ಏನಾದರೂ ಸಹಾಯ ಮಾಡಬೇಕಾದರೆ—ಹಾಲಿನಿಂದ ಸಾಧ್ಯ ವಿಲ್ಲವೇ? ಅವನು ಹಾಲನ್ನು ಮಾರಿಕೊಂಡು ಜೀವನ ಸುಗಮವಾಗಿ ಮಾಡುವುದಕ್ಕಾಗುವು ದಿಲ್ಲವೇ? ಇಂಥಾ ಯೋಜನೆಗಳನ್ನು ಸರ್ಕಾರದವರು ತಂದಿದ್ದರೂ ಏತಕ್ಕೆ ವಿರೋಧ ಪಕ್ಷದ ಸದಸ್ಯರು ಮೆಚ್ಚುಗೆ ವ್ಯಕ್ತಪಡಿಸಲಿಲ್ಲ ಎಂಬುದು ನನಗೆ ಗೊತ್ತಾಗಲಿಲ್ಲ.

ಗೋದಾವರಿ ಜಲವಿವಾದ ಈಗಾಗಲೇ ತೀರ್ಮಾನವಾದಂತೆ ಕೃಷ್ಣಾ ಮತ್ತು ಕಾವೇರಿ ಜಲ ವಿವಾದವೂ ಶೀಘ್ರದಲ್ಲೇ ಇತ್ಯರ್ಥವಾಗುವುದೆಂದು ನಾನು ಆಶಿಸುತ್ತೇನೆ. ಇವತ್ತಿನ ದಿವಸ ನೀರಾವರಿಯಲ್ಲಿ ನಮ್ಮ ರಾಜ್ಯಕ್ಕೆ 8 ನೇ ಸ್ಥಾನ ದೊರೆತಿದೆ. ಆದುದರಿಂದ, ಸರ್ಕಾರದವರು ಇನ್ನೂ ಹೆಚ್ಚಿನ ರೀತಿಯಲ್ಲಿ ರೈತಾಪಿ ಜನರಿಗೆ ನೀರಾವರಿ ಸೌಕರ್ಯಗಳನ್ನು ಕಲ್ಪಿಸಿಕೊಡಬೇಕೆಂದು ಹೇಳುತ್ತೇನೆ ಮತ್ತು ವಿರೋಧ ಪಕ್ಷದ ಸದಸ್ಯರೂ ಕೂಡ ಈ ಒಂದು ದಿಶೆಯಲ್ಲಿ ಸಹಕಾರ ನೀಡ ಬೇಕೆಂದು ಮನವಿ ಮಾಡಿಕೊಳ್ಳುತ್ತೇವೆ.

ಈಗ ನಮ್ಮ ಕರ್ನಾಟಕ ರಾಜ್ಯಕ್ಕೆ ಸುಮಾರು 200 ಮೈಲಿ ವಿಸ್ತೀರ್ಣದ ಕರಾವಳಿ ಪ್ರದೇಶ ಸಿಕ್ಕಿದೆ. ಮಲ್ಪೆ ಮತ್ತು ಹೊನ್ನಾವರ ಬಂದರುಗಳನ್ನು ಷಿಪ್ಪಿಂಗ್ ಹಾರ್ಬರ್ ಮಾಡಬೇಕೆಂದು ಇದೆ. ಕೇಂದ್ರದ ಮೇಲೆ ಪ್ರಭಾವ ಬೀರಿ, ಒತ್ತಾಯ ಬೀರಿ, ಏತಕ್ಕೆ ಕೊಚ್ಚಿನ್ ಮತ್ತು ವಿಶಾಖ ಪಟ್ಟಣದಲ್ಲಿರುವಂತೆ ಕರ್ನಾಟಕದಲ್ಲೇ ಒಂದು ಷಿಪ್ ಬಿಲ್ಡಿಂಗ್ ಯೋಜನೆಯನ್ನು ಮಾಡಬಾರದು ಎಂದು ಕೇಳುತ್ತೇನೆ. ಅಷ್ಟೇ ಅಲ್ಲದೆ, ಮಲ್ಪೆ ಮತ್ತು ಹೊನ್ನಾವರ ಬಂದರುಗಳನ್ನು ಸರ್ವಋತು ಬಂದರುಗಳನ್ನಾಗಿ ಘೋಷಿಸಿ ಹಣ ಒದಗಿಸಬೇಕೆಂದು ನಮ್ಮ ಸರ್ಕಾರದವರಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಇನ್ನು ಕೈಗಾರಿಕೆ ವಿಚಾರ, ನಮ್ಮ ಕರ್ನಾಟಕದ ರಾಜ್ಯದ ಕೈಗಾರಿಕೆಯ ಅಧ್ಯಾಯ ತೆಗೆದರೆ, ಮೊದಲು ಡಾ|| ಸರ್. ಎಂ. ವಿಶ್ವೇಶ್ವರಯ್ಯನವರನ್ನು ಜ್ಞಾಪಿಸಿಕೊಳ್ಳಬೇಕು. Industrialise or perish ಅವರು ಕೈಗಾರಿಕೆ ಳಿಗೆ ಮೊದಲು ಕರ್ನಾಟಕ ರಾಜ್ಯ ಮಾದರಿ ರಾಜ್ಯವಾಗಿತ್ತು. ಆದರೆ, ಇವತ್ತು 3ನೇ ಅಥವಾ 4ನೇ ಸ್ಥಾನದಲ್ಲಿದೆ, ಆದುದರಿಂದ, ಮಹಾತ್ಮಾ ಗಾಂಧೀಜಿಯವರು ಏನು ಖಾದಿ ಗ್ರಾಮೋದ್ಯೋಗ, ಗೃಹ ಕೈಗಾರಿಕೆಗಳ ಯೋಜನೆ ಗಳನ್ನು ಅಸ್ತಿತ್ವಕ್ಕೆ ತನ್ನಿ ಎಂದರು, ಅವುಗಳ ಅಭಿವೃದ್ಧಿಯನ್ನು ಇವತ್ತಿನ ದಿವಸ ನಮ್ಮ ಕರ್ನಾಟಕ ರಾಜ್ಯದಲ್ಲಿ ಮಾಡಬೇಕಾಗಿದೆ. ಇದರ ನಿಮಿತ್ತವಾದ ಸರ್ಕಾರದ ಯೋಜನೆಗಳು, ಬಹುಶಃ, ಜಿಲ್ಲಾ ಮಟ್ಟದಲ್ಲಿ ಮತ್ತು ತಾಲ್ಲೂಕು ಮಟ್ಟದಲ್ಲಿ ಹಾಕಿ ಮುಟ್ಟಿಸಬೇಕು. ಆದರೆ, ಗ್ರಾಮಾಂತರ

ಪ್ರದೇಶಗಳಲ್ಲಿ ಇನ್ನೂ ನಮ್ಮ Plan ಹೋಗಿ ಮುಟ್ಟಿಲ್ಲ, ಆದುದರಿಂದ, ಗ್ರಾಮಾಂತರ ಪ್ರದೇಶಗಳಲ್ಲೂ ಕೂಡ ಖಾದಿ ಮತ್ತು ಗ್ರಾಮೋದ್ಯೋಗ ಕೈಗಾರಿಕೆಗಳನ್ನು ಹೆಚ್ಚು ಹೆಚ್ಚಾಗಿ ಸ್ಥಾಪಿಸಬೇಕೆಂದು ಒತ್ತಾಯ ಮಾಡುತ್ತೇನೆ. ಸನ್ಮಾನ್ಯ ಮುಖ್ಯ ಮಂತ್ರಿಗಳವರು ಸಣ್ಣ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸಣ್ಣ ಪ್ರಮಾಣದ ಕೈಗಾರಿಕೆಗಳ ಕಾರ್ಪೊರೇಷನ್ ಎಂದು ಒಂದು ನಿಗಮವನ್ನೇ ಸ್ಥಾಪಿಸಿದ್ದಾರೆ. ಅಷ್ಟೇ ಅಲ್ಲದೆ, ಸಣ್ಣ ಕೈಗಾರಿಕೆಗಳಿಗೆ ಸಂಬಂಧಪಟ್ಟಂತೆ ಒಂದು ಇಲಾಖೆಯನ್ನು ನಿರ್ಮಿಸಿ. ಅದಕ್ಕೆ ಒಬ್ಬರು ಮಂತ್ರಿಗಳನ್ನೂ ನೇಮಿಸಿದ್ದಾರೆ. ಇದು ಬಹಳ ಸ್ವಾಗತಾರ್ಹವಾದುದು. ಆದರೆ, ಇಲ್ಲಿ ಒಂದು ವಿಚಾರವೇನೆಂದರೆ, ಕಮ್ಮಾರ ಕುಂಬಾರ, ಗಾಣಿಗ, ಅಚಾರಿ, ಬಡಗಿ, ಅಗಸ, ದೋಬಿ, ಚಮ್ಮಾರ, ಭಜಂತ್ರಿ ಇವರೆಲ್ಲರೂ ಇರುವುದು ಗ್ರಾಮಾಂತರ ಪ್ರದೇಶಗಳಲ್ಲೇ ಇರುತ್ತಾರೆ ಆದುದರಿಂದ, ಈ ಇಲಾಖೆಯು ಹೆಚ್ಚು ಹೆಚ್ಚು ಗ್ರಾಮಾಂತರ ಪ್ರದೇಶಗಳಲ್ಲಿ ಈ ರೀತಿ ಇರುವಂತಹ ಕೈಗಾರಿಕೆಗಳಿಗೆ ಪ್ರೋತ್ಸಾಹ ಕೊಡಬೇಕೆಂದು ಹೇಳುತ್ತೇನೆ. ಅಲ್ಲದೆ ಧನ ಸಹಾಯ ಸರ್ಕಾರ ಮಾಡಿ. ಅವರಿಗೆ Marketing Facilities ನಲ್ಲಿ ಒದಗಿಸಬೇಕಾಗುತ್ತೆ.

ವಿರೋಧ ಪಕ್ಷದ ಸನ್ಮಾನ್ಯ ಸದಸ್ಯರುಗಳು ಬಡವರಿಗೆ ಸಂಬಂಧಪಟ್ಟಹಾಗೆ ಒಂದು ಯೋಜನೆಯನ್ನು ಸರಿಯಾಗಿ ಮಾಡುತ್ತಾ ಇಲ್ಲ ಎಂದು ಹೇಳುತ್ತಾರೆ: ಎಂಥಾ ವಿಪರ್ಯಾಸ. ನಮ್ಮ ಸರ್ಕಾರದ ಯೋಜನೆಗಳೆಲ್ಲವೂ ಬಡವರನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾಡುತ್ತಿರುವ ಯೋಜನೆಗಳಲ್ಲವೇ ? ಇದನ್ನು ಮಾನ್ಯ ವಿರೋಧ ಪಕ್ಷದ ಸದಸ್ಯರು ತಿಳಿದುಕೊಳ್ಳಬೇಕು. ಆದರೆ, ನಾವು ಬಡವನ ಹೆಸರಿನಲ್ಲಿ ಜೀವನ ಮಾಡುವುದು ಬೇಡ. ಇಲ್ಲಿ ಮುಖ್ಯವಾದುದು; ನಮ್ಮ ಯೋಜನೆಗಳು ಬಡವನಿಗೆ ಸೇರಬೇಕಾದುದು. ಬರೀ ಭಾಷಣ ಬಿಗಿಯುವುದರಿಂದ ನಾವೇನೂ ಸಾಧನೆ ಮಾಡುವುದಕ್ಕಾಗುವುದಿಲ್ಲ. ಕೃಷಿ ಮುಖ್ಯ ನಮ್ಮ ದೇಶದಲ್ಲಿರುವ ಹೆಚ್ಚುವರಿ ಹಿಡುವಳಿಗಳನ್ನು ಸರ್ಕಾರದವರು ವಶಪಡಿಸಿಕೊಂಡು ಅದನ್ನು ಭೂರಹಿತ ಕಾರ್ಮಿಕರಿಗೆ ಹಂಚಬೇಕೆಂಬ ಒಂದು ಹೆಬ್ಬಯಕೆ ಇದೆ. ಇದು ಒಳ್ಳೆಯ ಯೋಜನೆಯಲ್ಲವೇ? ಬಡವರಿಗಾಗಿ ಮಾಡತಕ್ಕ ಯೋಜನೆ ಅಲ್ಲವೆ? ಇದನ್ನು ಏತಕ್ಕೆ ವಿರೋಧ ಪಕ್ಷದವರು ಮೆಚ್ಚುವುದಿಲ್ಲ ಎಂದು ನನಗೆ ಅರ್ಥವಾಗುವುದಿಲ್ಲ, ಗೋಮಾಳಗಳನ್ನು ಸರ್ಕಾರ ಕೊಂಡು ಕೊಂಡು ಸರ್ಕಾರ ಸರಿಯಾಗಿ ಹಂಚಬೇಕು.

ಇನ್ನು ಕೈಮಗ್ಗದ ಅಭಿವೃದ್ಧಿಗಾಗಿ ಸರ್ಕಾರದವರು ಸುಮಾರು ಒಂದು ಕೋಟಿ ರೂಪಾಯಿಗಳನ್ನು ಮೀಸಲಿಟ್ಟಿದ್ದಾರೆ. ವಿದ್ಯಾವಂತ ನಿರುದ್ಯೋಗಿ ಯುವಕರಿಗೆ ಉದ್ಯೋಗಾವಕಾಶವನ್ನು ಒದಗಿಸಿಕೊಡಬೇಕೆಂಬುದೇ ಇದರ ಉದ್ದೇಶವಾಗಿದೆ, ಪ್ರತಿಯೊಬ್ಬ ವಿದ್ಯಾವಂತ ಯುವಕನೂ ಸ್ವಾವಲಂಬಿಯಾಗಿ ಬದುಕಬೇಕೆಂಬ ಸದುದ್ದೇಶದಿಂದಲೇ ಅಲ್ಲವೇ ಇವೆಲ್ಲಾ ಯೋಜನೆಗಳನ್ನು ಸರ್ಕಾರದವರು ತಂದಿರುವುದು ? ಕೈಗಾರಿಕ ಅಭಿವೃದ್ಧಿಗಾಗಿ ಸರ್ಕಾರದವರು ಬೇಕಾದಷ್ಟು ಯೋಜನೆಗಳನ್ನು ಹಾಕಿರುತ್ತಾರೆ ಪ್ರತಿ ಜಿಲ್ಲೆ, ತಾಲ್ಲೂಕು ಮಟ್ಟದಲ್ಲಿ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಬೇಕು. ಅಂದರೆ Decentralisation Industries ಆಗಬೇಕು. ಅದರಲ್ಲಿಯೂ Backward District ನಲ್ಲಿ ಹೆಚ್ಚಿನ ಕಾರ್ಯ ಆಗಬೇಕು Rural Industries/Village Industries/Cottage Industries ಏನೂ ಇವೆ ಅವುಗಳಿಗೆ ಉತ್ತೇಜನ ನೀಡಬೇಕು ಮತ್ತು ಅವುಗಳನ್ನು ಅಲ್ಲಿಯೇ ಸ್ಥಾಪಿಸಬೇಕು.

5-30 P M.

ವಿದ್ಯಾಭ್ಯಾಸಕ್ಕಾಗಿ ಈ ಬಾರಿ ಸುಮಾರು 60 ಕೋಟಿ ರೂಗಳನ್ನು ಕೊಟ್ಟಿದ್ದೇವೆ, ಜೊತೆಗೆ ಇದರಿಂದ 31.5 ಪರ್ಸೆಂಟ್ ಎಜುಕೇಷನ್ ಆಗಿಲ್ಲವೇ? 6 ವರ್ಷದಿಂದ 10 ವರ್ಷದ ಮಕ್ಕಳಿಗೆ ಕಡ್ಡಾಯವಾಗಿ ಪ್ರೈಮರಿ ವಿದ್ಯಾಭ್ಯಾಸ ಕೊಡುವುದಲ್ಲದೆ, ಮಧ್ಯಾಹ್ನದ ಉಪಹಾರ ಸ್ಕಾಲರ್‌ಷಿಪ್ ಏರ್ಪಾಡನ್ನು ಮಾಡಿದ್ದೇವೆ. ಇದು ಒಳ್ಳೆಯ ಯೋಜನೆ ಅಲ್ಲವೇ ? ವಿದ್ಯೆಯಿಂದ ವಿನಯ ಲಭಿಸುತ್ತದೆಂದು ಹಿಂದಿನವರು ಹೇಳಿದ್ದಾರೆ, ಇಂಥ ವಿಚಾರಗಳಲ್ಲಿ ತಾವು ವ್ಯತಕ್ಕೆ ವಿರೋದ ಪಕ್ಷದವರು ಸಹಕರಿಸಬಾರದು ಎಂದು ಕೇಳುತ್ತೇನೆ.? ಕೆಲವು ಸಂದರ್ಭಗಳಲ್ಲಿ ಹಣ ದುರುಪಯೋಗ ಆಗುವುದು ಸಹಜ. ನ್ಯಾಷನಲ್ Character and Discipline ಬರದ ಹೊರತು ಲಂಚಗುಳಿತನ ಸ್ವಜನಪಕ್ಷಪಾತ ತಪ್ಪಿಸುವುದಕ್ಕೆ ಆಗುವುದಿಲ್ಲ. ನಾವು ಇಂಗ್ಲೇಂಡಿನಲ್ಲಿ, ಜರ್ಮನಿಯಲ್ಲಿ ಇಲ್ಲ, ನಾವೆಲ್ಲಾ ಭಾರತೀಯರು, ಇಲ್ಲಿರತಕ್ಕವರು ಭಾರತೀಯ ಅಧಿಕಾರಿಗಳು. ನಾವು ಇವತ್ತಿನ ದಿವಸ

ಹೇಳುತ್ತಿದ್ದೇವೆ ''ನುಡಿದಂತೆ ನಡೆ, ನಡೆದಂತೆ ನುಡಿ'' ಎಂದು. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಈ ಸಾರಿ ಅಂತರ ರಾಷ್ಟ್ರೀಯ ಮಹಿಳಾ ವರ್ಷ. ಸುಮಾರು 51 ಪರ್ಸೆಂಟ್ ಹೆಣ್ಣುಮಕ್ಕಳು ಇದ್ದಾರೆ. ಅವರಿಗೋಸ್ಕರ ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮಹಿಳಾ ಮತ್ತು ಮಕ್ಕಳ ಕಲ್ಯಾಣಕ್ಕಾಗಿ ಬೇರೆ ಇಲಾಖೆಯನ್ನೇ ರಚಿಸಿದ್ದಾರೆ. ಅಲ್ಲದೆ ಹಿಂದುಳಿದ ವರ್ಗಗಳ ಏಳಿಗೆಗೊಸ್ಕರ ಒಂದು ಆಯೋಗವನ್ನು ರಚಿಸಿದ್ದಾರೆ, ಅದರಲ್ಲಿ ನಾನು ಸಹ ಸದಸ್ಯನಾಗಿದ್ದು ಮೊನ್ನೆ ತಾನೇ ಸರ್ಕಾರಕ್ಕೆ ವರದಿ ಕೊಟ್ಟಿದ್ದೇವೆ. ಆಯೋಗದ ವರದಿಯನ್ನು ಅನುಷ್ಠಾನಕ್ಕೆ ತರಲು ಮಾನ್ಯ ರಾಜ್ಯಪಾಲರೂ ಸಹ ಒಪ್ಪಿಕೊಂಡಿದ್ದಾರೆ. ಇದರಿಂದ ಸುಮಾರು ಕೋಟಿ 1.45 ಲಕ್ಷ ಜನಕ್ಕೆ ಸಹಾಯವಾಗುತ್ತದೆ, ಇದು ಒಳ್ಳೆಯ ಕೆಲಸ ಅಲ್ಲವೇ ಸ್ವಾಮಿ? ಒಂದೇ ವರ್ಷದಲ್ಲಿ ರಾಮ ರಾಜ್ಯ ಆಗಬೇಕು ಎಂದರೆ ಸಾಧ್ಯವಾಗುತ್ತದೆಯೇ, ಕ್ರಮೇಣ ಆಗುತ್ತದೆ. ಜನರು ದುಡಿಯಬೇಕು ನಿಷ್ಠಾವಂತರಾಗಿ ಬಾಳಬೇಕು. ಆಗ ರಾಷ್ಟ್ರದ ನೈತಿಕ ಮಟ್ಟ ಹೆಚ್ಚುತ್ತದೆ.

ಇನ್ನು ಆರೋಗ್ಯದ ಬಗ್ಗೆ ಒಂದು ಮಾತು ಹೇಳುತ್ತೇನೆ, ಈ ಬಾಬಿಗೆ 40 ಕೋಟಿ ರೂಪಾಯಿ ಗಳನ್ನು ಕೊಟ್ಟಿದ್ದಾರೆ. ಭಾರತೀಯ ಆಯುರ್ವೇದ ಪದ್ಧತಿಯಾದ ಮತ್ತು Homoeopathy ಪದ್ಧತಿಗಳಿಗೂ ಪ್ರೋತ್ಸಹ ನೀಡಬೇಕು ಎಲ್ಲ ಸರ್ಕಾರದ ಉತ್ತೇಜನಸಿಗುತ್ತೆ ಆ ಪದ್ಧತಿ ಚೆನ್ನಾಗಿ ಬೆಳೆಯುತ್ತೆ ಪದ್ಧತಿಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು. ಇಂಗ್ಲೀಷಿನವರು ನಮ್ಮ ದೇಶಕ್ಕೆ ಬಂದು ಅಲೋಪತಿ ತಂದರು, ಮುಸಲ್ಮಾನರು ಬಂದು ಯುನಾನಿ ತಂದರು ಸಾವಿರಾರು ವರ್ಷ ಗಳಿಂದ ಬಂದಂತ ಆಯುರ್ವೇದ ಪದ್ಧತಿಯನ್ನು ಇವರು ತೆಗೆದುಹಾಕಿದರು. ಇದರ ಅಭಿವೃದ್ಧಿಗೆ ಪ್ರೋತ್ಸಹ ಕೊಟ್ಟರೆ, ಬಡ ಜನತೆಗೆ ತುಂಬಾ ಅನುಕೂಲವಾಗುತ್ತದೆ. ಬರೀ ಭಾಷಣ ಮಾಡುವುದರಿಂದ ಏನೂ ಪ್ರಯೋಜನ ಇಲ್ಲ, ವಿರೋಧ ಪಕ್ಷದವರು ರಚನಾತ್ಮಕವಾದ ಟೀಕೆಗಳನ್ನು ಮಾಡಲಿ; ಅದು ಸಂತೋಷದ ಸಂಗತಿ ಏನು ಎಂದರೆ, 20 ಅಂಶಗಳ ಕಾರ್ಯಕ್ರಮ ಏನು ಇದೆ, ದೇಶದ ಹಿತದೃಷ್ಟಿಯಿಂದ ನಾವೆಲ್ಲರೂ ಸರ್ವತೋಮುಖವಾದ ಬೆಳವಣಿಗೆಗೆ ರಾಷ್ಟ್ರದ ನಾಯಕಿ ಯವರು ಒಂದು ಕಾರ್ಯಕ್ರಮ ಕೊಟ್ಟಿರುತ್ತಾರೆ. ಅದನ್ನು ನಾವೆಲ್ಲರೂ ಸೇರಿ ಕಾರ್ಯಗತ ಮಾಡೋಣ ಎಂದು ಹೇಳಿ ಅಧ್ಯಕ್ಷರು ನಾಲ್ಕು ಮಾತುಗಳನ್ನು ಹೇಳಲು ಅವಕಾಶ ಕೊಟ್ಟಿದ್ದಕ್ಕಾಗಿ ಅಧ್ಯಕ್ಷರನ್ನು ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಟಿ. ಆರ್. ಶಾಮಣ್ಣ (ಕೋಟೆ).—ಸನ್ಮಾನ್ಯ ಸಭಾಧ್ಯಕ್ಷರೇ, ನಿನ್ನೆ ದಿನ ರಾಜ್ಯಪಾಲರ ಭಾಷಣಕ್ಕೆ ವಂಧನೆಗಳನ್ನರ್ಪಿಸತಕ್ಕ ನಿರ್ಣಯವನ್ನು ಮಂಡಿಸಿದಂತ ಶ್ರೀಮಾನ್ ಪುಟ್ಟಸ್ವಾಮಿಯವರು ಸುಮಾರು ಮೂರು ಗಂಟೆಗಳ ಕಾಲ ಅಂಕಿ ಅಂಶಗಳೊಂದಿಗೆ ಸರಿಯಾದಂತ ಬಣ್ಣವನ್ನು ಕಟ್ಟಿ ಹಾಡನ್ನು ಆಡುವುದಕ್ಕೆ ಪ್ರಯತ್ನಪಟ್ಟಿದ್ದಾರೆ. ಅದೇ ಹಾಡನ್ನು ಇತರರೂ ಕೂಡ ಹಾಡಿದ್ದಾರೆ. ಬರೀ ಅಂಕಿ ಅಂಶಗಳು ಮತ್ತು ಅಂದಚಂದದ ಮಾತುಗಳಿಂದ ಜನಗಳ ಹೊಟ್ಟೆ ತುಂಬಿಸಿದ್ದಾರೆ. ಯಾವುನಾದರೂ ಆಡಳಿತ ದಕ್ಷತೆಯಿಂದ ನಡೆದಿವೆ, ಚೊಕ್ಕಟವಾಗಿ ನಡೆದಿದೆ ಎಂದರೆ, ಎಷ್ಟರ ಮಟ್ಟಿಗೆ ಜನತೆಯ ಅಗತ್ಯಗಳನ್ನು ಅಂದರೆ ಮುಖ್ಯವಾಗಿ ಆಹಾರ, ಬಟ್ಟೆ, ಮತ್ತು ವಸತಿಗಳನ್ನು ಒದಗಿಸತಕ್ಕ ವಿಚಾರದಲ್ಲಿ ಎಷ್ಟುಮಟ್ಟಿಗೆ ಫಲಕಾರಿಯಾಗಿದೆ ಎಂಬುದನ್ನು ಯೋಚನೆ ಮಾಡಬೇಕು. 1969ರಲ್ಲಿ ಹೊಸದಾಗಿ ಸೃಷ್ಟಿಯಾದಂತ ಈ ಆಡಳಿತ, ಕಳೆದ 6–7 ವರ್ಷಗಳ ತನ್ನ ಆಡಳಿತದಲ್ಲಿ ಎಷ್ಟರಮಟ್ಟಿಗೆ ಜನಸಾಮಾನ್ಯರ ಜೀವನದ ಮಟ್ಟ ಕೆಳಗೆ ಇಳಿದಿದೆ ಎಂಬುದನ್ನು ದಯವಿಟ್ಟು ಯೋಚನೆ ಮಾಡಬೇಕು.

MR DEPUTY SPEAKER.—The Hon. Member has given notice of innumerable amendments. I would urge upon him to exhaustively speak on all of them during his speach.

ಶ್ರೀ ಟಿ. ಆರ್. ಶ್ಯಾಮಣ್ಣ.—ಈಗ ಈ ಸರ್ಕಾರ ಎಷ್ಟುಮಟ್ಟಿಗೆ ಪೌಷ್ಟಿಕ ಆಹಾರವನ್ನು ಒದಗಿಸುವುದಕ್ಕೆ ಶಕ್ತಿಯುತವಾಗಿದೆ ಎನ್ನುವುದರ ಬಗ್ಗೆಯೂ ಯೋಚನೆ ಮಾಡಬೇಕು. ಎಷ್ಟು ಜನ ತರಕಾರಿಯನ್ನು ಕೊಂಡು ಆಹಾರವನ್ನು ಉಪಯೋಗಿಸುತ್ತಾರೆ, ಬೇಳೆ ಉಪಯೋಗಿಸುವುದಕ್ಕೆ ಎಷ್ಟು ಜನಕ್ಕೆ ಸಾಧ್ಯವಿದೆ, ಹಾಲನ್ನು ಉಪಯೋಗಿಸುವುದಕ್ಕೆ ಎಷ್ಟು ಜನಕ್ಕೆ ಸಾಧ್ಯವಿದೆ. ಮಾಂಸ ತಿನ್ನತಕ್ಕವರು ಎಷ್ಟು ಮಂದಿ ಇದ್ದಾರೆ ಇದನ್ನು ಯೋಚನೆ ಮಾಡಬೇಕು. ಕೋರ್ಸ್

ಬಟ್ಟೆಯನ್ನು ಕೊಳ್ಳಲಿಕ್ಕೆ ಶಕ್ತಿಯಿಲ್ಲದ ಜನರನ್ನು ಇವತ್ತು ನೋಡುತ್ತಿದ್ದೇವೆ. ಮನೆ ಕಟ್ಟುತಕ್ಕ ಒಂದು ಖರ್ಚಿನ ದುಬಾರಿ, 1969 ರಲ್ಲಿ ನಾನು ಕಟ್ಟಡ ಕಂಟ್ರಾಕ್ಟ್ ಮಾಡುತ್ತಿದ್ದೆ. ಆವೊತ್ತು 2 ಸಾವಿರಕ್ಕೆ ಒಂದು ಚದರ ಕಟ್ಟುತ್ತಿದ್ದರು, ಇವತ್ತು 5 ಸಾವಿರ ಖರ್ಚು ಮಾಡಿದರೂ ಆಗುತ್ತಿಲ್ಲ. ಔಷಧಿಗಳ ಬೆಲೆ ಎಷ್ಟು ಏರಿದೆ ಸ್ವಲ್ಪ ಲೆಕ್ಕಹಾಕಿ ಮತ್ತು ಆಹಾರ ಉತ್ಪಾದನೆ, ಕೈಗಾರಿಕೆ ಉತ್ಪಾದನೆ, ಮನೆಗೆ ಉಪಯೋಗಿಸುವ ವಿದ್ಯುಚ್ಛಕ್ತಿ ದರ ಒಂದಕ್ಕೆ ಎರಡರಷ್ಟಾಗಿದೆ. ರೈತರ ಅಭಿವೃದ್ಧಿಗಾಗಿ ಕಂಕಣ ಬದ್ಧರಾಗಿದ್ದೇವೆಂದು ಹೇಳುವ ಸರ್ಕಾರ ಒಂದು ಕಡೆ ನೀರಿನ ದರ, ಮತ್ತೊಂದು ಕಡೆ ಗೊಬ್ಬರದ ಬೆಲೆ ಹೆಚ್ಚಿಸುತ್ತಿದೆ. ಅಗತ್ಯವಾಗಿ ಬೇಕಾದಂತ ಲೇಬರ್ ಇಂದು ಬಹಳ ಕಷ್ಟದಲ್ಲಿದ್ದಾರೆ. ಅವರಿಗೆ ಹೆಚ್ಚಿನ ವೇತನ ಕೊಡಬೇಕಾದ್ದುದು ಅವಶ್ಯಕ. ಆಡಳಿತದಲ್ಲಿರುವ ಸರ್ಕಾರ ಸ್ವರ್ಗವನ್ನೇ ಭೂಲೋಕಕ್ಕೆ ಬರುವಂತೆ ಮಾಡುತ್ತೇವೆಂದು ಹೇಳಿದೆ. ಯಾವುದಕ್ಕೆ ಅಭಾವ ಇಲ್ಲ ಎಂದರೆ, ಹಣದುಬ್ಬರಕ್ಕೆ ಅಭಾವ ಇಲ್ಲ. ದಿನೇ ದಿನೇ ಹಣದ ಬೆಲೆ ಕುಂಠಿತವಾಗುತ್ತದೆ. ಜನತೆಯ ನೈತಿಕಮಟ್ಟ ಅಧೋಗತಿಗೆ ಬಂದಿದೆ. ಲಂಚದ ಹಾವಳಿ ದಿನೇ ದಿನೇ ಹೆಚ್ಚುರತಕ್ಕಂಥದ್ದನ್ನು ನೋಡುತ್ತಿದ್ದೇವೆ.

ಮತ್ತು ಕುಡಿಯುವುದಕ್ಕೆ ಮಿತಿ ಇಲ್ಲದೇ ಇದ್ದಂಥ ರೀತಿಯಲ್ಲಿ ಆಗಿದೆ. ಅಲ್ಲದೆ ಪಾನ ನಿರೋಧ ತೆಗೆದು ಹಾಕಿದಾಗ 15–16 ಕೋಟಿ ರೂಪಾಯಿ ಇದ್ದಂಥಾದ್ದು ಈಗ 50 ಕೋಟಿ ರೂಪಾಯಿಯಷ್ಟು ಕುಡಿಯತಕ್ಕಂಥ ಒಂದು ಅಭ್ಯಾಸ ಕೂಡ ಹೆಚ್ಚು ಮಾಡಿರತಕ್ಕಂಥಾದ್ದನ್ನು ನೋಡಿದ್ದೇನೆ. ಮತ್ತು ಗರೀಬೀ ಹಟಾವೋದಿಂದ ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುತ್ತೇವೆಂದು ಒಂದು ಕಾಲದಲ್ಲಿ ಕೂಗು ಇದ್ದುದು ಈವೊತ್ತಿನ ದಿವಸ ಆ ಕೆಲಸ ಎಷ್ಟರಮಟ್ಟಿಗೆ ನಡೆದಿದೆ ಎನ್ನುವುದನ್ನು ಅಂಕಿ ಅಂಶಗಳಿಂದ ಪರಿಶೀಲನೆ ಮಾಡಿದರೆ ತಮಗೆ ಗೊತ್ತಾಗುತ್ತದೆ. ಜೊತೆಗೆ ಜನಗಳು ಕೆಲವರು ಸಾಹುಕಾರರಾಗಿದ್ದವರು ಬಡವರಾಗಿದ್ದಾರೆ ಅದಕ್ಕೆ ನಾನು ಯಾವ ವಿಧವಾದಂಥ ಕಣ್ಣೀರನ್ನು ಸುರಿಸುವುದಿಲ್ಲ. ಆದರೆ ಎಷ್ಟೋ ಜನ ಬಡವರು ಸಾಹುಕಾರರಾಗಿದ್ದಾರೆ. ಅದನ್ನು ಯೋಜನೆ ಮಾಡಬೇಕಾದ ಪರಿಸ್ಥಿತಿ ಒದಗಿದೆ. ಮತ್ತು ಒಂದೊಂದು ಕಾಲದಲ್ಲಿ ಒಂದೊಂದು ಘೋಷಣೆಯನ್ನು ಹಾಕಿ ಚುನಾವಣೆಯಲ್ಲಿ ಗೆಲ್ಲತಕ್ಕಂಥ ಒಂದು ಉದ್ದೇಶ ಇಟ್ಟುಕೊಂಡು ಆಡಳಿತ ನಡೆಸಿಕೊಂಡು ಬರುತ್ತಿದ್ದೀರಿ. ನಾನು ಈ ಬಗ್ಗೆ ಮೊಟ್ಟ ಮೊದಲನೆಯದಾಗಿ ಹೇಳಬೇಕಾದರೆ ಹಿಂದೆ 1969 ರಲ್ಲಿ ಚುನಾವಣೆ ಆದಾಗ ಬ್ಯಾಂಕ್ ನ್ಯಾಷನಲೈಸೇಷನ್ ಮಾಡುತ್ತೇವೆ ಅಂದು ಒಂದು ಘೋಷಣೆ ಹಾಕಿದರು. ಆದರೆ ಈವೊತ್ತಿನ ದಿವಸ ಬ್ಯಾಂಕ್ ನ್ಯಾಷನಲೈಸೇಷನ್ ಪರಿಸ್ಥಿತಿ ಏನಾಗಿದೆ ಎಂದರೆ ಶೇಕಡ 21 ಪರ್ಸೆಂಟ್ ಬಡ್ಡಿ ಹಾಕಿ ವಸೂಲ್ ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ ನಾವು ಮಾರ್ವಾಡಿ ಬಡ್ಡಿ ಎಂದು ಏನು ಹೇಳುತ್ತಿದ್ದೆವೋ ಇಂದು ಆ ಒಂದು ಬಡ್ಡಿ ಈ ಬ್ಯಾಂಕ್‌ನಲ್ಲಿ ಕಾಣುತ್ತಾ ಇದ್ದೇವೆ. ಯಾರಾದರೂ ಕೂಡ 21 ಪರ್ಸೆಂಟ್ ಬಡ್ಡಿ ಕೊಟ್ಟು ಸಾಲ ತೆಗೆದುಕೊಂಡು ವ್ಯವಹಾರ ಲಾಭ ಮಾಡುವುದಕ್ಕಾಗುತದೆಯೇ ಅನ್ನುವುದನ್ನು ಯೋಚನೆ ಮಾಡಬೇಕಾಗುತ್ತದೆ. ಮತ್ತು ನ್ಯಾಷನಲೈಸ್ಡ್ ಬ್ಯಾಂಕ್ಸ್ ಕೋಆಪರೇಟೀವ್ ಬ್ಯಾಂಕ್‌ಗಳಿಗೂ ಷಾರ್ಟ್‌ಟರ್ಮ್ ಡಿಪಾಸಿಟ್‌ಗೆ 17 ಪರ್ಸೆಂಟ್ ಬಡ್ಡಿ ಕೊಡುತ್ತಾರೆ. ಆ ಸಾಲ ತೆಗೆದುಕೊಂಡು ಅವರು 21 ಪರ್ಸೆಂಟ್‌ನಂತೆ ಬಡ್ಡಿ ಹಾಕಿ ಸಾಲ ಕೊಟ್ಟರೆ ಯಾವ ಬ್ಯಾಂಕ್ ಉಳಿಯುತ್ತದೆ ಎನ್ನುವುದನ್ನು ನೋಡಬೇಕು. ಈ ನ್ಯಾಷನಲೈಸೇಷನ್ ಬ್ಯಾಂಕ್ಸ್ ಯಾವರೀತಿ ಬೆಳದಿದೆ ಎಂದರೆ ನಮ್ಮ ಗಾಂಧೀ ಬಜಾರ್‌ನಲ್ಲಿ ತೆಗೆದುಕೊಂಡರೆ ಅರ್ಧಮೈಲಿ ಸುತ್ತಳತೆಯೊಳಗೆ 24 ನ್ಯಾಷನಲೈಸೇಷನ್ ಬ್ಯಾಂಕ್ಸ್ ಇದೆ. ಆದರೆ ಒಂದು ಮಾತ್ರ ಇದರಿಂದ ಉಪಯೋಗವಾಗಿರುವುದು ಎಷ್ಟೋ ಜನರಿಗೆ ಕೆಲಸ ಸಿಕ್ಕಿದೆ. ಈ ಬ್ಯಾಂಕ್ ನ್ಯಾಷನಲೈಸೇನ್ ಮಾಡಿದಾಗ ಹೇಳಿದರು ಟ್ಯಾಕ್ಸಿ ಓನರ್ಸ್‌ಗೆ ಸಹಾಯ ಮಾಡುತ್ತೇವೆ. ಆಟೋರಿಕ್ಷಾದವರಿಗೆ ಸಹಾಯ ಮಾಡುತ್ತೇನೆ. ರೈತರಿಗೆ ಸಹಾಯ ಮಾಡುತ್ತೇನೆ ಎಂದು. ಅವರಿಂದ ಎಷ್ಟರ ಮಟ್ಟಿಗೆ ಸಾಲ ದೊರಕುತ್ತದೆ ಎನ್ನುವುದನ್ನು ಬ್ಯಾಂಕ್‌ನ ಜೊತೆಯಲ್ಲಿ ವ್ಯವಹಾರ ಮಾಡಿದರಿಗೆ ಗೊತ್ತಿದೆ. ಮತ್ತೊಂದು ಕಾಲದಲ್ಲಿ ಬಾಂಗ್ಲಾ ದೇಶದ ಯುದ್ಧದಲ್ಲಿ ನಾವು ವಿಜಯ ಪತಾಕೆಯನ್ನು ಹಾರಿಸಿದ್ದೇವೆ ಎಂದು ಹೇಳುತ್ತಾರೆ. ಅದಕ್ಕೆ 400, 500 ಕೋಟಿ ರೂಪಾಯಿಗಳು ಖರ್ಚಾಯಿತು ಅಲ್ಲದೆ ಸಹಸ್ರಾರು ಜನ ಪ್ರಾಣವನ್ನು ತೆತ್ತರು. ಒಂದು ಕಾಲದಲ್ಲಿ ಈ ಬಗ್ಗೆ ಏನು ಒಂದು ಹೆಮ್ಮೆಯಾಗಿತ್ತೋ ಈವೊತ್ತು ಅದರ ಪ್ರತಿಫಲ ಏನಾಗಿದೆ ಅನ್ನುವುದನ್ನು ಯೋಚನೆ ಮಾಡಬೇಕಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಬಾಂಗ್ಲಾ ದೇಶದ ಜೊತೆ ಯುದ್ಧ ಮಾಡಿದ್ದು ತಪ್ಪೇ ?

ಶ್ರೀ ಟಿ. ಆರ್. ಶಾಮಣ್ಣ.—ತಪ್ಪು ಎಂದು ನಾನು ಹೇಳುವುದಿಲ್ಲ. ಉಪಕಾರವಾಗಿದೆ. ಆದರೆ ಅದರ ಪ್ರತಿಫಲ ನಮಗೆ ದೊರಕುತ್ತಾ ಇದೆಯೇ ಅನ್ನುವುದನ್ನು ಯೋಚನೆ ಮಾಡಿ. ಇನ್ನು ಈಗ ಒಂದು ಘೋಷಣೆ ಹೊರಡಿಸಿದ್ದಾರೆ. 20 ಅಂಶಗಳ ಒಂದು ಕಾರ್ಯಕ್ರಮಗಳ ವಿಚಾರ ಹೇಳುತ್ತಿದ್ದಾರೆ. ಈ 20 ಅಂಶದ ಕಾರ್ಯಕ್ರಮ ಏನು ಇದೆಯೋ ಅವನ್ನು ಸರಿಯಾಗಿ ಈ ಆಡಳಿತ ನಡೆಸಿ ಜನಗಳಿಗೆ ಒಳ್ಳೆಯದಾಗುವ ರೀತಿಯಲ್ಲಿ ಮಾಡಿದರೆ ಅದಕ್ಕೆ ನಾನು ಯಾವಾಗಲೂ ಸ್ವಾಗತ ಮಾಡುತ್ತೇನೆ. ನನ್ನ ಅಪೇಕ್ಷೆ ಜನಗಳಿಗೆ ಒಳ್ಳೆಯದಾಗಬೇಕು ಎಂದು. ಅಲ್ಲದೆ ಅದಕ್ಕೆ ಯಾರೂ ಅಡ್ಡಿ ಅಡಚಣೆ ಮಾಡುವುದಿಲ್ಲ ಎಂದು ನಾನು ತಿಳಿದಿದ್ದೇನೆ. ಈ 20 ಅಂಶಗಳ ಪೈಕಿ ಈಗ ಬಾಂಡೆಡ್ ಲೇಬರ್‌ನ್ನು ತೆಗೆದುಹಾಕಿದ್ದಾರೆ. ಈ ಬಗ್ಗೆ ನಾನು ಒಂದೇ ಒಂದು ವಿಷಯ ಹೇಳಬೇಕಾಗಿದೆ. ಎಷ್ಟೋ ಜನ ಮಂತ್ರಿಗಳು ಸರ್ಕಾರೀ ಸಿಬ್ಬಂದಿಯನ್ನು ಉಪಯೋಗಿಸಿಕೊಂಡು ಎಷ್ಟೋ ಕೆಲಸಗಳನ್ನು ಮಾಡಿಸಿಕೊಳ್ಳುತ್ತಿದ್ದಾರೆ. ಎಷ್ಟೋ ಜನ ಅಧಿಕಾರಿಗಳು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆ.

ಒಬ್ಬ ಸದಸ್ಯರು —ಇದರಲ್ಲಿ ಬಾಂಡೆಡ್ ಲೇಬರ್ ವಿಷಯ ಬರುವುದಿಲ್ಲ, ನೀವು ಬಾಂಡೆಡ್ ಲೇಬರ್ ತೆಗೆದು ಹಾಕುವುದು ಸರಿಯಲ್ಲ ಎಂದು ಹೇಳುತ್ತೀರಾ ?

ಶ್ರೀ ಟಿ. ಆರ್. ಶಾಮಣ್ಣ.—ನಾನು ಬಾಂಡೆಡ್ ಲೇಬರನ್ನು ತೆಗೆದು ಹಾಕುವುದು ಸರಿಯಲ್ಲ ಎಂದು ಹೇಳುತ್ತಿಲ್ಲ. ಯಾರಾದರೂ ಒಂದು ನೀತಿಯನ್ನು ಹೇಳುವಾಗ ಆ ನೀತಿಯಂತೆ ಅವರು ನಡೆದುಕೊಳ್ಳಬೇಕು ಎಂದು ಹೇಳುತ್ತಿದ್ದೇನೆ. ಇಂತಹ ಒಳ್ಳೆಯ ಕೆಲಸ ಮಾಡತಕ್ಕಂಥಾವರು ತಾವೇ ತಮ್ಮ ಕೆಲಸವನ್ನು ಮಾಡಿಕೊಳ್ಳುವುದಕ್ಕೆ ಏತಕ್ಕೆ ಪ್ರಯತ್ನ ಮಾಡಬಾರದು ಅನ್ನುವುದನ್ನು ಸ್ವಲ್ಪ ಯೋಚನೆ ಮಾಡಿ ಎಂದು ಹೇಳುತ್ತಿದ್ದೇನೆಯೇ ಹೊರತು, ಇನ್ನೇನೂ ಅಲ್ಲ. ಅವರು ಬೇರೆಯವರಿಗೆ ನೀತಿ ಹೇಳುವಾಗ ಅವರು ಒಳ್ಳೆಯ ನೀತಿವಂತರಾಗಿ ನಡೆದುಕೊಳ್ಳಬೇಕು ಎಂದು ನಾನು ಹೇಳುತ್ತಿದ್ದೇನೆ. ಆದುದರಿಂದ ನಾನು ಹೇಳುವುದು ಈರೀತಿಯಾದಂಥಾ ಘೋಷಣೆಗಳು ಬರೇ ಎಲೆಕ್ಷನ್‌ಗೆ ಉಪಯೋಗಿಸಿಕೊಳ್ಳುವಂಥಾ ಘೋಷಣೆಗಳಾಗದಿರಲಿ. ನಿಜವಾಗಿ ಯಾರಿಗೆ ಉಪಕಾರ ಮಾಡಬೇಕು ಅಂತ ಇದ್ದೀರೋ ಅವರಿಗೆ ನಿಜವಾಗಿ ಪ್ರಯೋಜನ ಆಗುವ ಪಕ್ಷದಲ್ಲಿ ನಾನು ನಿಜವಾಗಿಯೂ ತಮ್ಮ ಅಧಿಕಾರವೇ ನೂರಾರು ವರ್ಷಗಳು ಇರಲಿ ಎಂದು ಹೇಳುತ್ತೇನೆ. ನಾನು ಇಂಥಾ ಅಧಿಕಾರ ಬೇಡ ಎಂದು ಹೇಳುವುದಿಲ್ಲ. ಆದರೆ ಹೇಳುವುದು ಒಂದು ಮಾಡುವುದು ಮತ್ತೊಂದು ಆದರೆ ಕಷ್ಟ. ಈ ಘೋಷಣೆಗಳನ್ನು ಚುನಾವಣೆಗೆ ಉಪಯೋಗಿಸಿಕೊಂಡರೆ ಖಂಡಿತವಾಗಿಯೂ ನಾನು ವ್ಯಸನ ಪಡಬೇಕಾಗುತ್ತದೆ. ನಾನು ಯಾವ ರಾಜಕೀಯ ಪಕ್ಷದಲ್ಲೂ ಇಲ್ಲ, ನನಗೆ ಮಂತ್ರಿಯಾಗಬೇಕು ಅನ್ನುವ ಅಪೇಕ್ಷೆಯೂ ಇಲ್ಲ. ಆದರೆ ಜನರಿಗೆ ಅನುಕೂಲವಾಗತಕ್ಕಂಥ ಒಂದು ಸರಿಯಾದ ರೀತಿ ಮಾರ್ಗದರ್ಶನವಾದರೆ ಆವಾಗ ಮಾತ್ರ ಆಳರಸರು ನಡೆದುಕೊಳ್ಳುತ್ತಾರೆ ಅನ್ನುವ ಭಾವನೆ ಬರುತ್ತದೆ. ಇಲ್ಲದೇ ಹೋದರೆ ಕನ್ನಡದಲ್ಲಿ ಇದಕ್ಕೆ ಒಂದು ಗಾದೆ ಇದೆ ಮಾಡುವುದು ಅನಾಚಾರ ಮನೆ ಮುಂದೆ ಬೃಂದಾವನ ಎಂದು ಇದೆ. ಆರೀತಿ ಆಗಬಾರದು ಎಂದು ಹೇಳುತ್ತೇನೆ.

ಇನ್ನು ಡೆಟ್ ರಿಲೀಫ್ ಬಗ್ಗೆ ಕೆಲವು ಕ್ರಮಗಳನ್ನು ತೆಗೆದುಕೊಂಡಿದ್ದೀರಿ. ಬಹಳ ಸಂತೋಷದ ವಿಚಾರ. ಆದರೆ ಡೆಟ್ ರಿಲೀಫ್ ಬಗ್ಗೆ ಸಾಕಷ್ಟು ಗಮನ ಸರ್ಕಾರ ಕೊಡದೇ ಹೋದರೆ ಅದು ಯಾರ ಹಿತಕ್ಕೂ ಒಳ್ಳೆಯದಾಗುವುದಿಲ್ಲ. ಆ ಬಗ್ಗೆ ಒಂದು ಕಾಯಿದೆ ಬರುತ್ತದೆ, ಆ ಬಗ್ಗೆ ಸಾಕಷ್ಟು ಗಮನ ಹರಿಸಿ, ಇಲ್ಲದೇ ಹೋದರೆ ನಿಜವಾಗಿಯೂ ಒಳ್ಳೆಯದಾಗುವುದಿಲ್ಲ. ಡೆಟ್ ರಿಲೀಫ್‌ನಿಂದ ಮನೆ ಮುಂದೆ ಒಂದು ಹೆಣ ಬಿದ್ದಿದ್ದರೂ ಕೂಡ ಆತನಿಗೆ ದುಡ್ಡು ಸಿಕ್ಕುವುದಿಲ್ಲ ಇದಕ್ಕೆ ಮಾರ್ಪಾಡನ್ನು ತರುವಾಗ ಅದರಿಂದ ಆಗತಕ್ಕಂಥ ವಿಶೇಷ ಸನ್ನಿವೇಶಗಳನ್ನು ಸರಿಪಡಿಸದೇ ಹೋದ ಪಕ್ಷದಲ್ಲಿ ನೀವು ಈ ಬಗ್ಗೆ ಏನು ಒಂದು ಉಪಕಾರ ಮಾಡಬೇಕು ಎಂದು ಹೋಗುತ್ತಿದ್ದೀರೋ, ಅದು ಸರಿಯಾಗಿ ಉಪಕಾರವಾಗುತ್ತದೆಯೇ ಅನ್ನುವುದದ್ದು ಎಚ್ಚರಿಕೆಯಿಂದ ನೋಡಬೇಕು, ಎಂದು ಹೇಳುತ್ತೇನೆ. ಖಾಸಗಿಯವರಲ್ಲೇ ಆಗಲಿ ಎಲ್ಲೇ ಆಗಲಿ ಸಾಲ ಸಿಗದೇ ಇರುವ ರೀತಿಯಲ್ಲಿ ಆತನು ಬಹಳ ಕಷ್ಟಪಡಬೇಕಾಗುತ್ತದೆ ಎಂದು ನಾನು ಎಚ್ಚರಿಕೆ ಕೊಡುತ್ತೇನೆ.

ಇನ್ನು ಬಸ್ ನ್ಯಾಷನಲೈಸೇಷನ್ ಬಗ್ಗೆ ಕೆಲವರು ಮಾತನಾಡಿದರು. ವಿರೋಧ ಮಾಡ ತಕ್ಕಂಥಾವರು ಈ ಸಭೆಯಲ್ಲಿ ಇದ್ದಾರೆಂದು ನಾನು ತಿಳಿದುಕೊಳ್ಳುವುದಿಲ್ಲ. ಈಗ ಬಸ್ ನ್ಯಾಷನಲೈ ಸೇಷನ್ ಮಾಡಿದ್ದೀರಿ. ನಾನು ಕೇಳುವುದು ಇಷ್ಟೇ. ಜನರಿಗೆ ತೊಂದರೆ ಆಗದೇ ಇದ್ದ ಹಾಗೆ, ಪ್ರಯಾಣಿಕರಿಗೆ ತೊಂದರೆ ಆಗದೇ ಇದ್ದ ಹಾಗೆ ಅನುಕೂಲ ಮಾಡಿಕೊಡಿ. ಇದರಲ್ಲಿ ಏನಾಗಿದೆ ಎಂದರೆ ಈ ಬಗ್ಗೆ ತಾವು ತೆಗೆದುಕೊಳ್ಳತಕ್ಕಂಥಾ ತೀವ್ರ ಕಾರ್ಯಕ್ರಮದಿಂದ ಮುಚ್ಚುಗೆಯನ್ನು ತೋರಿಸಬೇಡಿ. ಇದರಿಂದ ಆಗತಕ್ಕಂಥಾ ಪರಿಣಾಮದ ಕಡೆಗೆ ತಮ್ಮ ಗಮನ ಹರಿಯಲ್ಲಿ ಎಂದು ಹೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ.

ಇನ್ನು ಭೂಸುಧಾರಣೆಯ ಬಗ್ಗೆ ಬಹಳವಾದಂಥ ಪ್ರಶಂಸೆಗಳು ಮತ್ತು ಹೊಗಳಿಕೆಗಳು ಕೇಳಿ ಬರುತ್ತಿವೆ. ಆದರೆ ಇದರ ಹಿಂದೆ ಎಷ್ಟು ಜನರು ನೊಂದಿದ್ದಾರೆಂಬುದನ್ನು ಸರ್ಕಾರದವರು ಯೋಚನೆ ಮಾಡಬೇಕು. ನೂರಾರು ಎಕರೆ ಜಮೀನು ಇಟ್ಟುಕೊಂಡು ಶ್ರೀಮಂತ ಜೀವನ ಮಾಡುತ್ತಿರುವ ಜನರ ಬಗ್ಗೆ ಯಾರೂ ಕಣ್ಣೀರು ಹರಿಸಬೇಕಾಗಿಲ್ಲ ; ಆದರೆ ವಿಧವೆಯರು, ಅಲ್ಪ ಸ್ವಲ್ಪ ಜಮೀನನ್ನೇ ನಂಬಿಕೊಂಡಿದ್ದಂತಹ ಬಡವರು ಇದರಿಂದ ಎಷ್ಟು ಕಷ್ಟಪಡುತ್ತಿದ್ದಾರೆಂಬು ದನ್ನು ಯೋಚನೆ ಮಾಡಿ ನೋಡಬೇಕು. ಯಾರು ಭೂಮಿಯನ್ನು ಸಾಗುವಳಿ ಮಾಡುತ್ತಾರೋ ಅಂತಹವರಿಗೆ ಅವರ ಮಾಲೀಕತ್ವವನ್ನು ಕೊಡಬೇಕೆಂಬ ಮಾತನ್ನು ನಾನೂ ಸಹ ಒಪ್ಪುತ್ತೇನೆ. ಆದರೆ ಒಬ್ಬರಿಗೆ ಉಪಕಾರ ಮಾಡುವಾಗ ಇನ್ನೊಬ್ಬರಿಗೆ ಅಪಕಾರ ಮಾಡುವುದು ಸರಿಯಲ್ಲ ; ಹಾವನ್ನು ಹೊಡೆದು ಹದ್ದಿಗೆ ಹಾಕಿದರು ಎಂಬಂತೆ ಮಾಡಿದರೆ, ಅದನ್ನು ಒಪ್ಪುವುದಕ್ಕೆ ಸಾಧ್ಯವಿಲ್ಲ; ನಾನು ಹೇಳುವುದು ಇಷ್ಟೆ, ಬಡವರು, ನಿರ್ಗತಿಕರು, ವಿಧವೆಯರು, ಇಂತಹವರಿಂದ ಪಡೆದಂಥ ಅಲ್ಪಸ್ವಲ್ಪ ಜಮೀನಿಗೆ ಕೂಡಲೇ ಪರಿಹಾರ ಕೊಡುವುದರ ಮೂಲಕ ಅವರಿಗೆ ಉಪಕಾರ ಮಾಡಬೇಕು ಇಲ್ಲದಿದ್ದರೆ ಅವರು ನಿಮ್ಮನ್ನು ಶಪಿಸುತ್ತಾರೆಂದು ಹೇಳುತ್ತೇನೆ.

MR. DEPUTY SPEAKER —When the Hon. Member Shri S.M. Sheeranali Chandrashekher was speaking, certain objections were raised about the remarks made by him by using certain words. I assured the House that I would get the records and see whether they are objectionable. Now the records are with me. I feel that it is not well worded. I therefore order that the entire sentence may be expunged.

ಶ್ರೀ ಟಿ.ಆರ್. ಶಾಮಣ್ಣ.— ಇನ್ನು ಮೈನಾರಿಟೀಸ್ ಮತ್ತು ಷೆಡ್ಯೂಲ್ ಕ್ಯಾಸ್ಟ್‌ನವರಿಗೆ ಸಾಕಷ್ಟು ಸಹಾಯ ಮಾಡಬೇಕೆಂಬ ನಿಲುವನ್ನು ಸರ್ಕಾರ ಹೊಂದಿದೆ. ಇದರ ಬಗ್ಗೆ ಸರ್ಕಾರ ದಿಂದ ಸಾಕಷ್ಟು ಹೇಳಿಕೆಗಳು ಮತ್ತು ಕಾರ್ಯಕ್ರಮಗಳು ಸಹ ಕೇಳಿಬರುತ್ತಿದೆ. ಆದರೆ ಇಂದಿಗೂ ಸಹ ನನಗೆ ತಿಳಿದಂತೆ ಅನೇಕ ಹರಿಜನ ಬಾಲಕರು ತಮ್ಮ ತಂದೆತಾಯಿಂದಿರ ಜೊತೆಯಲ್ಲಿ ಹೋಗಿ ಕೂಲಿ ಕೆಲಸ ಮಾಡುತ್ತಿದ್ದಾರೆ. ಈ ಮಕ್ಕಳಿಗೆ ಎಲ್ಲಿಯವರೆಗೆ ವಿದ್ಯಾಭ್ಯಾಸದ ಸೌಲಭ್ಯವನ್ನು ಕಡ್ಡಾಯವಾಗಿ ಕೊಡುವುದಿಲ್ಲವೋ ಅಲ್ಲಿಯವರೆಗೆ ಖಂಡಿತವಾಗಿ ಈ ಜನಾಂಗ ಉದ್ಧಾರ ವಾಗುವುದಿಲ್ಲವೆಂದು ಹೇಳತ್ತೇನೆ. ಈ ಜನಾಂಗದವರಿಗೆ ಸರ್ಕಾರದವರು ಕೊಡಬೇಕೆಂದಿರುವ ಸೌಲಭ್ಯಗಳನ್ನು ಕೇವಲ ಈ ಜನಾಂಗದ ಲೀಡರ್‌ಗಳೇ ಪಡೆದುಕೊಳ್ಳಲು ಅವಕಾಶ ಮಾಡಿ ಕೊಳ್ಳದೆ ಕೆಳಮಟ್ಟದಲ್ಲಿರುವವರಿಗೆ ಆ ಒಂದು ಸೌಲಭ್ಯ ಸಿಗುವಂತೆ ಮಾಡಬೇಕು ; ಇಂದಿಗೂ ಸಹ ಎಷ್ಟೋ ಜನರು ಛತ್ರಗಳ ಹತ್ತಿರ ಊಟ ಮಾಡಿದ ಎಂಜಲು ಎಲೆಗಳನ್ನು ಬಿಸಾಕಿದರೆ, ಅದರಲ್ಲಿರುವ ಅನ್ನವನ್ನು ತೆಗೆದುಕೊಂಡು ತಿನ್ನುತ್ತಿದ್ದಾರೆ. ಮತ್ತು ಪೂಟ್‌ಪಾತ್‌ಗಳಲ್ಲಿ ಮಲಗಿ ಕೊಂಡು ಜೀವನ ಮಾಡುವವರು ಬೇಕಾದಷ್ಟು ಜನರಿದ್ದಾರೆ. ಈ ಜನಾಂಗದ ಸಣ್ಣ ಮಕ್ಕಳನ್ನು ಶಾಲೆಗಳಿಗೆ ಕಳುಹಿಸದೆ ಕೂಲಿ ಕೆಲಸಕ್ಕೆ ಕಳುಹಿಸುವುದರಿಂದ ಅವರ ಮುಂದೆ ಬರಲು ಸಾಧ್ಯ ವಾಗುತ್ತಿಲ್ಲ ; ಅವರು ಎಲ್ಲಿಯವರೆಗೆ ವಿದ್ಯಾಭ್ಯಾಸದಲ್ಲಿ ಮುಂದೆ ಬರುವುದಿಲ್ಲವೋ ಅಲ್ಲಿಯವರೆಗೆ ಈ ರಾಜ್ಯವನ್ನು ಸುಖೀರಾಜ್ಯವೆಂದು ಹೇಳುವುದಕ್ಕಾಗುವುದಿಲ್ಲ : ಈ ಅಂಶವನ್ನು ಇಂದು ಆಡಳಿತ ನಡೆಸುತ್ತಿರುವವರು ತಮ್ಮ ಆತ್ಮವನ್ನು ಮುಟ್ಟಿಕೊಂಡು ಯೋಚನೆ ಮಾಡಿ ನೋಡಿದರೆ ತಿಳಿಯು ತ್ತದೆ. ಕೇವಲ ಘೋಷಣೆ ಮಾಡತಕ್ಕಂಥ ಸರ್ಕಾರ ಇದು ಆಗಬಾರದು, ಘೋಷಣೆ ಮಾಡಿದ್ದನ್ನು

ಕಾರ್ಯರೂಪಕ್ಕೆ ತಂದು, ಆದರಿಂದ ಬಡಜನರಿಗೆ ಒಳ್ಳೆಯದಾಗುವಂತೆ ಮಾಡಬೇಕು. ಇದರ ಜೊತೆಗೆ ಈಗಿನ ತೆರಿಗೆ ಹೊರೆಯನ್ನು ಕಡಿಮೆ ಮಾಡಬೇಕು. ಈಗ ಬಡಜನರು ಹೊರಲಾಗದಷ್ಟು ತೆರಿಗೆಯನ್ನು ಸರ್ಕಾರದವರು ಹಾಕಿದ್ದಾರೆ. ಇದರಿಂದ ಬಡವರು ಉತ್ತಮಸ್ಥಿತಿಗೆ ಬರಲು ಸಾಧ್ಯ ವಾಗುವುದಿಲ್ಲ: ಅನುಕೂಲವಿರುವ ಜನರು ಎಷ್ಟಾದರೂ ತೆರಿಗೆ ಕೊಟ್ಟು ಜೀವನ ಮಾಡುತ್ತಾರೆ. ಆದರೆ ನಿಜವಾಗಿ ಅದರ ಒಂದು ಹೊರೆ ಬೀಳುವುದು ಬಡವರ ಮೇಲೆ. ಜನಸಾಮಾನ್ಯರು ಉಪ ಯೋಗ ಮಾಡುವ ಸಾಮಾನುಗಳ ಮೇಲೆ ತೆರಿಗೆಯನ್ನು ಜಾಸ್ತಿ ಹಾಕಿದರೆ ಅವರು ನೊಂದು ಕೊಳ್ಳುತ್ತಾರೆ. ಆದಕಾರಣ ತೆರಿಗೆ ಜಾಸ್ತಿಯಾಗದಂತೆ ಸರ್ಕಾರದವರು ನೋಡಿಕೊಳ್ಳಬೇಕು. ಇದೇ ಸಂದರ್ಭದಲ್ಲಿ ಒಂದು ಅಂಶವನ್ನು ಮಾನ್ಯ ಮಂತ್ರಿಗಳಲ್ಲಿ ಅರಿಕೆ ಮಾಡಿಕೊಂಡರೆ ಅವರು ತಪ್ಪು ತಿಳಿದುಕೊಳ್ಳುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಏನೆಂದರೆ, ಇಂದು ಸರ್ಕಾರ ದವರು ಅನೇಕ ರೀತಿಯ ಬೋರ್ಡುಗಳನ್ನು ರಚನೆ ಮಾಡಿ ಅದಕ್ಕೆ ತಮ್ಮ ಪಕ್ಷದವರನ್ನೇ ನೇಮಕ ಮಾಡುವುದರ ಮೂಲಕ ತಮ್ಮ ಪಕ್ಷವನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡುತ್ತಿದ್ದಾರೆ. ಇದರಿಂದ ದೇಶಕ್ಕೆ ಕಲ್ಯಾಣವಾಗುವುದಿಲ್ಲ; ಕೇವಲ ತಮ್ಮ ಪಾರ್ಟಿಯನ್ನು ಬೆಳೆಸಬೇಕೆಂಬ ಉದ್ದೇಶದಿಂದ ಇಂತಹ ಬೋರ್ಡುಗಳಿಗೆ ಕೆಲವರನ್ನು ಅರ್ಹತೆ ಇರಲಿ ಇಲ್ಲದಿರಲಿ ನೇಮಕ ಮಾಡುತ್ತಿದ್ದಾರೆ. ಇದು ಸರಿಯಾದ ಮಾರ್ಗವಲ್ಲ; ಆ ಬೋರ್ಡುಗಳಿಗೆ ನಿಮ್ಮ ಪಾರ್ಟಿಯ ಜನರನ್ನೇ ಹಾಕಿದರೂ ಸಹ, ಒಳ್ಳೆಯ ಅರ್ಹತೆಯುಳ್ಳವರನ್ನು, ಚೆನ್ನಾಗಿ ಕೆಲಸ ಮಾಡುವವರನ್ನು ನೋಡಿ ನೇಮಕ ಮಾಡ ಬೇಕು. ಮುಖ್ಯವಾಗಿ ಜನರ ಅನುಕೂಲಕ್ಕಾಗಿ ನಿಜವಾದ ಅವಶ್ಯಕತೆಯಿದ್ದರೆ ಮಾತ್ರ ಬೋರ್ಡು ಗಳನ್ನು ರಚನೆ ಮಾಡಬೇಕೇ ಹೊರತು, ತಮ್ಮ ಪಾರ್ಟಿಯ ಜನರನ್ನು ಸಾಕುವ ಸಲುವಾಗಿ ಬೋರ್ಡುಗಳನ್ನು ರಚನೆ ಮಾಡಬಾರದೆಂದು ಹೇಳುತ್ತೇನೆ.

ಇನ್ನು ತುರ್ತುಪರಿಸ್ಥಿತಿ ಬಗ್ಗೆ ಹೇಳಬೇಕೆಂದರೆ, ಇದನ್ನು ಜಾರಿಗೆ ತರದಿದ್ದರೆ ಇಡೀ ದೇಶವೇ ಸರ್ವನಾಶವಾಗುತ್ತಿತ್ತು. ಎಂದು ಹೇಳುತ್ತಿದ್ದಾರೆ. ಅವರೆ ತುರ್ತುಪರಿಸ್ಥಿತಿ ಜಾರಿಯಲ್ಲಿರುವ ಸಂದರ್ಭದಲ್ಲಿಯೇ ಸಂಜಯಗಾಂಧಿಯವರನ್ನು ಮೆರವಣಿಗೆ ಮಾಡಲು ಲಕ್ಷಾಂತರ ರೂಪಾಯಿ ಗಳನ್ನು ಖರ್ಚು ಮಾಡಿದರು. ಈ ರೀತಿ ಮೆರವಣಿಗೆ ಮಾಡಲು ಅನುಮತಿ ಕೊಟ್ಟಿದ್ದು ಸರಿಯೇ ? ಅದೇ ಕಾರ್ಮಿಕರ ಹಿತರಕ್ಷಣೆ ಮಾಡಲು, ಕಾರ್ಮಿಕರ ಕಷ್ಟಗಳನ್ನು ಸರ್ಕಾರದ ಗಮನಕ್ಕೆ ತರಲು ಮೆರವಣಿಗೆ ಮಾಡುತ್ತೇವೆ, ಅನ್ನಸತ್ಯಾಗ್ರಹ ಮಾಡುತ್ತೇವೆಂದು ಕಾರ್ಮಿಕ ಮುಖಂಡರಾದಂಥ ಮಾನ್ಯ ಕೃಷ್ಣನ್ ಅವರು ಏನಾದರು ಹೇಳಿಕೆ ಕೊಟ್ಟರೆ ಅವರನ್ನು ಕೂಡಲೇ ಅರೆಸ್ಟ್ ಮಾಡುತ್ತಾರೆ. ಇಂತಹ ಒಂದು ಪರಿಸ್ಥಿತಿ.......

ಶ್ರೀ ಎಂ. ಎಸ್. ಕೃಷ್ಣನ್.—ನನ್ನ ಹೆಸರನ್ನು ಇಲ್ಲಿ ಏತಕ್ಕೆ ಹೇಳುತ್ತೀರಿ ? ತಾವು ಇಲ್ಲಿ ಬಡವರ ಬಗ್ಗೆ ಮಾತನಾಡುತ್ತೀರಿ, ಹೊರಗಡೆಯಲ್ಲಿ ಬಂಡವಾಳಗಾರರಿಗೆ ಸಹಾಯ ಮಾಡುತ್ತೀರಿ:

ಶ್ರೀ ಟಿ.ಆರ್. ಶಾಮಣ್ಣ.—ತಾವು ಕಾರ್ಮಿಕರ ಹೆಸರು ಹೇಳಿಕೊಂಡು ಬಂಡವಾಳಗಾರರಿಂದ ಪ್ರತಿಫಲ ಪಡೆಯುತ್ತೀರಿ; ಅದು ಸರಿಯೇ ?

ಶ್ರೀ ಕೋಣಂದೂರು ಲಿಂಗಪ್ಪ.—ಸಂಜಯಗಾಂಧಿಯವರು ಲೆಫ್ಟ್, ರೈಟ್, ಇವೆರಡೂ ಹೋಗಬೇಕೆಂದು ಹೇಳಿದ್ದಾರೆ. ಆ ಬಗ್ಗೆ ತಾವೇನು ಹೇಳುತ್ತೀರಿ ?

ಶ್ರೀ ಟಿ. ಆರ್. ಶಾಮಣ್ಣ.—ಅದರಿಂದ ದೇಶಕ್ಕೆ ಒಳ್ಳೆಯದಾಗುವುದಿದ್ದರೆ ಅದನ್ನು ಒಪ್ಪಿ ಕೊಳ್ಳೋಣ. ಮಾತೆತ್ತಿದರೆ ಪ್ರತಿಗಾಮಿಗಳಿಂದ ದೇಶ ಹಾಳಾಗುತ್ತಿದೆ ಎಂದು ಕಮ್ಯೂನಿಸ್ಟ್ ಪಾರ್ಟಿಯವರು ಹೇಳುತ್ತಿರುತ್ತಾರೆ; ಆ ರೀತಿ ಹೇಳುವ ಬದಲು ತಾವುಗಳು ಬಡವರ ಹಿತಕ್ಕಾಗಿ ಕೆಲಸ ಮಾಡಿ ಎಂದು ಅವರು ಹೇಳಿದ್ದಾರೆ. ನನಗೆ ತಿಳಿದಮಟ್ಟಿಗೆ ಕೇಂದ್ರಸರ್ಕಾರದವರು ತುರ್ತು ಪರಿಸ್ಥಿತಿಯನ್ನು ಜಾರಿಗೆ ತಂದಿದ್ದು ತಮ್ಮ ಪಕ್ಷದಲ್ಲಿಯೇ ಇದ್ದ ಒಡಕನ್ನು ತಡೆಗಟ್ಟುವುದಕ್ಕಾಗಿ ಎಂದು ಹೇಳಿದರೆ ತಪ್ಪಾಗಲಾರದು. ಇದನ್ನು ಜಾರಿಗೆ ತರದಿದ್ದರೆ ಅವರ ಪಕ್ಷ ಒಡೆಯುತ್ತಿತ್ತು, ಅವರ ಪಕ್ಷದಲ್ಲಿಯೇ ಎದುರು ಬೀಳುವಂತಹ ಕೆಲವು ಜನರಿದ್ದರು, ಕೆಲವರು ಶಿಸ್ತಿನಿಂದ ನಡೆದು ಕೊಳ್ಳುತ್ತಿರಲಿಲ್ಲ, ಇದೇ ಕಾರಣದಿಂದ ಉತ್ತರಪ್ರದೇಶದಲ್ಲಿ ಬಹುಗುಣ ಅವರು ಮನೆಗೆ ಹೋದರು, ಬಿಹಾರಿನ ಮುಖ್ಯಮಂತ್ರಿಗಳು ಮನೆಗೆ ಹೋದರು, ಇವರ ಪಕ್ಷದಲ್ಲಿ ಎಷ್ಟರ ಮಟ್ಟಿನ ಶಿಸ್ತಿದೆ ಎಂಬುದು ಇದರಿಂದಲೆ ತಿಳಿಯುತ್ತದೆ, ಇದನ್ನೆಲ್ಲಾ ಸರಿಪಡಿಸಲು ತುರ್ತುಪರಿಸ್ಥಿತಿಯನ್ನು

ಘೋಷಣೆ ಮಾಡಿದರು, ಈಗ ಪ್ರತಿಯೊಂದು ಕೆಲಸಕ್ಕೂ ತಮ್ಮ ನಾಯಕಿಯನ್ನು ಮುಂದಿಟ್ಟುಕೊಂಡು ಹೋಗುತ್ತಿದ್ದಾರೆ. ಇದು ಎಲ್ಲಿಯವರೆಗೆ ಸಾಧ್ಯ ಎಂಬುದನ್ನು ತಿಳಿವಳಿಕಸ್ಥರಾದ ತಾವೇ ಯೋಚನೆ ಮಾಡಿ ನೋಡಬೇಕು. ತಾವುಗಳು ಇದೇರೀತಿ ಅವರ ಹಿಂದೆ ಕುರಿಗಳಂತೆ ಹಿಂಬಾಲಿಸುತ್ತಿದ್ದರೆ, ತಾವು ಮುಂದೆ ಕುರಿಗಳನ್ನು ನೋಡಿಕೊಳ್ಳುವ ಯಜಮಾನನಾಗುವುದಕ್ಕೆ ಸಾಧ್ಯವಾಗುವುದಿಲ್ಲ; ಆದಕಾರಣ ತಾವು ಈ ರೀತಿ ಎಲ್ಲದಕ್ಕೂ ಅವರನ್ನು ಹಿಂಬಾಲಿಸುವ ಪದ್ಧತಿಯನ್ನು ಬಿಟ್ಟು ಜನರಿಗೆ ಒಳ್ಳೆಯದಾಗುವಂತಹ ಕೆಲಸಗಳನ್ನು ಮಾಡಲು ತಾವೇ ಯೋಚನೆ ಮಾಡಬೇಕು. ಈ ತುರ್ತು ಪರಿಸ್ಥಿತಿಯನ್ನು ಆಧಾರವಾಗಿಟ್ಟುಕೊಂಡು ದೇಶದ ಅನೇಕ ನಾಯಕರನ್ನು ಅರೆಸ್ಟ್ ಮಾಡಿದಾರೆ. ಯಾರು ದೇಶದಲ್ಲಿ ಉತ್ತಮ ಕೆಲಸಗಳನ್ನು ಮಾಡಲು ಅಡ್ಡಿ ಮಾಡುತ್ತಾರೋ ಯಾರು ದೇಶದಲ್ಲಿ ಅನಾಯಕತ್ವ ಉಂಟುಮಾಡುವುದಕ್ಕೆ ಪ್ರಯತ್ನ ಮಾಡುತ್ತಾರೋ ಅಂತಹವರನ್ನು ಅರೆಸ್ಟ್ ಮಾಡಬೇಕಾಗುತ್ತದೆ ಅಂತಹವರ ವಿಚಾರದಲ್ಲಿ ಸರ್ಕಾರ ಕ್ರಮ ಕೈಕೊಳ್ಳದೆ ಕೈಕಟ್ಟಿಕೊಂಡು ಕುಳಿತುಗೊಳ್ಳುವುದಕ್ಕೆ ಸಾಧ್ಯವಾಗುವುದಿಲ್ಲ; ಆದರೆ ಯಾರು ದಿಟ್ಟತನದಿಂದ ಮತ್ತು ನಿಷ್ಠೆಯಿಂದ ದೇಶದ ಸೇವೆ ಮಾಡುತ್ತಿದ್ದರೋ ಅಂತಹವರನ್ನು ಸೆರೆಯಲ್ಲಿ ಇಟ್ಟಿರುವುದು ಸರಿಯಲ್ಲ; ಉದಾಹರಣೆಗೆ ಮಾನ್ಯ ಮೊರಾರ್ಜಿದೇಸಾಯಿ ಮತ್ತು ನಮ್ಮ ವಿರೋಧಪಕ್ಷದ ನಾಯಕರಾಗಿದ್ದಂಥ ಶ್ರೀಮಾನ್ ದೇವೇಗೌಡರನ್ನು ಸೆರೆಮನೆಯಲ್ಲಿಟ್ಟಿರುವುದು ಸರಿಯಲ್ಲ,

6.00 P.M.

ತುರ್ತುಪರಿಸ್ಥಿತಿಯನ್ನು ಬಹಳ ಕಾಲ ಮುಂದುವರಿಸಿಕೊಂಡು ಹೋಗುವುದೇ ಆಗಲೀ, ಅದರ ಒಂದು ಆಧಾರದ ಮೇಲೆ ಆಡಳಿತ ನಡೆಸುವುದೇ ಆಗಲೀ ಚೆನ್ನಾಗಿರುವುದಿಲ್ಲ, ಮತ್ತು ಅದು ನಿಜವಾದ ಆಡಳಿತವಾಗುವುದಿಲ್ಲ, ಆದ ಕಾರಣ ಇದನ್ನು ಆದಷ್ಟು ಬೇಗ ಕಿತ್ತುಹಾಕಿ ಜನ ಸಾಮಾನ್ಯರು ಶಾಂತ ರೀತಿಯಿಂದ ಜೀವನ ಮಾಡುವುದಕ್ಕೆ ಅವಕಾಶ ಮಾಡಿಕೊಡಬೇಕೆಂದು ಹೇಳುತ್ತೇನೆ. ಮುಖ್ಯವಾಗಿ ರಾಜ್ಯಪಾಲರ ಭಾಷಣದಲ್ಲಿ ಖಂಡಿತವಾಗಿಯೂ ಜನರಿಗೆ ಒಳ್ಳೆಯದಾಗುವಂತ ಅಂಶಗಳು ಹೆಚ್ಚು ಇಲ್ಲ ಎಂದು ಹೇಳಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

MR DEPUTY SPEAKER.—The House now stands adjourned to meet tomorrow at 1-00 P.M.

(The House adjourned at Two Minutes past Six of the clock to meet again at One of the Clock on Thursday the 5th February 1976).